ಕೊಡಗು ಸಂಗಾತಿ

ಏಪ್ರಿಲ್ 1 ರಿಂದ 30, 2003 ಪಾಕ್ಷಿಕ ಪತ್ರಿಕೆ (ಸುಗ್ಗಿ 18-30 ಪಗ್ಗು 1-17)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭


ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

R.No. KA/SK/MYS-88/2003 ಸಂಪುಟ : 7 ಸಂಚಿಕೆ : 1-2 ಪುಟಗಳು : 24 ಬೆಲೆ ರೂ. : 12-00
















: ಲೇಖನ ಒಳಪುಟದಲ್ಲಿ


ಕೊಲ್ಲಿ ಸಮರ 3ನೇ ಜಾಗತಿಕ ಯುದ್ಧಕ್ಕೆ ನಾಂದಿಯೇ?

ಕೊಡಗು ಸಂಗಾತಿ ತನ್ನ 7ನೇ ವರ್ಷಕ್ಕೆ ಪಾದಾರ್ಪಣೆ.

ಸಹಕರಿಸಿದ ಹಿತೈಷಿಗಳಿಗೆಲ್ಲರಿಗೂ ಯುಗಾದಿಯ ಶುಭ ಹಾರೈಕೆಗಳು.

ಶುಭಾಶಯಗಳು

ದಿನಾಂಕ 20-2-2003 ರ ಗುರುವಾರ ನಮ್ಮ ಮಕ್ಕಳ ಮದುವೆ ಶುಭಕಾರ್ಯವು ಮೈಸೂರಿನ ಹೆಬ್ಬಾಳ್ ಬಡಾವಣೆಯ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧಾರಮೂಹೂರ್ತವು ಮತ್ತು ಮೈಸೂರು ನಗರದ ಹೊಟೇಲ್ ದಾಸ್ ಪ್ರಕಾಶ್‌ನಲ್ಲಿ ನಡೆದ ಆರತಕ್ಷತೆ ಕಾರ್ಯಕ್ರಮದಲ್ಲಿ ನೀವೆಲ್ಲಾ ಬಂದು ವಧು ವರರಿಗೆ ಆಶೀರ್ವದಿಸಿದ್ದೀರಿ. ನಮಗಳಿಗೆಲ್ಲಾ ತುಂಬು ಧನ್ಯತೆಯನ್ನು ತಂದಿದೆ. ನೀವುಗಳಿಗೆಲ್ಲಾ ನಮ್ಮ ಕುಲಗುರು ವೆಂಕಟರಮಣ ಮತ್ತು ಶೃಂಗೇರಿ ಶಾರದಾಂಬೆಯರ ಕೃಪಾ ಕಟಾಕ್ಷ ಸದಾ ಇದ್ದು ಐಶ್ವರ್ಯ ಆಯಿರಾರೋಗ್ಯ ಸುಖ ಸಂಪತ್ತು ನೀಡಿ ಸಹಕರಿಸಲಿ ಎಂದು ಈ ಮೂಲಕ ನಾವುಗಳು ಶುಭ ಹಾರೈಸುತ್ತೇವೆ.



ದೇವಿ ಪ್ರಸಾದ್ ಮತ್ತು ಛಾಯಾವತಿ

ಯಿಂದ :
ಸೂಂತೋಡು ಚಂದ್ರಶೇಖರ್
ಶ್ರೀಮತಿ ಶೈಲಜಾ ಚಂದ್ರಶೇಖರ್
ಶ್ರೀ ಪ್ರವೀಣ್ ಚಂದ್ರಶೇಖರ್
ಮೈಸೂರು -16
Ph. : 301911

ಯಿಂದ :
ಶ್ರೀ ಗೋವಿಂದ ಹಾಗೂ
ಶ್ರೀಮತಿ ಗಾಯತ್ರಿ
ಮೈಸೂರು



Sub. Lt.ಕೊಡಪಾಲು ಬಾಲಕೃಷ್ಣ ಕಿರಣ್, B E.

ಶುಭ ಹಾರೈಕೆ : ಕೊಡಪಾಲು ಕಿರಣ್ ಬಾಲಕೃಷ್ಣ

ಕೊಡಗಿನ ಕಾರುಗುಂದ ಗ್ರಾಮದ ಕೊಡಪಾಲು ಬಾಲಕೃಷ್ಣ ಮತ್ತು ಉಮಾವತಿ ದಂಪತಿಗಳ ಮಗ ಕಿರಣ್, ಇವರು ಭಾರತೀಯ ನೌಕದಳದಲ್ಲಿ ಸಬ್ ಲೆಫ್ಟಿನೆಂಟ್‌ಆಗಿ ದಿನಾಂಕ 29-11-2002 ರಿಂದ ಬೊಂಬಾಯಿಯ ಲೋನವಾಲದ INS ಶಿವಾಜಿಯಲ್ಲಿ ಸೇವೆಸಲ್ಲಿಸುತ್ತಿರುವರು. ಇವರಿಗೆ ಶುಭ ಕೋರುವವರು

ತಂದೆ : ಕೊಡಪಾಲು ಬಾಲಕೃಷ್ಣ ಮತ್ತು ತಾಯಿ ಉಮಾವತಿ
ತಂಗಿ : ಟೀನಾ ಬಾಲಕೃಷ್ಣ
Address : No. 173, 'A' Block, III Stage, Vijayanagar, Mysore - 17, Ph. : 0821/519371



ದಿ|| ಎ. ಎ. ಪ್ರಕಾಶ್
ಜನನ : 22-5-1970
ಮರಣ : 29-4-2001

2 ನೇ ವರ್ಷದ ಚಿರಸ್ಮರಣೆ
ಹುತಾತ್ಮ ಅಮೆಮನೆ ಅಪ್ಪಾಜಿ ಪ್ರಕಾಶ್

ನನ್ನ ಏಕೈಕ ಮುದ್ದಿನ ಮಗ ಅಪ್ಪಿ ನೀನು ಅರುಳುವ ಮೊದಲೇ ಬಾಡಿ ಹೋದ ಹೂವಿನಂತೆ ಜೀವನದ ಸವಿಯನ್ನು ಅನುಭವಿಸುವ ಮೊದಲೇ ಆ ಭಗವಂತ ನಿನ್ನನ್ನು ಕರೆದೊಯ್ದು ಎರಡು ವರ್ಷ ಕಳೆಯಿತು. ನಾನು ಪ್ರತಿದಿನವೂ ನಿನ್ನದೆ ಯೋಚನೆಯಲ್ಲಿ ಕಾಲ ತಳ್ಳುತ್ತಿರುವೆ. ಏಕಾಂಗಿಯಾಗಿ ದುಃಖಿಸುತ್ತಿರುವೆ.ನನ್ನ ಕರುಳ ಕುಡಿಯೆ ನನ್ನ ದುಃಖವನ್ನು ಯಾರಲ್ಲಿ ಹೇಳಲಿ. ನನ್ನನ್ನು ತಬ್ಬಲಿ ಮಾಡಿ ಹೋದರು ನಿನ್ನಾತ್ಮಕ್ಕೆ ಆ ಭಗವಂತನು ಅನುದಿನವು ಚಿರಶಾಂತಿಯನ್ನು ಕರುಣಿಸಲೆಂದು ದಿನವು ಬೇಡುತ್ತಾ, ನಿನ್ನ ನೆನಪಿನ ಕಣ್ಣಂಚಿನಲ್ಲಿ ನೀರು ಸುರಿದರು ಸೈಸುತ್ತಾ ಕಾಲ ತಳ್ಳುತ್ತಿರುವ ನಿನ್ನ ಪ್ರೀತಿಯ ಅವ್ವ.

ತಾಯಿ - ಪಾರ್ವತಿ, ಮಡಿಕೇರಿ *Ph. : 08272/229225*

2003, ಏಪ್ರಿಲ್ 1 ರಿಂದ 30ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	ಕೊಡಗು ಸಂಗಾತಿ, 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. ಫೋನ್: 0821/404290 2404290 ಕಾವೇರಿ ಆಟೋಮೊಬೈಲ್, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 ಫೋನ್: 416790 2416790
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್	ಬೈತಡ್ಕ ಜಾನಕಿ ಬೆಳ್ಯಪ್ಪ,, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : 08272/228047 ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/229620
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/673370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಪಿನಗರ, ಬೆಂಗಳೂರು -560 006 Mobile : 94482 25160

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 12ರೂ.

ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ

: ಕೊಡಗಿನ ನಿಜವಾದ ನೈಸರ್ಗಿಕ ಸಂಪನ್ಮೂಲಗಳ ಬಳಕೆಯಾಗಬೇಕು - ಆಗಲೇ ನಿಜವಾದ ಕೊಡಗು ನಮ್ಮದು

ಕೊಡಗಿನ ಪ್ರಕೃತಿಯ ಕೊಡುಗೆಯನ್ನು ಶೇಖರಿಸಿ ಅವುಗಳನ್ನು ಉಪಯೋಗಿಸಿ ಹಾಗೂ ಹೊರ ಊರುಗಳ ಮಾರುಕಟ್ಟೆಗಳಿಗೆ ಸರಬರಾಜು ಮಾಡುವ ಇವುಗಳಿಂದ ಪ್ರತಿಯೊಬ್ಬ ರೈತ ಕುಂಟುಬಗಳಿಗೆ ಆರ್ಥಿಕ ಹೆಚ್ಚಳವನ್ನು ಏರ್ಪಡಿಸುವ ವಿಷಯದಲ್ಲಿ ಜಿಲ್ಲೆಯ ಬುದ್ಧಿವಂತರು ವ್ಯವಸಾಯ ಹಾಗೂ ತೋಟಗಾರಿಕೆ ಹಾಗೂ ಸಂಬಾರ ಬೆಳೆಗಳ ಇಲಾಖೆಯವರು ಹೊಸ ಹೊಸ ಪರಿಶೋಧನೆಗಳನ್ನು ಕಂಡು ಹಿಡಿದು ವಿನಾಕಾರಣವಾಗಿ ಹಾಳಾಗಿ ಕೊಳೆತು ಹೋಗುವುದನ್ನು ತಡೆಗಟ್ಟಲು ವಿಫಲವಾಗಿವೆ.

ಉದಾಹರಣೆಗೆ ಕೊಡಗಿನ ಅರಣ್ಯಗಳಲ್ಲಿ ಯಥೇಚ್ಛವಾಗಿ ಸಿಗುವ ನೆಲ್ಲಿಕಾಯಿ, ಕಾಡು ಹಲಸಿನ ಕಾಯಿ, ಹಣ್ಣು, ಹಲಸಿನ ಬೀಜ ಕಂಯುಣಿ ಹಡ್ಲುಣಿ ಕಾಡುಮಾವಿನಕಾಯಿ, ಮಾವಿನ ಹಣ್ಣು, ಪಣಪುಳಿ, ವಾಟೆಪುಳಿ, ಜೀರುಂಗುಳಿ, ಹಂಣು, ಮಜ್ಜಿಗೆ ಹಣ್ಣು, ಬೀರುಂಗುಳಿ, ಯಥೇಚ್ಛವಾಗಿ ಸಿಗುವ ಇತರೆ ಹುಳಿ ಇರುವ ವಸ್ತುಗಳನ್ನು ಹಾಗೂ ಮಳೆಗಾಲದಲ್ಲಿ ಬರುವ ಕಿತ್ತಳೆ ಹಣ್ಣು ನಿಂಬೆಹಣ್ಣು ಮುಂತಾದವುಗಳನ್ನು ಆಯಾಯ ಋತುಗಳಲ್ಲಿ ಸಂಗ್ರಹಿಸಿ ಅವುಗಳನ್ನು ಉಪಯೋಗಿಸುವ ಹಾಗೂ ಶೇಖರಿಸುವ ಕ್ರಮಗಳನ್ನು, ಇವುಗಳನ್ನು ಹೊಂದಿರುವವರಿಗೆ ಸರಿಯಾದ ಮಾರ್ಗದರ್ಶನ ನೀಡಿ ಅಲ್ಲಲ್ಲಿ ಶೇಖರಿಸುವ ಹಾಗೂ ಉಪಯೋಗಿಸಿ ಹೆಚ್ಚಾದ ವಸ್ತುಗಳನ್ನು ಬೇರೆ ಊರುಗಳಿಗೆ ಹಾಗೂ ಬೇರೆ ದೇಶಗಳಿಗೆ ವೈಜ್ಞಾನಿಕವಾಗಿ ಸಂಸ್ಕರಿಸಿ ರಫ್ತು ಮಾಡಬೇಕು.

ಕಾಡುಗಳಲ್ಲಿ ಹಾಗೂ ತೋಟಗಳ ಬದಿಯಲ್ಲಿ ಬೆಳೆಯುತ್ತಿರುವ ರಕ್ಕಸಿ ಪಟ್ಟೆಯ ನಾರನ್ನು ತೆಗೆದು ಇದರಿಂದ ಉತ್ಪಷ್ಟವಾದ ಹಗ್ಗಗಳನ್ನು ತಯಾರಿಸುವ, ಈ ನಾರಿನಿಂದ ಕೈ ಚೀಲ ಮುಂತಾದವುಗಳನ್ನು ಹೆಣೆಯುವ, ತೋಟಗಳ ಬದಿಯಲ್ಲಿ ಬೆಳೆಯುವ ಚೋಳಿಹಣ್ಣು (ಅನಾನಸು) ಗಿಡಗಳ ನಾರನ್ನು ತೆಗೆದು ಚೀಲಗಳನ್ನು ಹಾಗೂ ಹುರಿಯನ್ನು ತಯಾರಿಸುವ ನೊಜ ಹುಲ್ಲಿನಿಂದ ವಿವಿಧ ವಿನ್ಯಾಸದ ಚೀಲ ಮತ್ತು ಬುಟ್ಟಿಗಳನ್ನು ಹೆಣೆಯುವ ಕುಶಲ ಕಲೆಗಳನ್ನು ಯುವಕ ಯುವತಿಯರಿಗೆ ಹೇಳಿಕೊಟ್ಟು, ಅವರು ಅವುಗಳನ್ನು ತಯಾರಿಸುವ ಏರ್ಪಾಡನ್ನು ಮಾಡಬೇಕು.

ಇದೂ ಅಲ್ಲದೆ ಕೊಡಗಿನ ಗದ್ದೆಗಳ ಬದಿಗಳಲ್ಲಿ ಯಥೇ ಚ್ಛವಾಗಿ ಮಳೆಗಾಲದಲ್ಲಿ ಬೆಳೆಯುವ ಹಸಿರು ಹುಲ್ಲನ್ನು ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ ಸೈಲೇಜ್ ಗುಂಡಿಗಳನ್ನು ಮಾಡಿ ಅವುಗಳಲ್ಲಿ ಕ್ರಮಪ್ರಕಾರವಾಗಿ ತಯಾರಿಸಿದರೆ, ಬೇಸಿಗೆ ಕಾಲದಲ್ಲಿ ಹುಲ್ಲು ಒಣಗಿ ಹೋದ ಕಾಲದಲ್ಲಿ ರುಚಿಯಾದ ಸೈಲೇಜ್ ಹುಲ್ಲನ್ನು ದನಕರುಗಳಿಗೆ ಹಾಕಿ ಗೋ ಸಂಪತ್ತನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ. ಕೊಡಗಿನ ಮಲೆನಾಡಿನ ಪ್ರದೇಶಗಳಲ್ಲಿ ಬೆಳೆಯುವ ವಾಟೆ, ದೊಂಬ್‌ವಾಟೆ, ಕಲ್ಲ್‌ವಾಟೆ, ಬಿದಿರು, ಸೀಮೆ ಬಿದಿರು, ಕಿರ್‌ಬೆತ್ತ, ದೊಡ್ಡಬೆತ್ತ, ಹಾಲ್‌ಬೆತ್ತ, ಹಂದಿಬೆತ್ತ, ನಾಗಬೆತ್ತ, ನೆಟ್ಟಿಕಡ್ಡಿ, ನೆಟ್ಟಿಕಾಯಿ ಚಿರಿ, ಚೀಪೆಗಿಡಗಳು, ಮಳೆಗಾಲದಲ್ಲಿ ಉಪಯೋಗಿಸಲ್ಪಡುವ ಗೊರಗುಗಳ ಉಪಯೋಗಕ್ಕೆ ಬೇಕಾದ ಕೂಗಲೆ ಇತ್ಯಾದಿಗಳ ಕೃಷಿಗಳು ಪುನಶ್ಚೇತ್ತನಗೊಂಡರೆ ಸುಮಾರಾದ ಈ ಕುಶಲ ಕಲೆಗಳು ಉಳಿದುಕೊಳ್ಳಲು ಸಾಧ್ಯವೇನೊ?

ಮಹಿಳಾ ಮತ್ತು ಮಕ್ಕಳ ಇಲಾಖೆಗಳಲ್ಲಿ ಮೇಲೆ ಹೇಳಿದ ಎಲ್ಲಾ ರೀತಿಯ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ತಕ್ಕ ಸೌಕರ್ಯವನ್ನು ಕಲ್ಪಿಸಿದಲ್ಲೂ ಬೇರೆ ಬೇರೆ ಇಲಾಖೆಗಳು ಒಂದಕ್ಕೊಂದು ಸಂಪರ್ಕ ಇಟ್ಟುಕೊಂಡು ಈ ಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ಅನುಷ್ಠಾನಕ್ಕೆ ತಂದರೆ ಯಾವುದಕ್ಕೂ ಪ್ರಯೋಜನವಿಲ್ಲದೆ ತಮಗರಿವಿಲ್ಲದೆ ನಾಶವಾಗುವ ಈ ಅಮೂಲ್ಯ ನೈಸರ್ಗಿಕ ಸಸ್ಯ ಸಂಪತ್ತನ್ನು ಉಳಿಸುವುದಲ್ಲದೆ, ಅದನ್ನು ಹೊಂದಿರುವ ರೈತರಿಗೂ ಆರ್ಥಿಕವಾಗಿ ಪ್ರಯೋಜನವಾಗಬಹುದು.

ಈ ಮೇಲೆ ತಿಳಿಸಿರುವ ಹೆಚ್ಚಿನ ಎಲ್ಲಾ ವಸ್ತುಗಳು ಕೊಡಗಿನ ಪರಿಸರದಲ್ಲಿ ಎಲ್ಲಾ ಕಡೆ ಬೆಳೆಯುತ್ತದೆ. ಹಾಗಾಗಿ ಆಯಾಯ ಗ್ರಾಮ ಮಟ್ಟದಲ್ಲಿ ಇವುಗಳ ಉಪಯೋಗವನ್ನು ಸ್ವಸಹಾಯ ಸಂಘಗಳ ಮೂಲಕ ಸರ್ಕಾರದ ಇಲಾಖೆಗಳ ಸಹಕಾರದಿಂದ ನಶಿಸುವ ಗ್ರಾಮೀಣ ಕುಶಲ ಕಲೆಗಳನ್ನು ಉಳಿಸಬಹುದು. ಪ್ರತಿ ಊರಿನಲ್ಲಿ ಗೌಜು ಗದ್ದೆಗಳು, ಹಡ್ಲು ಭೂಮಿಗಳು ಕೆರೆಗಳ ಕೆಳಭಾಗ, ಮಕ್ಕಿ , ಬಯಲು, ಕುಮೇರಿ, ಗೆರೆಗಾಡ್‌ಗಳು, ವನಮೇಯಿಸಲು ಬಿಟ್ಟಿರುವ ತುಂಡು ಜಾಗಗಳಿಗೆ ನೀರುಣಿಸಿ ಕೃಷಿ ಮಾಡಿದಲ್ಲಿ ಖಂಡಿತ ಈ ಎಲ್ಲಾ ಕಳೆಗಳಿಗೆ ಮರು ಜೀವ ನೀಡಬಹುದು. ಕೊಡಗಿನಲ್ಲಿ ಹೆಚ್ಚಿನ ಕೃಷಿಕರಿಗೆ ತಮ್ಮ ಜಮೀನಿನಲ್ಲಿರುವ ನೈಸರ್ಗಿಕ ಸಂಪತ್ತಿನ ಜ್ಞಾನವಿಲ್ಲದಿರುವುದು. ಅದನ್ನೇ ಆಧುನೀಕರಣದ ಜೊತೆಗೆ ಹಿಂದಿನ ಕುಶಲ ಕಲೆಗಳನ್ನು ನೆನೆಸಿ ಚರ್ಚಿಸಿ ಮಂತಿಸಿದರೆ ಖಂಡಿತವಾಗಿ ರೈತನ ಆರ್ಥಿಕ ಸ್ಥಿತಿ ಸುಧಾರಿಸಲು ಸಹಕಾರಿಯಾಗುವುದೆಂದು ಸಂಗಾತಿಯ ದೃಢ ನಿಲುವಿನ ಅಭಿಪ್ರಾಯವಾಗಿದೆ.

ಗೌಡ ಜಾತಿಯ ನ್ಯಾಯಪೀಠಗಳು ಬೇಕೆ ?

2003, ಜನವರಿ ತಿಂಗಳ ಕೊಡಗು ಸಂಗಾತಿ ಪತ್ರಿಕೆಯಲ್ಲಿ ಗೌಡರಿಗೆ ಒಂದು ನ್ಯಾಯಪೀಠ ಬೇಕೆಂದು ಬರೆದುದ್ದೇನೋ ಸರಿ. ಆದರೆ ಅದನ್ನು ಯಾರು ನಿರ್ವಹಿಸುವುದು? ನ್ಯಾಯಪೀಠಕ್ಕೆ ಅಧಿಕಾರ ವ್ಯಾಪ್ತಿ ಏನು ಎಂಬುದನ್ನು ತಿಳಿಸಿಲ್ಲ.

ಭಾರತದಲ್ಲಿ ಗ್ರಾಮ ನ್ಯಾಯ ಮಂಡಳಿಗಳು ವೇದಗಳ ಕಾಲದಿಂದಲೂ ಸ್ವಲ್ಪ ಮಟ್ಟಿಗೆ ಇದ್ದರೂ ಸಹ ಗುಪ್ತರ ಕಾಲದಲ್ಲಿ ಚೋಳರ ಕಾಲದಲ್ಲೂ ಮತ್ತು ವಿಜಯನಗರ ಅರಸರ ಕಾಲದಲ್ಲಿ ನ್ಯಾಯ ಮಂಡಳಿಗಳು ಅಸ್ತಿತ್ವಕ್ಕೆ ಬಂದಿದ್ದವು. ವಿಜಯನಗರದ ಕಾಲದಲ್ಲಿಯೇ ಪ್ರತೀ ಜಾತಿಗೊಂದು ಕಟ್ಟೆ ಮನೆ ಇತ್ತು. ಅದೇ ರೀತಿ ಗೌಡರಲ್ಲಿಯೂ ಕಟ್ಟೆ ಮನೆ ಪದ್ಧತಿ ಇದ್ದು, ಈಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೆ. ಕರ್ನಾಟಕದಲ್ಲಿ ಈ ಜಾತಿ ನ್ಯಾಯ ಮಂಡಳಿ ಎಲ್ಲಾ ಜಾತಿಗಳಲ್ಲೂ ಇವೆ.

ಕೊಡಗಿನಲ್ಲಿ ಕೊಡಗರಲ್ಲಿ ದೇಶತಕ್ಕ, ನಾಡ್‌ತಕ್ಕ, ಊರ್‌ತಕ್ಕ ಎಂದು ಕೊಡವ ಜಾತಿಯಲ್ಲಿಯೂ ಇದೆ. ಇದೇ ತಕ್ಕ ಮುಖ್ಯಸ್ಥರ ಪದ್ಧತಿ ಈಗಲೂ ಊರಿನ ಹಬ್ಬಗಳಲ್ಲಿ ಆಚರಿಸಲ್ಪಡುತ್ತದೆ. ಆದರೆ ಕೊಡಗಿನ ಗೌಡರು ತಮ್ಮ ಜಾತಿಯ ಪದ್ಧತಿಯ ಕಟ್ಟು, ಕಟ್ಟಳೆಯ ವಿಷಯ ಊರು ಗೌಡ, ಮಾಗಣೆಗೌಡ ಮತ್ತು ಕಟ್ಟೆಮನೆ ಗೌಡರ ಪದ್ಧತಿಯನ್ನು ಸಾಧಾರಣ 80-90 ವರ್ಷಗಳ ಹಿಂದೆಯೇ ಬಿಟ್ಟು, ಕಟ್ಟೆ ಮನೆ ಪದ್ಧತಿಯನ್ನು ಪೂರ್ತಿ ಮರೆತಿದ್ದಾರೆ.

ಈ ರೀತಿ ಜಾತಿಯ ಕಟ್ಟೆಮನೆ ಪದ್ಧತಿ ಬಿಟ್ಟದ್ದರಿಂದ ಜಾತಿಯ ಪದ್ಧತಿಗಳು ಬಿಟ್ಟು ಹೋಗಿ ಯುವಕ-ಯುವತಿಯರಿಗೆ ಪದ್ಧತಿ ಏನೆಂಬುದೇ ತಿಳಿಯದಾಗಿದೆ. ಇದರಿಂದಾಗಿ ಈಗಿನ ಪೀಳಿಗೆ ನವ ನಾಗರೀಕತೆಯ ಹಾಗೂ ಪಾಶ್ಚಾತ್ಯ ಅನುಕರಣೆ ಅವಲಂಬನೆಯಿಂದಾಗಿ ಅಳಿವಿನ ಅಂಚಿನಲ್ಲಿರುವುದನ್ನು ತಪ್ಪಿಸುವುದಕ್ಕೆ ಗ್ರಾಮ ಗ್ರಾಮಗಳಲ್ಲಿ ಗ್ರಾಮ ಗೌಡಸಮಾಜ ಇದರ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು. ಯುವಕ ಯುವತಿಯರಿಗೆ ನಮ್ಮಲ್ಲಿರುವ ಪದ್ಧತಿಗಳನ್ನು ಬರೇ ಯಾಂತ್ರಿಕವಾಗಿ ಆಚರಿಸುತ್ತಿರುವುದಲ್ಲ, ಅದಕ್ಕೆ ವೈಜ್ಞಾನಿಕವಾದ ಹಾಗೂ ತಾತ್ವಿಕ ನೆಲೆಗಟ್ಟುಗಳ ಗುಣಗಳಿವೆ ಎಂಬುದನ್ನು ಅರಿವಾಗುವಂತೆ ತಿಳಿಹೇಳಬೇಕು. ಇದಕ್ಕೆ ಗ್ರಾಮ ಗ್ರಾಮಗಳಲ್ಲಿ ಗ್ರಾಮ ಗೌಡ ಸಮಾಜವನ್ನು ಸ್ಥಾಪಿಸಿ ಅವುಗಳ ಮುಖಾಂತರ ಈ ಕಾರ್ಯವನ್ನು ಮಾಡಬೇಕು.

ಈ ರೀತಿ ಹಿಂದೆ ಇದ್ದ ಗ್ರಾಮ ಗೌಡ, ಮಾಗಣೆಗೌಡ ಹಾಗೂ ನಾಡ್‌ಗೌಡ (ಕಟ್ಟೆಮನೆ) ಪದ್ಧತಿ ಕೊಡಗಿನಲ್ಲಿ ಸಾಧಾರಣ 100 ವರ್ಷಗಳ ಹಿಂದೆಯೇ ನಿಂತುಹೋಗಿದೆ. ನಿಂತುಹೋದರೂ ಪದ್ಧತಿಗಳ ಅನುಷ್ಠಾನಗಳಲ್ಲಿ ತಪ್ಪಾದರೆ ಸಂಬಂಧ ಪಟ್ಟವರು ಪಂಚಾಯಿತಿ ಸೇರಿಸಿ ತಪ್ಪು ಮಾಡಿದವರಿಗೆ ಶಿಕ್ಷೆ ನೀಡುತ್ತಿದ್ದರು. ಆದರೆ ಈಗ 50-60 ವರ್ಷಗಳಿಂದೀಚೆಗೆ ಪದ್ಧತಿಗಳು, ತಪ್ಪಾದರೆ ಅಥವಾ ತಪ್ಪಾಗಿ ನಡೆದುಕೊಂಡವರನ್ನು ಕೇಳುವವರೇ ಇಲ್ಲದಂತಾಗಿದೆ. ಪ್ರತಿಯೊಬ್ಬರು ಅವರವರ ಅಭಿಪ್ರಾಯದಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಇದನ್ನು ಹಿಂದಿನ ಗ್ರಾಮ ಗೌಡ ಪದ್ಧತಿಯ ಬದಲು ಗೌಡ ಸಮಾಜಗಳನ್ನು ಪ್ರತಿ ಗ್ರಾಮದಲ್ಲಿ ಸ್ಥಾಪಿಸಿ ಆ ಸಮಾಜಗಳ ಮುಖಾಂತರ ಪದ್ಧತಿಗಳ ಅನುಷ್ಠಾನಗಳಿಗೆ ಪ್ರಯತ್ನಿಸಬೇಕು.

ತದನಂತರ ಹೋಬಳಿ, ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಗೌಡ ಸಮಾಜಗಳು ಸ್ಥಾಪಿತವಾಗಬೇಕು. ಗ್ರಾಮದ ಗೌಡ ಸಮಾಜಗಳು ತಮ್ಮ ಗ್ರಾಮದ ಗೌಡ ಪದ್ಧತಿಗಳನ್ನು ಜನರಿಗೆ ತಿಳಿಯ ಹೇಳಿ ಅವುಗಳ ಅನುಷ್ಠಾನಕ್ಕೆ ಪ್ರಯತ್ನಿಸಬೇಕು. ಗ್ರಾಮದ ಗೌಡ ಸಮಾಜವು ಗ್ರಾಮದ ಸದಸ್ಯರು ಮಾಡಿದ ತಪ್ಪಿಗೆ ಶಿಕ್ಷೆ ಕೊಡಬೇಕು. ಈ ರೀತಿ ಕೊಟ್ಟ ಶಿಕ್ಷೆಯ ವಿಷಯದಲ್ಲಿ ಅತೃಪ್ತಿ ಪಟ್ಟರೆ, ಹೋಬಳಿ ಅಥವಾ ತಾಲೂಕಿನ ಗೌಡ ಸಮಾಜಕ್ಕೆ ಮೇಲ್ಮನವಿ ಹೋಗಬೇಕು. ಅಲ್ಲಿಯೂ ಸರಿಯಾದ ತೀರ್ಪು ಸಿಗದಿದ್ದರೆ ಜಿಲ್ಲಾ ಗೌಡ ಸಮಾಜಕ್ಕೆ ಮೇಲ್ಮನವಿ ಸಲ್ಲಿಸಬೇಕು. ಜಿಲ್ಲಾ ಗೌಡ ಸಮಾಜದ ತೀರ್ಪೇ ಅಂತಿಮವಾಗಿರಬೇಕು.

ಈ ರೀತಿಯ ಜಾತಿ ಪದ್ಧತಿಗಳ ಹಾಗೂ ಸಾಂಸ್ಕೃತಿಕ ವಿಷಯದಲ್ಲಿ ವಿಕೇಂದ್ರಿಕರಣ ರೀತಿಯಲ್ಲಿ ಕೆಲಸ ಕಾರ್ಯ ನಡೆಯಬೇಕು. ಹೀಗೆ ಮಾಡಬೇಕಾದರೆ ಪ್ರತಿ ಗ್ರಾಮದಲ್ಲಿ ಐಕ್ಯತೆಯ ಸಂಘಟನೆಯಾಗಬೇಕು. ಈಗಿನ ಕಾಲದಲ್ಲಿ ಈ ರೀತಿಯ ಸಂಘಟನೆಗಳು ಸುಲಭ ಸಾಧ್ಯ. ಹಿಂದಿನಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಾಲು ನಡಿಗೆಯಲ್ಲೊ ಎತ್ತಿನ ಗಾಡಿಯಲ್ಲೊ ಹೋಗುವ ಸಂದರ್ಭ ಈಗಿಲ್ಲ.

ಮುಖ್ಯವಾದ ಸಂಗತಿಯೆನೆಂದರೆ ಪ್ರತಿ ಗ್ರಾಮದಲ್ಲೂ ಇಂತಹ ವಿಷಯಗಳನ್ನು ವ್ಯವಸ್ಥೆ ಮಾಡುವ ಸಮ ಮನಸ್ಕ ಜನರು ಬೇಕು. ಕೊಡಗಿನ ರಾಜರ ಕಾಲದಲ್ಲೂ ಈ ರೀತಿಯ ಜಾತಿಯ ಪದ್ಧತಿಗಳ ಬಗ್ಗೆ ಲಿಂಗಾರಾಜರ ಕಾಲದಲ್ಲೂ ಹಾಗೂ 1911, 1913 ರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡದ ಜಿಲ್ಲೆಯ ಗೌಡರ ಮುಖಂಡರೂ ಸೇರಿ ಶೃಂಗೇರಿ ಜಗದ್ಗುರು ಶ್ರೀ ಶಂಕರಾರ್ಯರ ಮುಖಾಂತರ ಪದ್ಧತಿಗಳನ್ನು ಕ್ರೋಢಿಕರಿಸಿ ಒಂದು ನಿರೂಪವನ್ನು ತಯಾರಿಸಿ ಈ ತೀರ್ಮಾನದ ರೀತಿಯಲ್ಲಿ ಈಗಿನ ಪದ್ಧತಿಗಳನ್ನು ಬಾಯಿ ಮಾತಿನ ಪ್ರಕಾರ ಒಬ್ಬರಿಂದ ಇನ್ನೊಬ್ಬರಿಗೆ ಹೇಳಿ ನಡೆದುಕೊಂಡು ಬಂದಿದೆ.

ಜಾತಿಯ ನ್ಯಾಯಪೀಠಗಳು ಹೇಳಿದ ಸಿವಿಲ್ ನ್ಯಾಯಾಲಯಗಳಂತೆ ಕಾನೂನಿನ ಮೂಲಕ ತೀರ್ಮಾನಿಸಲು ಸಾಧ್ಯವಿಲ್ಲ. ಜಾತಿಯ ನ್ಯಾಯಪೀಠದಲ್ಲಿ ತಮ್ಮ ಪದ್ಧತಿಗಳಲ್ಲಿ ತಪ್ಪಿ ಹೋದವನ್ನು ಸರಿಪಡಿಸುವುದಕ್ಕೆ ಮಾತ್ರ ಸೀಮಿತವಾಗಿರಬೇಕೆ ಹೊರತು ಆಸ್ತಿಗಳ ಅಥವಾ ಹಣಕಾಸಿನ ವಿಷಯವನ್ನು ಅಳವಡಿಸುವುದಕ್ಕೆ ಸಾಧ್ಯವಿಲ್ಲ.

ಹೇಗೂ ಇರಲಿ ಕೊಡಗು ಸಂಗಾತಿ ಪತ್ರಿಕೆಯ ಸಂಪಾದಕೀಯ ಮುಖಾಂತರ ಜನಾಂಗದವರನ್ನೂ ಸೂಕ್ಷ್ಮವಾಗಿ ಎಚ್ಚರಿಸಿದ್ದುದಕ್ಕೆ ಸಂಪಾದಕಿಯವರನ್ನು ನಾನು ಮನಪೂರ್ವಕವಾಗಿ ಶ್ಲಾಘಿಸುತ್ತೇನೆ.

ಲೇಖಕ : ಪ್ರೊ|| ಪೂಜಾರಿ ಮೊಣ್ಣಪ್ಪ, ಬೆಂಗಳೂರು.

ಮಾಲ್ಥಸ್ ಜನಸಂಖ್ಯಾ ಸಿದ್ಧಾಂತ, ಭಾರತ ಮತ್ತು ಏಡ್ಸ್



ಆಂಗ್ಲ ಅರ್ಥ ಶಾಸ್ತ್ರಜ್ಞ ಟಿ. ಆರ್. ಮಾಲ್ಥಸ್ ೧೭೯೮ ರಲ್ಲಿ ಜನಸಂಖ್ಯೆಯನ್ನು ಕುರಿತು ಒಂದು ಪ್ರಬಂಧವನ್ನು ಪ್ರಕಟಿಸಿದರು. ಇದು ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಅದರಿಂದ ಉದ್ಭವಿಸ ಬಹುದಾದ ಸಮಸ್ಯೆಗಳನ್ನು ಕುರಿತು ಕ್ರಮಬದ್ಧವಾಗಿ ರಚಿಸಿದ ಕೃತಿ. ಮಾಲ್ಥಸ್ ರವರ ಜನಸಂಖ್ಯೆಯನ್ನು ಕುರಿತ ಗ್ರಂಥವು ಹೊರಬಂದ ದಿನದಿಂದ ಜನರ ಗಮನವೆಲ್ಲ ಜನಸಂಖ್ಯೆಯ ಸಮಸ್ಯೆಗಳತ್ತ ಹರಿಯತೊಡಗಿತು. ವಾದ ವಿವಾದಗಳು ಪ್ರಾರಂಭವಾದವು. ಜನತೆಯ ಕಲ್ಯಾಣದ ಬಗ್ಗೆ ಯೋಜನೆಗಳನ್ನು ರೂಪಿಸಲು ಸಿದ್ಧತೆಯನ್ನು ನಡೆಸಲಾಯಿತು. ಮಾಲ್ಥಸ್‌ರ ವಾದ ಸರಣಿಯು ಜನಸಂಖ್ಯೆಯ ಹೆಚ್ಚಳ ಮತ್ತು ಆಹಾರ ಸಾಮಾಗ್ರಿಯ ಸಂಬಂಧವನ್ನು ಸೂಚಿಸುತ್ತದೆ. ಒಂದು ಸಮಾಜದಲ್ಲಿ ಜನಸಂಖ್ಯೆಯ ಸಾಮಾನ್ಯವಾಗಿ ಜ್ಯಾಮಿತಿಯ ಶ್ರೇಣಿಯಲ್ಲಿ ಅಂದರೆ, ೧, ೨, ೪, ೮, ೧೬, ೩೨, ೬೪..ಈ ರೀತಿ ಬೆಳೆಯುತ್ತಾ ಹೋಗುತ್ತದೆ. ಆಹಾರ ಉತ್ಪಾದನೆಯು ನಿಧಾನವಾಗಿ ಸಂಖ್ಯಾ ಶ್ರೇಣಿಯಲ್ಲಿ ಎಂದರೆ ೧, ೨, ೩, ೪, ೫, ೬......ಈ ರೀತಿ ಬೆಳೆಯುತ್ತಾ ಹೋಗುತ್ತದೆ. ಪರಿಸ್ಥಿತಿ ಹೀಗಿರುವಾಗ ಇವೆರಡರಲ್ಲಿ ಅಸಮತೋಲನ ಉಂಟಾಗುತ್ತದೆ. ಜನಸಂಖ್ಯೆಯ ಬೆಳವಣಿಗೆಯ ವೇಗವು ತೀವ್ರವಾಗಿ, ಆಹಾರದ ಉತ್ಪನ್ನವು ಕಡಿಮೆಯಾಗಿ ಮಾನವನ ಜೀವನ ಸಂಕಷ್ಟಕ್ಕೆ ಒಳಗಾಗುತ್ತದೆಂದು ಮಾಲ್ಥಸ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು.

ಜನಸಂಖ್ಯಾ ಬೆಳವಣಿಗೆ ಮತ್ತು ಆಹಾರೋತ್ಪತ್ತಿ ಇವೆರಡರ ಸಮತೋಲನವನ್ನು ಕಾಪಾಡಿಕೊಂಡು ಮುಂದೆ ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸುವ ಸಲುವಾಗಿ ಮಾಲ್ಥಸ್ ಕೆಲವು ಉಪಾಯಗಳನ್ನು ಸೂಚಿಸಿದ್ದಾರೆ. ಅವುಗಳೆಂದರೆ ಪ್ರತಿಬಂಧಕ ನಿರೋಧಗಳು ಮತ್ತು ನೈಸರ್ಗಿಕ ನಿರೋಧಗಳು. ಪ್ರತಿಬಂಧಕ ನಿರೋಧಗಳನ್ನು ಜನಸಂಖ್ಯೆಯ ತೀವ್ರ ಬೆಳವಣಿಗೆಯನ್ನು ತಡೆಗಟ್ಟುವುದಕ್ಕೆ ಸೂಚಿಸಲಾಗಿದೆ. ಅವುಗಳು ತಡವಾಗಿ ಮದುವೆಯಾಗುವುದು, ಬ್ರಹ್ಮಚರ್ಯ ಪಾಲಿಸುವುದು, ನೈತಿಕ ನಿಯಂತ್ರಣ ಇವೇ ಮೊದಲಾದವುಗಳು, ಈ ಪ್ರತಿಬಂಧಕ ನಿರೋಧಗಳು ಮಾನವನ ಹತೋಟಿಯಲ್ಲಿರುವುದರಿಂದ ಇವುಗಳನ್ನು ಸುಲಭವಾಗಿ ಅನುಷ್ಠಾನದಲ್ಲಿ ತರಬಹುದು ಎಂದು ಮಾಲ್ಥಸ್‌ರವರ ಅಭಿಪ್ರಾಯವಾಗಿರುತ್ತದೆ.

ಒಂದು ವೇಳೆ ಮೇಲೆ ತಿಳಿಸಿದ ನಿವಾರಣೋಪಾಯಗಳನ್ನು ಅನುಸರಿಸದೆ ಹೋದಲ್ಲಿ ಪ್ರಕೃತಿಯ ವಿಕೋಪಗಳಾದ ಕ್ಷಾಮ, ಪ್ರವಾಹಗಳು, ಯುದ್ಧಗಳು, ಸಾಂಕ್ರಾಮಿಕ ರೋಗಗಳು, ದಾರಿದ್ರ್ಯ ಮುಂತಾದವು ಅನೇಕ ರೀತಿಯಲ್ಲಿ ತಮ್ಮ ಪ್ರಭಾವವನ್ನು ಬೀರಿ ಭಾರಿ ಸಾವು ನೋವುಗಳನ್ನುಂಟು ಮಾಡಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ತಡೆಯುತ್ತದೆ. ಇವು ಮಾನವ ಕೋಟಿಗೆ ತುಂಬಾ ಹಾನಿಯನ್ನುಂಟುಮಾಡುವುದರಿಂದ ಜನಸಂಖ್ಯೆಯನ್ನು ಹತೋಟಿಯಲ್ಲಿಡಲು ಜನರು ಪ್ರತಿಬಂಧಕ ಕ್ರಮಗಳನ್ನು ಅನುಸರಿಸುವುದು ಒಳ್ಳೆಯದು ಎಂಬುದಾಗಿ ಮಾಲ್ಥಸ್ ಪ್ರತಿವಾದಿಸಿದ್ದಾರೆ.

ಮಾಲ್ಥಸ್ ರವರ ಜನಸಂಖ್ಯಾ ಸಿದ್ಧಾಂತ ಮತ್ತು ಭಾರತ.

ಮಾಲ್ಥಸ್‌ರವರ ಜನಸಂಖ್ಯಾ ಸಿದ್ಧಾಂತವನ್ನು ಮಂಡಿಸಿದಾಗ ಅವರನ್ನು ನಿರಾಶಾವಾದಿಯೆಂದು ಜರಿದರು. ಆದರೆ ಅವರ ಜನಸಂಖ್ಯಾ ಸಿದ್ಧಾಂತದ ಭವಿಷ್ಯವಾಣಿ ೨೦ನೇ ಶತಮಾನದಿಂದ ಏಷಿಯಾದ ರಾಷ್ಟ್ರಗಳಲ್ಲಿ ಸತ್ಯವಾಗಿ ಕಂಡುಬರುತ್ತಿದೆ. ಅದರಲ್ಲೂ ಭಾರತದಲ್ಲಿ ಅವರ ಜನಸಂಖ್ಯಾ ಸಿದ್ಧಾಂತ ಸತ್ಯವಾಗಿದೆ. ಜನಸಂಖ್ಯೆಯ ಹೆಚ್ಚಳಕ್ಕೆ ಪ್ರತಿಬಂಧಕವಿಲ್ಲದಿದ್ದರೆ ೨೫ ವರ್ಷಗಳಿಗೊಮ್ಮೆ ಜನಸಂಖ್ಯೆ ದ್ವಿಗುಣವಾಗುವುದೆಂದು ಅವರು ಹೇಳಿದ್ದು ಹೆಚ್ಚು ಕಡಿಮೆ ಭಾರತದಲ್ಲಿ ಸತ್ಯವಾಗಿದೆ. ಭಾರತದಲ್ಲಿ ೧೯೬೦ ರಿಂದ ೧೯೯೧ರ ಅವಧಿಯಲ್ಲಿ ಭಾರತದಲ್ಲಿ ಜನಸಂಖ್ಯೆ ಹೆಚ್ಚು ಕಡಿಮೆ ದ್ವಿಗುಣವಾಗಿರುತ್ತದೆ.

ಮಾಲ್ಥಸ್ ಜನಸಂಖ್ಯಾ ಸಿದ್ಧಾಂತ ಭಾರತ ಮತ್ತು ಏಡ್ಸ್

ಪ್ರತಿಬಂಧಕ ನಿರೋಧಗಳನ್ನು ಮಾನವ ಅನುಸರಿಸದೆ ಹೋದಲ್ಲಿ ಜನಸಂಖ್ಯೆಯು ತೀವ್ರವಾಗಿ ಬೆಳೆಯುತ್ತದೆ ಮತ್ತು ಬೆಳೆಯುತ್ತಿರುವ ಜನಸಂಖ್ಯೆಯನ್ನು ನೈಸರ್ಗಿಕ ನಿರೋಧಗಳು ತಡೆಯುತ್ತದೆ ಎಂಬ ಮಾಲ್ಥಸ್‌ರ ಹೇಳಿಕೆಯೂ ಭಾರತದಲ್ಲಿ ಸತ್ಯವಾಗಿದೆ. ಪ್ರತಿಬಂಧಕ ನಿರೋಧಗಳಾದ ತಡವಾಗಿ ಮದುವೆ ಮಾಡಿಕೊಳ್ಳುವುದು, .ಬ್ರಹ್ಮಚರ್ಯ ಪಾಲಿಸುವುದು, ನೈತಿಕ ನಿಯಂತ್ರಣ ಇವೆಲ್ಲವುಗಳನ್ನು ಭಾರತೀಯರು ಹೆಚ್ಚಾಗಿ ಪಾಲಿಸದಿರುವುದರಿಂದ ಮತ್ತು ಕುಟುಂಬ ಯೋಜನೆ ವಿಫಲವಾಗಿರುವುದರಿಂದ, ಇಂದು ಭಾರತದ ಜನಸಂಖ್ಯೆ ೧೦೦ ಕೋಟಿಗೂ ಮೀರಿದೆ.

ನೈಸರ್ಗಿಕ ನಿರೋಧಕಗಳಾದ ಪ್ಲೇಗ್, ಬರ, ಕ್ಷಾಮ, ಪ್ರವಾಹ, ಸಾಂಕ್ರಾಮಿಕ ರೋಗ ಇದಕ್ಕೆಲ್ಲ ಮಾನವ ಪರಿಹಾರ ಕಂಡುಕೊಂಡಿದ್ದರೂ ಪ್ರಕೃತಿಯ ವಿರುದ್ಧ ಮಾನವ ಸಾಗಲಾರ, ನಮ್ಮ ವಿಜ್ಞಾನ, ತಂತ್ರಜ್ಞಾನ ಬೆಳೆದಂತೆ, ರೋಗದ ಸ್ವರೂಪವು ಬದಲಾಗಿದೆ. ಇಂದು ಪ್ರಪಂಚವನ್ನೇ ಕಾಡುತ್ತಿರುವ ಭೀಕರ

5ನೇ ಪುಟಕ್ಕೆ

ಕಾಶ್ಮೀರದ ಹಿಮಪಾತಕ್ಕೆ ಕೊಡಗಿನ ಯೋಧ ಹೊಸೊಕ್ಲು ಸುಂದರೇಶ್ ಬಲಿ



ಜಮ್ಮು ಕಾಶ್ಮೀರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೊಡಗಿನ ಯೋಧರೊಬ್ಬರು ಹಿಮಪಾತಕ್ಕೆ ಸಿಲುಕಿ ದುರ್ಮರ ಣಕ್ಕೀಡಾಗಿರುವ ಘಟನೆ ದಿನಾಂಕ 18-02-03 ಕ್ಕೆ ಸಂಭವಿಸಿದೆ. ಕಳೆದ ಕೆಲವು ದಿನಗಳಿಂದ ತೀವ್ರ ಶೀತಮಾರುತ ಹಾಗೂ ಹಿಮಪಾತ ದಿಂದಾಗಿ ಜಮ್ಮುವಿನ ದ್ರಾಸ್ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭ ಜಿಲ್ಲೆಯ ಬಲ್ಲಮಾವಟಿಯವರಾದ ನಾಯಕ್, ಹೊಸೊಕ್ಲು ಸುಂದರೇಶ್ (34) ಸಾವಿಗೀಡಾಗಿದ್ದಾರೆ.

ನಾಪೋಕ್ಲು ಸಮೀಪ ಬಲ್ಲಮಾವಟಿಯ ಹೊಸೊಕ್ಲು ಕುಟುಂಬದ ದಿ. ಗಣಪತಿ ಮತ್ತು ಸೀತಮ್ಮ ದಂಪತಿಗಳ ಹಿರಿಯ ಪುತ್ರರಾಗಿದ್ದ ಅವಿವಾಹಿತ ಸುಂದರೇಶ್ ಈಗ್ಗೆ 14 ವರ್ಷಗಳ ಹಿಂದೆ ಎಂ. ಈ. ಜಿ. ಮೂಲಕ ಭಾರತೀಯ ಸೇನೆಗೆ ಸೇರ್ಪಡೆಯಾಗಿದ್ದರು. ಆ ಬಳಿಕ ಬೆಂಗಳೂರು, ರಾಜಸ್ಥಾನ, ಅಸ್ಸಾಂ, ಸಿಕ್ಕಿಂ, ಚೈನೈಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವರು, ಪ್ರಸ್ತುತ ಜಮ್ಮು ಕಾಶ್ಮೀರದ ದ್ರಾಸ್ ವಲಯದಲ್ಲಿ ಕರ್ತವ್ಯದಲ್ಲಿದ್ದಾಗ ಈ ದುರಂತ ಸಂಭವಿಸಿದೆ.

ಕಳೆದ ಕೆಲವು ದಿನಗಳಿಂದ ಈ ಪ್ರದೇಶದಲ್ಲಿ ಬೀಳುತ್ತಿರುವ ಭಾರೀ ಪ್ರಮಾಣದ ಹಿಮಪಾತಕ್ಕೆ ಸಿಲುಕಿ .ಯೋಧ ಸುಂದರೇಶ್ ದುರ್ಮರಣ ಹೊಂದಿದ್ದಾರೆ ಎಂದು ದ್ರಾಸ್ ವಲಯದ ಎಂ.ಈ.ಜಿ ಅಧಿಕಾರಿ ಆರ್. ಎನ್. ನಾಯಕ್ ಅವರು ಬಲ್ಲಮಾವಟಿಯ ಯೋಧನ ಮನೆಗೆ ದೂರವಾಣಿ ಮೂಲಕ ಸುದ್ದಿ ತಲುಪಿಸಿದ್ದಾರೆ. ಸುಂದರೇಶ್ ಅವರ ಸಾವಿನ ಸುದ್ದಿ ತಿಳಿಯುತ್ತಲೇ ವೃದ್ಧೆ ತಾಯಿ ಸೀತಮ್ಮ ಅವರು ಗೋಳಿಡುತ್ತಿದ್ದ ದೃಶ್ಯ ಹೃದಯ ಕರಗಿಸುವಂತಿತ್ತು. ಛಾಯಗ್ರಾಹಕರು ಸೀತಮ್ಮ ಅವರ ಭಾವ ಚಿತ್ರವನ್ನು ಸೆರೆ ಹಿಡಿದಾಗ "ನನ್ನ ಫೋಟಾ ಯಾಕಪ್ಪ ತೆಗೆತೀರಿ...ನನ್ಮಗ ಅಲ್ಲಿ ಶವವಾಗಿದ್ದಾನಲ್ಲಪ್ಪಾ? ಎಂದು ದುಃಖಿಸಿದರು.

ಸುಂದರೇಶ್ ಅವರ ತಮ್ಮ ವಸಂತ, ಈ ಸಂದರ್ಭ ಉಕ್ಕಿ ಬರುತ್ತಿದ್ದ ದುಃಖವನ್ನು ಅದುಮಿಟ್ಟು ಮಾತನಾಡಿ "ಏಪ್ರಿಲ್ ನಲ್ಲಿ ಮನೆಗೆ ಬರುತ್ತೇನೆ ಎಂದು ಅಣ್ಣ ಪತ್ರ ಮುಖೇನ ತಿಳಿಸಿದ್ದರಲ್ಲದೆ, ಮದುವೆಗೆ ಎಲ್ಲಾದರೂ ಒಂದು ಹೆಣ್ಣನ್ನು ನೋಡಿರಿ " ಎಂದು ಬರೆದಿದ್ದ ಎಂದು ಕಣ್ಣೀರಿಟ್ಟರು.

ನೆಲಜಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಆ ಬಳಿಕ ನೇತಾಜಿ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದ್ದ ಸುಂದರೇಶ್, 10 ನೇ ತರಗತಿ ಸೇರ್ಪಡೆ ಬಳಿಕ ಸೇನೆ ಸೇರಿದ್ದರು. ಕಳೆದ ಮೇ (2002) ತಿಂಗಳ ಅಂತ್ಯದಲ್ಲಿ ರಜೆಯ ನಿಮಿತ್ತ ಊರಿಗೆ ಬಂದಿದ್ದ ಸುಂದರೇಶ್ 35 ದಿನಗಳ ಕಾಲ ಕುಟುಂಬದವರೊಂದಿಗೆ ಸಂತಸದ ಕ್ಷಣಗಳನ್ನು ಹಂಚಿಕೊಂಡಿದ್ದರು.

ಅಂತಿಮ ಪತ್ರ : 12-2-2003 ರಂದು ಸುಂದರೇಶ್ ಅವರು ತಮ್ಮ ಕುಟುಂಬಕ್ಕೆ ಬರೆದಿರುವ ಪತ್ರ ಅದರಲ್ಲಿ ತನ್ನ ವೃದ್ಧ ತಾಯಿಯ ಆರೋಗ್ಯ ವಿಚಾರಿಸಿದ್ದು, "ಅಮ್ಮ ಹೇಗಿದ್ದೀಯಾ, ನನ್ನ ಬಗ್ಗೆ ಯೋಚನೆ ಮಾಡುತ್ತಾ ಯಾವಾಗಲೂ ಬೇಸರದಿಂದಿರಬೇಡ, ತಮ್ಮನ ಮಗಳೊಂದಿಗೆ ಸಂತಸದಿಂದಿರು ಎಂದು ಬರೆದಿದ್ದು, ಇಲ್ಲಿ ತುಂಬಾ ಚಳಿಯಿದೆ. ನಿಮ್ಮ ಪತ್ರಕ್ಕಾಗಿ ಕಾಯುತ್ತಿರುತ್ತೇನೆ. ಸದ್ಯದಲ್ಲಿಯೇ ಹಣ ಕಳುಹಿಸುತ್ತೇನೆ, ಮುಂದಿನ ಏಪ್ರಿಲ್‌ನಲ್ಲಿ ಊರಿಗೆ ಬರುತ್ತೇನೆ" ಎಂದು ಸುಂದರೇಶ್ ಪತ್ರದಲ್ಲಿ ತಿಳಿಸಿದ್ದರು.

ಯೋಧ ಸುಂದರೇಶ್ ಅವರ ಸಾವಿನ ಸುದ್ದಿ ತಿಳಿಯುತ್ತಲೇ ಕುಟುಂಬ ವರ್ಗದವರು, ನೆಂಟರಿಷ್ಟರು ಹಾಗೂ ಸುತ್ತ ಮುತ್ತಲಿನ ನಾಗರೀಕರು ತಂಡೋಪತಂಡವಾಗಿ ಬಲ್ಲ ಮಾವಟಿಯ ಮನೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

4ನೇ ಪುಟದಿಂದ

ರೋಗವೆಂದರೆ ಏಡ್ಸ್. ಇದಕ್ಕೆ ಈವರೆವಿಗೂ ಯಾವುದೇ ಔಷಧ ಕಂಡು ಹಿಡಿದಿಲ್ಲ. ಭಾರತದಲ್ಲಿ ಈಗಾಗಲೇ ೪೦ ಲಕ್ಷ ಏಡ್ಸ್ ರೋಗಿಗಳಿದ್ದಾರೆ! ೨೦೧೦ ರ ಹೊತ್ತಿಗೆ ಭಾರತದ ೨.೫ ಕೋಟಿ ಜನತೆಗೆ ಏಡ್ಸ್‌ಗೆ ತುತ್ತಾಗಲಿದ್ದಾರೆ ಎಂದು ಒಂದು ಸಮೀಕ್ಷಾ ವರದಿ ತಿಳಿಸಿದೆ! ಒಬ್ಬ ಎಚ್.ಐ.ವಿ. ಸೋಂಕು ಪೀಡಿತ ಎಷ್ಟು ಜನಕ್ಕೆ ಆ ಸೋಂಕನ್ನು ವರ್ಗಾಯಿಸುತ್ತಾನೆ ಎನ್ನುವುದು ಗಂಭೀರವಾದ ವಿಚಾರವಾಗಿದೆ. ಏಡ್ಸ್ ನಿಯಂತ್ರಿಸದಿದ್ದರೆ, ಏಡ್ಸ್‌ಗೆ ಔಷಧಿ ಬಂದಿದ್ದರೆ ಮಾಲ್ಥಸ್‌ರ ಜನಸಂಖ್ಯೆ ಸಿದ್ಧಾಂತ ಸತ್ಯವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಏಡ್ಸ್ ಮೂಲಕ ಜನಸಂಖ್ಯೆ ನಾಶವಾಗಿ, ಪ್ರಕೃತಿ ಜನಸಂಖ್ಯೆಯ ಮೇಲೆ ನಿಯಂತ್ರಣ ಸಾಧಿಸುತ್ತದೆ. ಆದರೆ ಈ ತಡೆ ಭೀಕರವಾಗಿರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಹಾಗೂ ಪ್ರತಿಯೊಬ್ಬ ಭಾರತೀಯನೂ ಈ ವಿಚಾರವಾಗಿ ಯೋಚಿಸಲೇಬೇಕಾದ ಸಂದರ್ಭ ಒದಗಿ ಬಂದಿದೆ.

ಬಿ. ಎಸ್. ನಾಗರಾಜ
ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ಮರಗೋಡು ಕೇಂದ್ರಕ್ಕೆ ಕೀರ್ತಿ ತಂದ ಶಿಕ್ಷಕಿದ್ವಯರು

2002-2003 ನೇ ಸಾಲಿನ ಜಿಲ್ಲಾ ಮಟ್ಟದ "ಅತ್ಯುತ್ತಮ" ಶಿಕ್ಷಕಿ ಪ್ರಶಸ್ತಿ ವಿಜೇತರು

ಪ್ರೌಢಶಾಲಾ ವಿಭಾಗ

ಶ್ರೀಮತಿ ವಿಶಾಲಾಕ್ಷಿ ಗೋಪಾಲ ಕೋಚನ



ಭಾಗಮಂಡಲ ನಾಡು, ತಾವೂರು ಗ್ರಾಮದ ದಿ|| ಕೋಳಿಬೈಲು ಗಣಪತಿ ಮತ್ತು ಶ್ರೀಮತಿ ಬೆಳ್ಯಪ್ಪನವರ ಪುತ್ರಿಯಾಗಿ 08-071946 ನಲ್ಲಿ ಜನನ. ಮೂರು ಗಂಡು ಎರಡು ಹೆಣ್ಣು ಮಕ್ಕಳ ಪೈಕಿ ಮೊದಲನೆಯವರಾದ ವಿಶಾಲಾಕ್ಷಿಯವರ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಸರಕಾರಿ ಮಾದರಿ ಪ್ರಾಥಮಿಕ ಶಾಲೆ, ಭಾಗಮಂಡಲ ದಲ್ಲಿ. ಭಾಗಮಂಡಲದ ಕಾವೇರಿ ಪ್ರೌಢಶಾಲೆಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ. ನಂತರ ಮಡಿಕೇರಿ ಸೀನಿಯರ್ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣ . ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ನೌಕರಿಗೆ ಸೇರ್ಪಡೆ. 1971 ರಲ್ಲಿ ಕಲಾ ವಿಭಾಗದಲ್ಲಿ ಪದವಿ. 1972 ರಲ್ಲಿ ಬಿ. ಎಡ್. ನಲ್ಲಿ ಪದವಿ ಪ್ರಾಪ್ತಿ. 1985 ರಲ್ಲಿ ಬಡ್ತಿ ಪಡೆದು ಒಂದು ವರ್ಷ ಸ. ಮಾ. ಪ್ರಾ. ಶಾಲೆ. ಚೆಟ್ಟಳ್ಳಿಯಲ್ಲಿ ಪದವೀಧರೆ ಮುಖ್ಯ ಶಿಕ್ಷಕಿಯಾಗಿ ಸೇವೆ. ಆನಂತರ ಮೈಸೂರಿನ ಲಕ್ಷ್ಮೀಪುರಂ ಬಾಲಕರ ಶಾಲೆಯಲ್ಲಿ ಆರು ವರ್ಷ ಪಧವೀಧರ ಮುಖ್ಯ ಶಿಕ್ಷಕಿಯಾಗಿ ಸೇವೆ. ತದನಂತರ ಎಂಟು ವರ್ಷ ಹಾಕತ್ತೂರು ಸ. ಮಾ. ಪ್ರಾ. ಶಾಲೆಯಲ್ಲಿ ಪದವಿಧರೆ ಮುಖ್ಯ ಶಿಕ್ಷಕಿಯಾಗಿ ಸೇವೆ. 2000 ನೇ ಇಸವಿ ಫೆಬ್ರವರಿಯಿಂದ ಬಡ್ತಿ ಪಡೆದು ಹಾಕತ್ತೂರು ಸರಕಾರಿ ಪ್ರೌಢಶಾಲೆಯಲ್ಲಿ ಸಹಾಯಕ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವರು. ಶ್ರೀಮತಿ ವಿಶಾಲಾಕ್ಷಿಯವರು ಮಡಿಕೇರಿ ತಾಲ್ಲೂಕು, ಹೊಸ್ಕೇರಿ ಗ್ರಾಮದ ನಿವೃತ್ತ ಸರಕಾರಿ ಪ್ರೌಢಶಾಲಾ ಶಿಕ್ಷಕರಾದ ಶ್ರೀಯುತ ಕೋಚನ ಎ. ಗೋಪಾಲನವರ ಧರ್ಮಪತ್ನಿ. ಈ ಶಿಕ್ಷಕ ದಂಪತಿಗಳಿಗೆ ಮೂರು ಜನ ಹೆಣ್ಣು ಮಕ್ಕಳು. ಮೂವರೂ ಮದುವೆಯಾಗಿ ಸುಖೀ ಸಂಸಾರಿಗಳು. 30-04-2004 ಕ್ಕೆ ಶ್ರೀಮತಿ ವಿಶಾಲಾಕ್ಷಿಯವರು ಸೇವೆಯಿಂದ ನಿವೃತ್ತಿಯಾಗಲಿರುವರು.

ಪ್ರಾಥಮಿಕ ಶಾಲಾ ವಿಭಾಗ

ಶ್ರೀಮತಿ ಸರೋಜಿನಿ ಮಾದಪ್ಪ ಯಾಲದಾಳು



ವಿರಾಜಪೇಟೆ ತಾಲ್ಲೂಕು, ಪಾಲಿಬೆಟ್ಟ ಸಮೀಪದ ಚನ್ನಂಗಿ ಗ್ರಾಮದ ದಿ|| ಮೇಡ್ತನ ಅಪ್ಪಚ್ಚ ಮತ್ತು ಪೂವಮ್ಮ ದಂಪತಿಗಳ ಮಗಳಾಗಿ ದಿನಾಂಕ 11-03-1945 ರಲ್ಲಿ ಗೋಣಿಕೊಪ್ಪಲಿನಲ್ಲಿ ಜನನ. ಐದು ಹೆಣ್ಣು ಮತ್ತು ಒಂದು ಗಂಡು ಮಕ್ಕಳ ಪೈಕಿ ಮೂರನೆಯವರಾದ ಸರೋಜಿನಿಯವರು ತಮ್ಮ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು ಚನ್ನಂಗಿ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿ, ಮಡಿಕೇರಿಯ ಸಂತ ಮೈಕಲರ ಶಾಲೆಯಲ್ಲಿ ಪ್ರೌಢಶಾಲಾ ವಿಧ್ಯಾಭ್ಯಾಸವನ್ನು ಮುಗಿಸಿದರು. ಹಿಂದಿಯಲ್ಲಿ "ರತ್ನ" ಪರೀಕ್ಷೆಯಲ್ಲಿ ರ್‍ಯಾಂಕು ಪಡೆದು ತೇರ್ಗಡೆಯಾದ ಕಾರಣ, ಹಿಂದಿ ಶಿಕ್ಷಕಿಯಾಗಿ 04-07-1966 ರಲ್ಲಿ ಮಾದಾಪುರ ಪ್ರಾಥಮಿಕ ಶಾಲೆಯಲ್ಲಿ ನೇಮಕ. ಜಿಲ್ಲೆಯ ವಿವಿಧ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸಿದ ಇವರು, ಅಕ್ಟೋಬರ್ 1995 ರಿಂದ ಮರಗೋಡು ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಪ್ರಭಾರ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವರು. ಶ್ರೀಮತಿ ಸರೋಜಿನಿಯವರು ಹಾಲೀ ಮರಗೋಡು ನಿವಾಸಿ, ಮೂಲತಃ ಗಾಳಿಬೀಡಿನವರಾದ, ಮರಗೋಡು ಭಾರತಿ ಪ್ರೌಢಶಾಲೆಯ ನಿವೃತ್ತ ಸಹ-ಶಿಕ್ಷಕರಾದ ಶ್ರೀಯುತ ಯಾಲದಾಳು ಪಿ. ಮಾದಪ್ಪನವರ ಸದಧರ್ಮಿಣಿ. ಈ ಶಿಕ್ಷಕ ದಂಪತಿಯರಿಗೆ ಇಬ್ಬರು ಹೆಣ್ಣು ಮಕ್ಕಳು ವಿವಾಹವಾಗಿ ಸುಖ-ಸಂಸಾರಿಗಳು. ತಾಂತ್ರಿಕ ಶಿಕ್ಷಣದ ಪದವೀಧರನಾಗಿದ್ದ ಈ ದಂಪತಿಗಳ ಏಕೈಕ ಪುತ್ರನ ಅಕಾಲ ಮರಣದಿಂದ ಇವರು ಇನ್ನೂ ಚೇತರಿಸಿಕೊಂಡಂತಿಲ್ಲ. ಅಗಲಿದ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ. ಹಾಗೂ ದಂಪತಿಗಳಿಗೆ ಸಹನಾಶಕ್ತಿಯನ್ನು ಕೊಡಲಿ ಎಂದು ಕೊಡಗು ಸಂಗಾತಿ ಹಾರೈಸುತ್ತದೆ.

ಶ್ರೀಮತಿ ಸರೋಜಿನಿಯವರು 31-03-2003 ಕ್ಕೆ ಸೇವೆಯಿಂದ ನಿವೃತ್ತಿಯಾದರು.

ಇಬ್ಬರೂ ಶಿಕ್ಷಕಿಯರನ್ನು ಏಕ ಕಾಲದಲ್ಲಿ ಸಂಗಾತಿ ಪರ ಲೇಖಕರು ಮಾತನಾಡಿಸಿದಾಗ,

ಕೊ. ಸಂ.: ನೀವು ಶಿಕ್ಷಣ ಕ್ಷೇತ್ರವನ್ನು ಆಯ್ಕೆ ಮಾಡಲು ಕಾರಣವೇನು? ಇದಕ್ಕೆ ಪ್ರೇರಣೆ ಏನು?

ವಿಶಾಲಾಕ್ಷಿ: ಸಮಾಜದಲ್ಲಿ ಉತ್ತಮ ಪ್ರಜೆಗಳನ್ನು ಹುಟ್ಟು ಹಾಕುವುದು. ನನ್ನ ತಂದೆಯವರೇ ಹೆಚ್ಚಿನ ಪ್ರೇರಣೆ ನೀಡಿದವರು.

ಸರೋಜಿನಿ: ಶಿಕ್ಷಕರಿಂದ ಒಬ್ಬ ಉತ್ತಮ ನಾಗರೀಕನನ್ನು ರೂಪಿಸಲು ಸಾಧ್ಯ. ನನಗೆ ಯಾರದೇ ಪ್ರೇರಣೆ ಇರಲಿಲ್ಲ. ದೊರಕಿದ್ದು ಉತ್ತಮ ಕ್ಷೇತ್ರದ ನೌಕರಿ.

ಕೊ. ಸಂ. : ಪ್ರಶಸ್ತಿ ಬಂದ ವಿಷಯ ತಿಳಿದಾಗ ನಿಮಗೇನೆನಿಸಿತು? ಇದನ್ನು ನಿರೀಕ್ಷಿಸಿದ್ದಿರಾ?

ವಿಶಾ: ತುಂಬಾ ಸಂತೋಷವಾಯಿತು. ನನ್ನ ಕರ್ತವ್ಯಕ್ಕೆ ಸಂದ ಫಲ ಎಂದು ಭಾವಿಸುತ್ತೇನೆ. ಇದನ್ನು ನಾನು ನಿರೀಕ್ಷಿಸಿರಲಿಲ್ಲ.

ಸರೋ: ಪ್ರಶಸ್ತಿ ಬಂದಿರುವುದು ಸಂತೋಷ ಕರ್ತವ್ಯದಲ್ಲಿ ಶ್ರದ್ಧೆ-

ಮೂರು ತಡೆ ರಹಿತ- ಕಾಲ, ವಯಸ್ಸು, ಸಾವು

ಆಸಕ್ತಿ ಪ್ರಶಸ್ತಿ ಬರಲು ಕಾರಣ ಎಂದು ಭಾವಿಸುತ್ತೇವೆ. ಪ್ರಶಸ್ತಿ ನಿರೀಕ್ಷಣೆ ಇರಲಿಲ್ಲ.

ಕೊ. ಸಂ.: ನಿಮ್ಮ ಕಾಲದ ವಿಧ್ಯಾಭ್ಯಾಸಕ್ಕೂ, ಈಗಿನ ವಿಧ್ಯಾಭ್ಯಾಸಕ್ಕೂ ನೀವು ಕಂಡ ಬದಲಾವಣೆ ಏನು?

ವಿ.: ನಮ್ಮ ಕಾಲದಲ್ಲಿ ಬಾಹ್ಯ ಪ್ರಪಂಚದಲ್ಲಿ ಅನುಭವದ ಕೊರತೆ. ಮನರಂಜನೆಗಾಗಿ ಯಕ್ಷಗಾನ-ಬೊಂಬೆಯಾಟ ಮೊದಲಾದವುಗಳ ನಿರೀಕ್ಷೆ. ಆದರೇ ಇಂದು ಕಂಪ್ಯೂಟರ್ ಯುಗ. ಎಲ್ಲಾ ರೀತಿಯ ಮನರಂಜನೆಗಳು ಸಧ್ಯ ಮನೆಯಲ್ಲಿಯೇ ಲಭ್ಯ. ಈಗ ಪ್ರಾಮಾಣಿಕತೆಯ ಕೊರತೆ. ಪರಿಸರ ಬದಲಾಗಿದೆ.

ಕೊ. ಸಂ.: ಹಿಂದಿನ ಕಾಲದಲ್ಲಿ ವಿಧ್ಯಾಭ್ಯಾಸ ಗುಣಮಟ್ಟದಿಂದ ಕೂಡಿದ್ದರೂ, ಮಂದಗತಿಯಂತಿತ್ತು. ಆದರೆ ಇಂದು ವಿದ್ಯಾಭ್ಯಾಸದ ಮಟ್ಟ ತೀವ್ರ ಗತಿಯಿಂದ ಕೂಡಿದೆ ಹಾಗೂ ಪೈಪೋಟಿ ನೀಡುವಂತಾಗಿದೆ.

ಕೊ. ಸಂ.: ನಿಮ್ಮ ವಿದ್ಯಾಭ್ಯಾಸ ಕಾಲದ ಗುರು-ಶಿಷ್ಯರ ಭಾಂದವ್ಯಕ್ಕೂ ಈಗಿನ ಕಾಲಕ್ಕೂ ನೀವು ಕಂಡ ವ್ಯತ್ಯಾಸಗಳೇನು?

ವಿ.: ಹಿಂದೆ ಪೋಷಕರು, ಗುರುಗಳು ಮತ್ತು ಹಿರಿಯರಿಗೆ ಗೌರವ ಸಿಗುತ್ತಿತ್ತು. ಭಯ-ಭಕ್ತಿಯಿಂದ ಕಾಣುತ್ತಿದ್ದರು. ಇಂದು ಇದೆಲ್ಲಾ ಹೆಚ್ಚಿನಾಂಶ ಮಾಯವಾದಂತಿದೆ.

ಕೊ. ಸಂ.: ಹಿಂದೆ ಗುರುಗಳಿಗೆ ಬಹಳ ಗೌರವ ಸಿಗುತ್ತಿತ್ತು. ಗುರುಗಳನ್ನು ಹಿರಿಯರನ್ನು ಭಯ-ಭಕ್ತಿಯಿಂದ ಕಾಣುತ್ತಿದ್ದರು. ಇಂದು ಶಾಲಾ ವಿದ್ಯಾರ್ಥಿಗಳು ಗುರುಗಳನ್ನು ಶಾಲಾ ವಠಾರದಲ್ಲಿ ಒಂದು ರೀತಿ ಹೊರ ಬಂದೊಡನೆ ಇನ್ನೊಂದು ರೀತಿಯಿಂದ ಕಾಣುವಂತಾಗಿದೆ.

ಕೊ.ಸಂ.: ಇತ್ತೀಚಿನ ವರ್ಷಗಳಲ್ಲಿ ವಿದ್ಯಾಕೇಂದ್ರಗಳು ವ್ಯಾಪಾರ ಕೇಂದ್ರಗಳಾಗಿವೆ ಎಂಬ ವ್ಯಾಖ್ಯಾನ ಇದೆಯಲ್ಲ. ನಿಮ್ಮ ಅನಿಸಿಕೆ ಏನು ?

ವಿ.: ಇದನ್ನು ನಾವು ವಿದ್ಯಾಕೇಂದ್ರಗಳಲ್ಲಿ ಕಾಣುವುದಿಲ್ಲ. ಖಾಸಗಿ ವಿದ್ಯಾ ಕೇಂದ್ರಗಳಲ್ಲಿ ಇದು ಅಕ್ಷರಸ ನಿಜ. ಇದು ಸರಿಯಲ್ಲ, ಖಾಸಗಿ ಕೇಂದ್ರಗಳು ಕೇವಲ ಶ್ರೀಮಂತರಿಗೆ ಮಾತ್ರ ಮೀಸಲು ಎಂಬಂತೆ ಪರಿಸರ ಬದಲಾವಣೆಯಾಗಿದೆ. ಇದರಿಂದ ಸರಕಾರಿ ವಿದ್ಯಾ ಕೇಂದ್ರದ ಮತ್ತು ಖಾಸಗಿ ವಿದ್ಯಾ ಕೇಂದ್ರದ ವಿದ್ಯಾಭ್ಯಾಸದ ಗುಣ ಮಟ್ಟವನ್ನು ಅಳೆದಂತಾಗುತ್ತದೆ.

ಸರೋಜಿನಿ : ಸರಕಾರಿ ವಿದ್ಯಾ ಕೇಂದ್ರಗಳಲ್ಲಿ ಇಂತಹದಕ್ಕೆ ಅವಕಾಶಗಳಿಲ್ಲ. ಆದರೇ ಖಾಸಗಿ ಶಾಲೆಗಳಲ್ಲಿ ಅದರೊಳಗೆ ಪೈಪೋಟಿ ಹೆಚ್ಚುವುದರಿಂದ ಕೆಲವೊಮ್ಮೆ ವಿದ್ಯೆಯ ಗುಣಮಟ್ಟ ಕ್ಷೀಣಿಸಲು ಅವಕಾಶವಿದೆ. ಆಗ ವ್ಯಾಪಾರದ ಮನೋಭಾವ ಹುಟ್ಟಿಕೊಳ್ಳುವುದು.

ಕೊ. ಸಂ.: ಪ್ರಸ್ತುತ ವಿದ್ಯಾರ್ಥಿಗಳಿಗೆ ನಿಮ್ಮ ಸಂದೇಶವೇನು?

ವಿ: ವಿದ್ಯೆ ಅಪಹರಿಸಲಾಗದ ವಸ್ತು, ಗುರುಭಕ್ತಿ, ಶ್ರದ್ಧೆ, ಶಿಸ್ತು, ಪ್ರಾಮಾಣಿಕತೆ ಇವುಗಳನ್ನು ವಿದ್ಯಾರ್ಥಿ ರೂಢಿಸಿ ಕೊಳ್ಳುವಂತಾಗಬೇಕು.

ಸರೋಜಿನಿ : ಗುರು ಹಿರಿಯರಿಗೆ ಗೌರವ, ವಿನಯ, ಶಿಸ್ತು, ಸದ್ಗುಣ ಮುಂತಾದವುಗಳನ್ನು ಹೊಂದಿಕೊಂಡು, ಪರರನ್ನು ನೋಯಿಸದೆ, ಪರೋಪಕಾರಿ ಗುಣಗಳನ್ನು ಹೊಂದಿರಬೇಕು.

ನಿವೃತ್ತಿಯ ಅಂಚಿನಲ್ಲಿರುವ ಈ ಇಬ್ಬರೂ ಶಿಕ್ಷಕಿಯರಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿಯು ದೊರೆಯಲಿ ಎಂದು ಶುಭ ಹಾರೈಸೋಣ.

- ಸಂದರ್ಶನ ಲೇಖನ : ಜೈನೀರ ವೆಂಕಟೇಶ್, ಕಟ್ಟೆಮಾಡು.

ಶಿಕ್ಷಕನ ಪ್ರಪಂಚ........?

ಶಿಕ್ಷಕನದೊಂದು ವಿಚಿತ್ರ ಲೋಕ, ಶಿಕ್ಷಕನು ಅಪೂರ್ವವಾದ ಅನನ್ಯವಾದ ಗೌರವಾದರಗಳಿಗೆ ಪಾತ್ರನಾಗುತ್ತಾನೆ. ಹಣ ಮತ್ತು ಕೀರ್ತಿಗಳನ್ನು ವರ್ಜಿಸಿ ಅಧ್ಯಾಪನವು ಪರಮಪ್ರಿಯವೆಂದು ಬಗೆದು ಅಂಗೀಕರಿಸಿದಲ್ಲಿ ಅಂಥವರು ಮನುಕುಲ ಶ್ರೇಷ್ಠರು ಎಂಬುವುದರಲ್ಲಿ ಸಂಶಯವಿಲ್ಲ.

ಸುಪ್ರಸಿದ್ಧ ಹಾಗೂ ಹೆಸರಾಂತ ಶಿಕ್ಷಣ ಶಾಸ್ತ್ರಜ್ಞರು ಶಿಕ್ಷಣ ಕ್ರಮವನ್ನು ಸೃಷ್ಟಿಸುತ್ತಾರೆ. ಆದರೆ ಎಲೆಯ ಮರೆಯಲ್ಲಿನ ಅಜ್ಞಾತ ಶಿಕ್ಷಕ ಪುಟ್ಟ ಮಕ್ಕಳಿಗೆ ಮಾರ್ಗದರ್ಶನ ಒದಗಿಸುವ ಮಹಾನ್ ಕಾರ್ಯದಲ್ಲಿ ನಿರತನಾಗಿರುತ್ತಾನೆ. ಇವನ ಕಾಯಕಲೋಕ ಯಾರ ಗಮನಕ್ಕೂ ಬರುವುದಿಲ್ಲ. ಕಾಯಕವೇ ಮಹತ್ವವನ್ನು ದೈನಂದಿನ ಪತ್ರಿಕೆಗಳು ಪ್ರಪಂಚಕ್ಕೆ ಸಾರುವುದಿಲ್ಲ. ಇವನ ಮಹಿಮೆಯನ್ನು ಗುರುತಿಸಿದ ಜನ ಇವನನ್ನು ಭಾರೀ ಮೆರವಣಿಗೆಯಲ್ಲಿ ಅದ್ದೂರಿಯಿಂದ ಕೊಂಡೊಯ್ದು ಇವನ ಕೀರ್ತಿ ಪ್ರತಿಷ್ಠೆಗಳನ್ನು ಲೋಕದಲ್ಲಿ ಪ್ರಚುರಗೊಳಿಸುವುದಿಲ್ಲ. ಜನತೆ ಇವನಿಗೆ ಧನಕನಕ ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ಒದಗಿಸುವುದಿಲ್ಲ. ಆದರೆ ಎಲ್ಲಿ ಅಂಧಕಾರ, ಮೋಸ, ಅನೀತಿ, ಅನ್ಯಾಯ, ಅವ್ಯವಹಾರ ತಾಂಡವವಾಡುತ್ತಿವೆಯೋ ಅಲ್ಲಿ ಈ ಅಸುರೀ ಶಕ್ತಿಗಳ ನಿರಂತರ ದಮನ ಕಾರ್ಯದಲ್ಲಿ ಇವನು ಪೂರ್ಣ ತೊಡಗಿರುತ್ತಾನೆ. ಈ ಕಾರ್ಯವನ್ನು ಸಮಾಧಾನದಿಂದ ಧೃತಿಗೆಡದೆ ಧೃಢ ಹಠಚಿತ್ತನಾಗಿ ಗೈಯುತ್ತಿರುತ್ತಾನೆ. ಈತನು ಅನೇಕ ವ್ಯಕ್ತಿಗಳನ್ನು ಜೋತಿರ್ಮಯಗೊಳಿಸುತ್ತಾನೆ. ಅನೇಕ ವರ್ಷಗಳ ನಂತರ ಈ ಜೋತಿರ್ಮಣಿ ಮಕ್ಕಳು ಯಾರಿಂದ ದೀಪ್ತಗೊಂಡಿದ್ದರೊ ಅಂತಹ ಮಹಾನ್ ಶಿಕ್ಷಕರನ್ನು ಸಂತೃಪ್ತಗೊಳಿಸುತ್ತವೆ. ಇದಕ್ಕಿಂತಲೂ ಮಿಗಿಲಾದ ಬಹುಮಾನ ಮತ್ತೊಂದಿದೆಯೇ?

ಇವು ಅಜ್ಞಾತ ಶಿಕ್ಷಕನನ್ನು ಕುರಿತು ನನ್ನ ದಿವ್ಯಾಲೋಚನೆಗಳು

- ಪೂಳಕಂಡ ಸುದೀಪ್, ಮರಗೋಡು.

ಸರ್ಕಾರಿ ಶ್ರೀಮನ್ಮಹಾರಾಜ
ಸಂಸ್ಕೃತ ಮಹಾಪಾಠಶಾಲಾ, ಮೈಸೂರು
ಪಾಠಶಾಲೋದಯ

ಮೂರನೆಯ ಕೃಷ್ಣರಾಜ ಒಡೆಯರ ಮಹಾರಾಜರವರ ದೂರದೃಷ್ಟಿಯಿಂದ ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸುವ ಪ್ರಯತ್ನ ಮಾಡಲಾಯಿತು. ಇದಕ್ಕಾಗಿ ಮಹಾರಾಜರವರು ಒಂದು ಸಾವಿರ ರೂಪಾಯಿಗಳನ್ನು ಮೀಸಲಿಟ್ಟಿದ್ದರು. ಆದರೆ ಅವರ ಆಡಳಿತದಲ್ಲಿ ಪಾಠಶಾಲೆಯು ಪ್ರಾರಂಭವಾಗಲಿಲ್ಲ. ಈ ಸಂಕಲ್ಪ ವಿಫಲವೂ ಆಗಲಿಲ್ಲ. ದುರದೃಷ್ಟವಶಾತ್ ೧೮೬೮ರಲ್ಲಿ ಮೂರನೇ ಕೃಷ್ಣರಾಜ ಒಡೆಯರವರು ದಿವಂಗತರಾದರು. ರಾಜೇಂದ್ರರ ಆಡಳಿತದಲ್ಲಿ ರಾಜ ಪ್ರಸಾದ ಮಂತ್ರಿಗಳಾದ ರಂಗಾಚಾರ್ಯರು ಮಹಾರಾಜರ ಸಂಕಲ್ಪವನ್ನು ಸ್ಮರಿಸಿಕೊಂಡು ಪಾಠಶಾಲೆಯನ್ನು ಸಂಸ್ಥಾಪಿಸಿದರು. ಅನ್ನಸತ್ರಕ್ಕಾಗಿ ಮೀಸಲಿಟ್ಟ ನಿಧಿಯು ಇರುವುದನ್ನು ಗಮನಿಸಿ ಇದರ ಸದುಪಯೋಗವನ್ನು ಮಾಡುವ ದೃಷ್ಟಿಯಿಂದ 'ಸರಸ್ವತೀ ಪ್ರಸಾದ' ಎಂಬ ಹೆಸರಿನಿಂದ ಈ ಪಾಠಶಾಲೆಯು ಉದಯವಾಯಿತು.

ಆರಂಭ ದೆಸೆ

ಮೊದಲು ತರ್ಕಶಾಸ್ತ್ರ ಹಾಗೂ ವ್ಯಾಕರಣ ಶಾಸ್ತ್ರದ ಆಮೂಲಾಗ್ರ ಅಧ್ಯಯನಕ್ಕಾಗಿ ಇಬ್ಬರು ಉಪಾಧ್ಯಾಯರನ್ನು ೧೮೬೮ ರಲ್ಲಿ ನಿಯಮಿಸಲಾಯಿತು. ಆಮೇಲೆ ಋಗ್ವೇದ ಹಾಗೂ ಯಜುರ್ವೇದ ಅಧ್ಯಾಪನಕ್ಕೆ ಅವಕಾಶ ಮಾಡಿಕೊಡಲಾಯಿತು. ಮೊದಲು ಮೂವತ್ತರಿಂದ ನಲವತ್ತು ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಬಂದಿದ್ದರು.

ಮೂರನೆಯ ಕೃಷ್ಣರಾಜ ಒಡೆಯರವರ ಹೆಸರಿನಲ್ಲಿಯೇ ಸ್ಥಾಪಿತವಾದ ಅನ್ನಪತ್ರ ಶಾಲೆಯಲ್ಲಿಯೇ ಪಾಠಶಾಲೆ ಪ್ರಾರಂಭವಾಯಿತು. ಐವತ್ತು ವರ್ಷಗಳಲ್ಲಿ ಈ ಪಾಠಶಾಲೆಯು ಹದಿನಾಲ್ಕು ವಿದ್ಯೆಗಳಲ್ಲಿ ಪರಿಣಿತರಾದ ಪಂಡಿತರನ್ನು ಹೊಂದಿ ೨೮೫ ವಿದ್ಯಾರ್ಥಿಗಳಿಗೆ ಅಧ್ಯಯನದ ಸೌಕರ್ಯವನ್ನು ನೀಡುವ ಸಾಮರ್ಥ್ಯವನ್ನು ಪಡೆಯಿತು. ೧೯೧೮ ರಲ್ಲಿ ವಿದ್ಯಾರ್ಥಿಗಳ ವಸತಿ ಸೌಕರ್ಯಕ್ಕಾಗಿ ೧೨೦ ಜನ ವಿದ್ಯಾರ್ಥಿಗಳಿಗೆ ವಾಸಿಸಲು ಅನುಕೂಲವಾಗುವಂತೆ ಸುಸಜ್ಜಿತವಾದ ಕೊಠಡಿಗಳನ್ನು ನಿರ್ಮಿಸಲಾಯಿತು.

ಬೆಳವಣಿಗೆ

ಆರಂಭ ದೆಸೆಯಲ್ಲಿ ಋಗ್ವೇದ, ಯಜುರ್ವೇದ, ತರ್ಕ ವ್ಯಾಕರಣ ಅಧ್ಯಯನಕ್ಕೆ ಈ ಪಾಠಶಾಲೆಯಲ್ಲಿ ಅವಕಾಶವಿತ್ತು. ೧೮೮೩ ರಲ್ಲಿ ಸಾಮವೇದ, ವೇದಭಾಷ್ಯ, ಧರ್ಮಶಾಸ್ತ್ರ, ಜ್ಯೋತಿಷ, ಸಂಗೀತ ಹಾಗೂ ವೈದ್ಯಶಾಸ್ತ್ರಗಳ ಆಮೂಲಾಗ್ರ ಅಧ್ಯಯನಕ್ಕೆ ಅವಕಾಶ ಮಾಡಿಕೊಡಲಾಯಿತು. ೧೮೮೪ ರಿಂದ ಪೂರ್ವ ಮೀಮಾಂಸಾ ಶಾಸ್ತ್ರಾಧ್ಯಯನಕ್ಕೆ ಅವಕಾಶ ನೀಡಲಾಯಿತು. ಸಂಗೀತ ಹಾಗೂ ವೈದ್ಯಶಾಸ್ತ್ರ ಅಧ್ಯಯನಕ್ಕೆ ಈ ಪಾಠಶಾಲೆಯಲ್ಲಿ ಅವಕಾಶ ನೀಡಿದ ವಿಶೇಷ ವ್ಯವಸ್ಥೆ ಗಮನಾರ್ಹವಾಗಿತ್ತು. ೧೯೮೦ ರಲ್ಲಿ ಅಧ್ಯಯನದ ಕ್ರಮದ ಬಗ್ಗೆ ವಿಮರ್ಶೆ ನಡೆದು ಪ್ರೌಢಿಮೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರೌಢ ವಿದ್ಯಾರ್ಥಿಗಳು ಉಪನಿಷತ್ ಹಾಗೂ ಭಗವದ್ಗೀತೆಯನ್ನು ಅಧ್ಯಯನ ಮಾಡಬೇಕೆಂದು ಕಡ್ಡಾಯ ಮಾಡಲಾಯಿತು. ಪ್ರಾಥಮಿಕ ಹಂತದ ವಿದ್ಯಾರ್ಥಿಗಳು ವೇದ ಮಂತ್ರವನ್ನು ಕಡ್ಡಾಯವಾಗಿ ಅಧ್ಯಯನ ಮಾಡಬೇಕೆಂದು ನಿಯಮವನ್ನು ವಿಧಿಸಲಾಯಿತು. ಪಠ್ಯಕ್ರಮದಲ್ಲಿ ಗಣನೀಯ ವ್ಯತ್ಯಾಸ ಮಾಡದೇ ೧೯೧೭ ರವರೆಗೂ ಒಂದೇ ರೀತಿಯ ಪಠ್ಯ ಕ್ರಮವನ್ನು ಮುಂದುವರಿಸಲಾಯಿತು. ಪಠ್ಯ ಕ್ರಮವನ್ನು ಪರಿಸ್ಕರಿಸುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು. (G.O. No. 3333-45 EDN, 103-15-07 Dated 27th September - 1917) ಈ ಸಮಿತಿಯು ತನ್ನ ವರದಿಯಲ್ಲಿ ಮೈಸೂರು ಮತ್ತು ಬೆಂಗಳೂರು ಕಾಲೇಜ್ ಜೊತೆಗೆ ಕರ್ನಾಟಕ ರಾಜ್ಯಾದ್ಯಂತ ಸ್ಥಾಪಿತವಾಗಿರುವ 35 ಅನುದಾನಿತ ಶಾಲೆಗಳನ್ನು ಏಕ ರೀತಿಯ ಹಾಗೂ ಒಂದೇ ಮಟ್ಟದ ಶಿಕ್ಷಣಕ್ಕೆ ಒಳಪಡಿಸುವಂತೆ ಸೂಚಿಸಿತು. ಹಾಗೂ ಸ್ನಾತಕೋತ್ತರ ಪದವಿಗೆ ಸರಿ ಸಮನಾದ ಮಹಾ ವಿದ್ವತ್ತರಗತಿಗಳನ್ನು ಪ್ರಾರಂಭಿಸಲು ಸೂಚಿಸಿತು. ಹಾಗೂ ಇಲ್ಲಿನ ಶಿಕ್ಷಣದ ಮಟ್ಟವು ಕುಸಿಯದಂತೆ ತಲಸ್ಪರ್ಶೀ ವಿದ್ವತ್ತನ್ನು ಪಡೆಯಲನುವಾಗುವ ದೃಷ್ಟಿಯಿಂದ ಸುವ್ಯವಸ್ಥಿತ ಪರೀಕ್ಷೆ ನಡೆಸಲು ಒಂದು ಪರೀಕ್ಷಾ ಮಂಡಳಿಯನ್ನು ರಚಿಸಲು ಸೂಚಿಸಿತು. ಹಾಗೂ ಮೈಸೂರು ಮತ್ತು ಬೆಂಗಳೂರು ಸಂಸ್ಕೃತ ಕಾಲೇಜುಗಳನ್ನು ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಸೇರಿಸಿ ವಿಶ್ವವಿಧ್ಯಾನಿಲಯದಲ್ಲಿ ವಿಶೇಷ ಸಂಸ್ಕೃತಧ್ಯಯನ ಪೀಠವನ್ನು ಸ್ಥಾಪಿಸಲು ಸಲಹೆ ನೀಡಿತು. ಹಾಗೂ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯು ವಿದ್ವತ್ ಪರೀಕ್ಷೆಗಳನ್ನು ನಡೆಸುವಂತೆ ಸೂಚಿಸಿತು.

ವಿಶ್ವ ವಿದ್ಯಾನಿಲಯದ ಕೌನ್ಸಿಲ್ ಈ ಶಿಫಾರಸ್ಸನ್ನು ಒಪ್ಪಿತು. ಪ್ರಾಚೀನ ಸಂಸ್ಕೃತ ವಿಧ್ಯಾಪೀಠವನ್ನು ಸ್ಥಾಪಿಸುವ ಕಾರ್ಯವನ್ನು ಕಾಲಾನಂತರದಲ್ಲಿ ಕೈಗೊಳ್ಳಲು ತೀರ್ಮಾನಿಸಿತು.

ಪರೀಕ್ಷಾ ಕ್ರಮ

ಮೈಸೂರು ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಮೊದಲು ವಾರ್ಷಿಕ ಪರೀಕ್ಷೆಯನ್ನು ಹೊರ ರಾಜ್ಯದ ವಿದ್ವಾಂಸರ ಸಹಾಯದಿಂದ ಆಸ್ಥಾನ ಧರ್ಮಾಧಿಕಾರಿಗಳೇ ನಡೆಸುತ್ತಿದ್ದರು. ೧೮೮೪ರಲ್ಲಿ ಅನೇಕ ಶಾಸ್ತ್ರಗಳಲ್ಲಿ ವಿದ್ವತ್ ಪರೀಕ್ಷೆ ಪ್ರಾರಂಭವಾಯಿತು. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ವಾಂಸರಿಗೆ ರೂ ೫೦- ೨೫೦ ರವರೆಗೆ ವಿದ್ವತ್ಸಂಭಾವನೆ ನೀಡಲಾಗುತ್ತಿತ್ತು.

೧೮೮೬ ರಿಂದ ಮೈಸೂರು ಅರಮನೆಯಲ್ಲಿ ನಡೆಯುವ ನವರಾತ್ರಿ ಮಹೋತ್ಸವ ಕಾಲದಲ್ಲಿ ರಾಜ ಸಭೆಯಲ್ಲಿಯೇ ಮಹಾರಾಜರ ಅಮೃತ ಹಸ್ತದಿಂದಲೇ ಸನ್ಮಾನಿಸಲಾಗುತ್ತಿತ್ತು. ಪಂಡಿತ ಸಮಿತಿಯ ಎದುರಿನಲ್ಲಿಯೇ ಪರೀಕ್ಷೆ ನಡೆಯುತ್ತಿತ್ತು.

ಇಲ್ಲಿ ನಡೆಯುವ ಪರೀಕ್ಷೆ ವಿದ್ವತ್ತಿಗೆ ಒರೆಗಲ್ಲಾಗಿತ್ತು. ೧೯೧೨ರಿಂದ ಸಂಸ್ಕೃತ ಪಾಠ ಪರೀಕ್ಷಾ ಸಮಿತಿಯು ಪರೀಕ್ಷೆಯನ್ನು ನಡೆಸುತ್ತಿತ್ತು. ಹೀಗೆ ಸ್ವಾತಂತ್ರ್ಯ ಪೂರ್ವದಲ್ಲಿ ಪರೀಕ್ಷೆಯು ಅರ್ಥಪೂರ್ಣವಾಗಿ ನಡೆದು ದೇಶದಾದ್ಯಂತ ವೇದ ಶಾಸ್ತ್ರಗಳ ಪ್ರಚಾರ ನಿರಾತಂಕವಾಗಿ ಸಾಗಿತ್ತು.

ಸ್ವಾತಂತ್ರ್ಯೋತ್ತರ ಸಂಸ್ಕೃತ ಶಿಕ್ಷಣ

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಗಣರಾಜ್ಯ ಸ್ಥಾಪನೆ (೧೯೫೦) ಯಾಗುವವರೆಗೂ ಸಂಸ್ಕೃತ ಶಿಕ್ಷಣ ಹಿಂದಿನಂತೆ ನಡೆಯುತ್ತಿತ್ತು. ೧೯೫೦ ರಲ್ಲಿ ಕರ್ನಾಟಕ ಸರ್ಕಾರಕ್ಕೆ ಸಂಸ್ಕೃತ ಕಾಲೇಜುಗಳ ಆಡಳಿತವನ್ನು ವಹಿಸಿಕೊಡಲಾಯಿತು. ಅನೇಕ ಏಳುಬೀಳುಗಳನ್ನು ಸಹಿಸಿ ವೇದಶಾಸ್ತ್ರ ಆಗಮಗಳ ಅಧ್ಯಯನ ಅವ್ಯಾಹತವಾಗಿ ನಡೆದು ಬಂದಿರುವುದೇ ಒಂದು ರೋಚಕ ವಿಷಯ. ಒಂದೇ ಸೂರಿನಡಿಯಲ್ಲಿ ಸಂಸ್ಕೃತ ಸಾಹಿತ್ಯದ ಎಲ್ಲಾ ಶಾಖೆಗಳ ಪ್ರಾಮಾಣಿಕ ಅಧ್ಯಯನಕ್ಕೆ ಅವಕಾಶ ಮಾಡಿ ಕೊಟ್ಟಿದ್ದರೂ ಸಹ ಅದು ರೂಪಾಂತರಗೊಂಡಿದ್ದು ಖೇದಾಸ್ಪದ. ವೈದ್ಯಕೀಯ ಶಿಕ್ಷಣ ಹಾಗೂ ಸಂಗೀತ ಶಿಕ್ಷಣ ಈ ತಾಣದಿಂದ ದೂರಾಗಿ ಸ್ವತಂತ್ರವಾಯಿತು. ಸಂಸ್ಕೃತದ ಸಂಬಂಧವನ್ನು ಕಳೆದುಕೊಡಿದ್ದರಿಂದ ವೈದ್ಯಕೀಯ ಹಾಗೂ ಸಂಗೀತ ಶಿಕ್ಷಣ ದುರ್ಬಲವಾಯಿತೇನೋ ಎಂದು ಅನಿಸುತ್ತದೆ. ಪ್ರಾಯೋಗಿಕ ಮೌಲ್ಯವುಳ್ಳ ಈ ಶಿಕ್ಷಣವನ್ನು ಕಳೆದುಕೊಂಡ ಸಂಸ್ಕೃತ ಕಾಲೇಜು ಆಕರ್ಷಣೆಯನ್ನು ಕಡಿಮೆ ಮಾಡಿಕೊಂಡಿತು.

ಸಮಕಾಲೀನ ಸಂಸ್ಕೃತ ಕಾಲೇಜು

ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ವೇದ ಶಾಸ್ತ್ರ ಆಗಮಗಳ ಮೂಲಭೂತ ಅಧ್ಯಯನಕ್ಕೆ ಅವಕಾಶವಿದೆ. ಜಾತಿ-ಮತ-ಪಂಥಗಳ ನಿರ್ಬಂಧವಿಲ್ಲದೇ ಸರ್ವರಿಗೂ ಅಧ್ಯಯನ ಮಾಡುವ ಮುಕ್ತ ಅವಕಾಶವಿದೆ. ಸುಸಜ್ಜಿತವಾದ ವಿದ್ಯಾರ್ಥಿನಿಲಯವಿದೆ. ಈ ವಿದ್ಯಾರ್ಥಿನಿಲಯದಲ್ಲಿ ೩೫ ಕೊಠಡಿಗಳಿವೆ. ೧೫೦ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಶುಲ್ಕ ರಹಿತ ಶಿಕ್ಷಣ, ಸರ್ಕಾರದ ವತಿಯಿಂದ ಭೋಜನ ಸೌಕರ್ಯವಿಲ್ಲದಿದ್ದರೂ ಮೈಸೂರು ನಗರದ ಮಹಾಜನತೆಯ, ಭೋಜನಾಲಯಗಳ ಮಠ ಮಾನ್ಯಗಳ ಹಾಗೂ ಇತರ ಸಂಸ್ಥೆಗಳ ಔದಾರ್ಯದಿಂದಾಗಿ ವಿದ್ಯಾರ್ಥಿಗಳಿಗೆ ಉಚಿತ ಭೋಜನವೂ ದೊರೆಯುತ್ತದೆ.

ವೇದಶಾಸ್ತ್ರ ಪೋಷಿಣೀ ಸಭಾ

ಶ್ರೀಮತ್ಕೃಷ್ಣರಾಜ ಮಹಾರಾಜರವರು ಅನನ್ಯ ಸಹಾಯರಾದ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳಿಗೆ ಭೋಜನಾದಿ ಸಹಾಯ ಮಾಡಿಸುತ್ತಿದ್ದರು. ವಿದ್ಯಾರ್ಥಿಗಳ ಸಂಖ್ಯೆ ವರ್ಧಿಸಿರುವುದರಿಂದ ವಿದ್ಯಾರ್ಥಿಗಳ ಭೋಜನ ವ್ಯವಸ್ಥೆಗಾಗಿ ಸಾರ್ವಜನಿಕರ ಸಹಾಯವನ್ನು ಕೇಳಲಾಯಿತು. ಈ ಕೋರಿಕೆಗೆ ಸ್ಪಂದಿಸಿ ಇಲ್ಲಿಯವರೆಗೂ ಸಹಾಯ ಮಾಡುತ್ತಿದ್ದಾರೆ.

ಈ ಕಾಲೇಜಿನಲ್ಲಿ ೨೪೦- ೩೦೦ ಜನ ವಿದ್ಯಾರ್ಥಿಗಳ ವ್ಯಾಸಂಗ ಮಾಡುತ್ತಿದ್ದಾರೆ. ೪೦ ಜನ ಅಧ್ಯಾಪಕರು ಅಧ್ಯಾಪನ ಮಾಡುತ್ತಿದ್ದಾರೆ. ೯ ಜನ ಸಿಬ್ಬಂದಿಗಳು ಸೇವೆ ಸಲ್ಲಿಸುತ್ತಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ನೇರ ಆಡಳಿತಕ್ಕೆ ಇದು ಒಳಪಟ್ಟಿದೆ. ಪ್ರಾಥಮಿಕ ಶಿಕ್ಷಣದಿಂದ ಆರಂಭಿಸಿ ಸ್ನಾತಕೋತ್ತರ ಪದವಿಯವರೆಗೆ ೧೩ ವರ್ಷಗಳ ಅಧ್ಯಯನ ಇಲ್ಲಿ ನಡೆಯುತ್ತಿದೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಸ್ನಾತಕೋತ್ತರ ಪದವಿ ಪರೀಕ್ಷೆಯನ್ನು ಸೇರಿದಂತೆ ಎಲ್ಲಾ ಪ್ರಸಿದ್ಧ ಪರೀಕ್ಷೆಯನ್ನು ನಡೆಸುತ್ತಿದೆ.

ಈಗ ಈ ಕಾಲೇಜಿನಲ್ಲಿ ಈ ಕೆಳಗಿನ ತರಗತಿಗಳು ನಡೆಯುತ್ತಿವೆ.

ಶಾಸ್ತ್ರ ವಿಭಾಗ	*:*	*೧೩ ವರ್ಷ*
೧. ಪ್ರಥಮಾ	:	೩ ವರ್ಷ
೨. ಕಾವ್ಯ	:	೨ ವರ್ಷ
೩. ಸಾಹಿತ್ಯ	:	೩ ವರ್ಷ
೪. ಪೂರ್ವವಿದ್ವತ್	:	೩ ವರ್ಷ
೫. ಉತ್ತರ ವಿದ್ವತ್	:	೨ ವರ್ಷ

ವಿದ್ವತ್ ಶಾಖೆಗಳು

೧. ತರ್ಕ	೬ ಶಕ್ತಿ ವಿಶಿಷ್ಟಾದ್ವೈತ ವೇದಾಂತ
೨. ವ್ಯಾಕರಣ	೭ ಧರ್ಮಶಾಸ್ತ್ರ
೩. ಮೀಮಾಂಸಾ	೮ ಅಲಂಕಾರ
೪. ಅದ್ವೈತ ವೇದಾಂತ	
೪. ವಿಶಿಷ್ಟಾದ್ವೈತ ವೇದಾಂತ	೯ ಜ್ಯೋತಿಷ್ಯ (ಅಧ್ಯಾಪಕ ನಿಯುಕ್ತಿ ಇಲ್ಲಾ)

ವೇದ ಶಾಖೆಗಳು : 14 ವರ್ಷಗಳು

೧.ಋಗ್ವೇದ, ೨. ಶುಕ್ಲ ಯುಜುರ್ವೇದ, ೩. ಕೃಷ್ಣಯಜುರ್ವೇದ ೪. ಸಾಮವೇದ

ಪ್ರತಿ ವೇದದಲ್ಲಿ ತರಗತಿಗಳು

೧. ಪ್ರಥಮ	:	೩ ವರ್ಷ
೨. ಪ್ರವೇಶ	:	೨ ವರ್ಷ
೩. ಮೂಲ	:	೩ ವರ್ಷ
೪. ಕ್ರಮಾಂತ	:	೩ ವರ್ಷ
೫. ಘನಾಂತ	:	೩ ವರ್ಷ

ಅಥವಾ ಶ್ರೌತಪ್ರಯೋಗ ಅಥವಾ ಸ್ಮಾರ್ತಪ್ರಯೋಗ ಆಗಮ ವಿಭಾಗ ೫ ವರ್ಷ ಪ್ರಸಕ್ತ ಆಗಮ ವಿಭಾಗವು ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಸೇರಿದ್ದು ಪರೀಕ್ಷೆಯನ್ನು ಕರ್ನಾಟಕ ರಾಜ್ಯ ಆಗದು ಪರೀಕ್ಷಾ ಮತ್ತು ಸಲಹಾ ಮಂಡಳಿ ನಡೆಸುತ್ತಿದೆ.

೧೯೨೦ರಲ್ಲಿಯೇ ಮೊಟ್ಟ ಮೊದಲು ಆಗಮ ಶಿಕ್ಷಣ ಪ್ರಾರಂಭವಾಯಿತು. ೧೯೨೬ ರಲ್ಲಿ ೪ ವರ್ಷ ಅವಧಿಯ ವಿಸ್ತೃತ ಅಧ್ಯಯನ ಪ್ರಾರಂಭವಾಯಿತು. ಮೊದಲು ಶೈವ-ಪಾಂಚರಾತ್ರ-ವೈಖಾನಸ ಆಗಮಗಳು ಆರಂಭವಾಗಿದ್ದು ಕಾಲಕ್ರಮೇಣ ೧೯೫೭ ರಲ್ಲಿ ತಂತ್ರಸಾರ ಮತ್ತು ವೀರಶೈವಾಗಮ, ೧೯೭೭ ರಲ್ಲಿ ಜೈನಾಗಮ ಆರಂಭಗೊಂಡವು ೧೩.೨೨.೧೯೫೬ ರಿಂದ ಆಗಮಶಿಕ್ಷಣ ಮತ್ತು ಪರೀಕ್ಷಾ ಸಲಹಾ ಸಮಿತಿಯನ್ನು

ಕಾರಣವಿಲ್ಲದೆ ನಗುವವನು ? ಹುಚ್ಚ

ರಚಿಸಲಾಯಿತು. ಈ ಸಮಿತಿಯು ಇಲ್ಲಿಯವರೆಗೆ ಆಗಮ ಪರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ.

ತರಗತಿಗಳು

೧. ಪ್ರವರ : ೩ ವರ್ಷ
೨. ಪ್ರವೀಣ : ೨ ವರ್ಷ

ಆಗಮ ಶಾಖೆಗಳು

೧. ಶೈವಾಗಮ : ೧೯೨೦-೧೯೨೧ ರಿಂದ
೨. ವೈಶಾಖಸಾಗಮ : ೧೯೨೦-೨೧ ರಿಂದ
೩. ಪಾಂಚರಾತ್ರಾಗಮ : ೧೯೨೦-೨೧ರಿಂದ
೪. ವೀರ ಶೈವಾಗಮ : ೧೯೫೭ರಿಂದ
೫. ಜೈನಾಗಮ : ೧೯೭೭ರಿಂದ

ಲುಪ್ತವಾದ ಅಧ್ಯಯನ ವಿಭಾಗಗಳು

ಕಾಲಕಾಲಕ್ಕೆ ಅಧ್ಯಾಪಕರ ನಿಯುಕ್ತಿಯಾಗದೇ ಸಂಬಂಧಪಟ್ಟ ವಿದ್ಯಾಶಾಖೆಯ ಉಪಾಧ್ಯಾಯರು ನಿವೃತ್ತಿಯಾದಾಗಲಿಂದ ಕೆಲವು ವಿಭಾಗಗಳು ಮುಚ್ಚಿವೆ. ಹೀಗೆ ಲುಪ್ತವಾದ ವಿಭಾಗಗಳು

೧. ಪ್ರಾಚೀನ ನ್ಯಾಯ ೪. ಯೋಗ
೨. ದ್ವೈತ ವೇದಾಂದ ೫. ತಂತ್ರಸಾರಾಗಮ
೩. ಸಾಂಖ್ಯ ೬ ವೇದ ಭಾಷ್ಯ

ವಾಚನಾಲಯ

ಆಕರ ಗ್ರಂಥಗಳ ಅಮೂಲ್ಯ ಪುಸ್ತಕ ಭಂಡಾರ ಇಲ್ಲಿದೆ. ಮಹಾರಾಜ ರವರು ೧೯೨೮ ರಲ್ಲಿ ತಮ್ಮ ಸರಸ್ವತಿ ಭಂಡಾರದ ೧೯೨೧ ಹಸ್ತ ಪ್ರತಿಗಳನ್ನು ೨೦೮೪ ಮುದ್ರಿತ ಪುಸ್ತಕಗಳನ್ನು ಈ ಕಾಲೇಜಿಗೆ ನೀಡಿದರು. ಸರಸ್ವತೀ ಪ್ರತಿಮೆಯೊಂದಿಗೆ ಸಕಲೋಪಕರಣ ಸಹಿತವಾಗಿ ಸರಸ್ವತೀ ಭಂಡಾರವನ್ನು ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿಯೇ ಸ್ಥಾಪಿಸಿದರು. ಈಗ ೫೦೦೦ ಗ್ರಂಥಗಳಿವೆ. ಇದಲ್ಲದೆ ಕಾಲೇಜಿನ ವಾಚನಾಲಯದಲ್ಲಿ ೧೧೮೦೦ ಪುಸ್ತಕ ಸಂಪತ್ತಿದೆ.

ಶಿಕ್ಷಣ ಸಿದ್ಧಿ

ಪ್ರಕೃತ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಫಲಿತಾಂಶ ಉತ್ತಮವಾಗಿದೆ. ಪಠ್ಯೇತರ ಚಟುವಟಿಕೆಗಳಲ್ಲಿ ಗಣನೀ ಯ ಸಾಧನೆ ಕಂಡು ಬಂದಿದೆ. ಅಖಿಲ ಭಾರತ ಮಟ್ಟದ ಶಾಸ್ತ್ರ ವಾಕ್ಪ್ರತಿಯೋಗಿತಾ ಸ್ಪರ್ಧೆಯಲ್ಲಿ ನಿರಂತರವಾಗಿ ವಿಜಯ ಸಾಧಿಸಿ ಕರ್ನಾಟಕ ಪರ್ಯಾಯ ಪಾರಿತೋಷಕಗಳಿಸಿ ಕೀರ್ತಿ ತಂದಿದ್ದಾರೆ.

ರಾಜ್ಯ ಮಟ್ಟದಲ್ಲಿ ನಡೆಯುವ ಸಂಸ್ಕೃತ ಸಂಬಂಧಿ ಸ್ಪರ್ಧೆಗಳಲ್ಲಿ ಮೈಸೂರು ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಅತ್ಯಧಿಕ ಬಹುಮಾನಗಳಿಸಿದ್ದಾರೆ.

ಉದಾ:- ೧. ಮುಂಚುಕಡೆ ಸ್ಮಾರಕ ರಾಜ್ಯ ಮಟ್ಟದ ತರ್ಕ ಸ್ಪಧೆ ಪ್ರಥಮ ಬಹುಮಾನ ೨. ಕಸ್ತೂರಿ ರಂಗನ್ ಸ್ಮಾರಕ ರಾಜ್ಯ ಮಟ್ಟದ ತರ್ಕ ಸ್ಪರ್ಧೆ ಪ್ರಥಮ, ತೃತೀಯ ಬಹುಮಾನ. ೩. ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ 16 ಬಹುಮಾನಗಳು ೪. ರಾಜ್ಯ ಮಟ್ಟದ ಭಾಷಣ ಸ್ಪರ್ಧೆ 15 ಬಹುಮಾನಗಳು

ಇದಲ್ಲದೆ ಮೈಸೂರಿನಲ್ಲಿ ನಡೆಯುವ ಅಂತರ ಕಾಲೇಜು ವಿದ್ಯಾರ್ಥಿ ನಿಲಯ, ವಿಶ್ವ ವಿದ್ಯಾನಿಲಯಗಳ ಕನ್ನಡ ಚರ್ಚಾಸ್ಪರ್ಧೆ, ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿರುವುದು ಇಲ್ಲಿಯ ಶೈಕ್ಷಣಿಕ ಪರಿಸರದ ಬಗ್ಗೆ ಹೆಮ್ಮೆ ತರಿಸುತ್ತದೆ.

ಸಂಸ್ಕೃತ ಕಾಲೇಜಿಗೆ ಕಾಯಕಲ್ಪ

ಭಾರತೀಯ ಸಂಸ್ಕೃತಿಯ ಮುಖವಾಣಿ ಸಂಸ್ಕೃತ. ಸಂಸ್ಕೃತ ಸಾಹಿತ್ಯದ ಎಲ್ಲಾ ಶಾಖೆಗಳ ಅಧ್ಯಯನ ಒಂದೆಡೆ ಎಲ್ಲೂ ನಡೆಯುತ್ತಿಲ್ಲ. ವಿಶ್ವದಲ್ಲೇ ಅತಿ ಹೆಚ್ಚು ವಿದ್ಯಾ ಶಾಖೆಗಳ ಅಧ್ಯಯನ ನಡೆಯುತ್ತಿರುವ ಸಂಸ್ಥೆ ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆ. ಇಲ್ಲಿಯೂ ಎಲ್ಲಾ ವಿದ್ಯಾ ಶಾಖೆಗಳ ಅಧ್ಯಯನ ನಡೆಯುತ್ತಿಲ್ಲ ಎಂಬುದು ವಿಶಾದಕರ. ಅಧ್ಯಯನ ಮಾಡುವವರ ಸಂಖ್ಯೆ ಕಡಿಮೆ ಇದೆ ಎನ್ನುವ ಕಾರಣದಿಂದ ಅಧ್ಯಯನ ಅವಕಾಶವನ್ನೇ ಮುಚ್ಚಿದರೆ ಪರಂಪರಾಗತವಾಗಿ ನಡೆದು ಬಂದ ವಿದ್ಯೆಯೇ ಲುಪ್ತವಾಗುತ್ತದೆ. ಆದ್ದರಿಂದ ಸನಾತನ ಧರ್ಮದ ಬೆನ್ನೆಲುಬಾದ ಈ ವಿದ್ಯಾಶಾಖೆಗಳನ್ನು ಉಳಿಸುವ ದೃಷ್ಟಿಯಿಂದ ಬೆಳೆಸುವ ಛಲದಿಂದ ಸರ್ಕಾರವು ಲುಪ್ತವಾದ ಶಾಖೆಗಳನ್ನು ಪುನರಾರಂಭಗೊಳಿಸಬೇಕು. ಹಾಗೂ ಇನ್ನಿತರ ಸಂಸ್ಕೃತ ಸಂಬಂಧಿ ಶಾಖೆಗಳಾದ ಅಥರ್ವ ವೇದ, ಮಂತ್ರ ಶಾಸ್ತ್ರ, ವಾಸ್ತು ಶಾಸ್ತ್ರ ಬೌದ್ಧಾಗಮ ತಂತ್ರಶಾಸ್ತ್ರ, ನಾಟ್ಯ ಶಾಸ್ತ್ರ, ಮುಂತಾದವುಗಳ ಅಧ್ಯಯನಕ್ಕೆ ಅವಕಾಶ ಪರಿಕಲ್ಪಿಸಬೇಕು. ಈ ಬಗ್ಗೆ ಸೂಕ್ತ ಪ್ರಚಾರ ನೀಡಿ ಸಾರ್ವಜನಿಕರ ಗಮನ ಸೆಳೆಯಬೇಕು.

ಈ ಕಾಲೇಜಿನಲ್ಲಿ ಮಹಾರಾಜರು ಅನುಗ್ರಹಿಸಿದ ಪಾಠೋಪಕರಣ, ಪೀಠೋಪಕರಣಗಳ ಹಾಗೂ ಗ್ರಂಥಾಲಯದ ಹೊರತಾಗಿ ಯಾವುದೇ ಗಮನೀಯ ಅಭಿವೃದ್ಧಿಯನ್ನು ಮಾಡದಿರುವುದು ವಿದ್ಯಾರ್ಥಿಗಳ ಆಕರ್ಷಣೆ ಕಳೆದುಕೊಳ್ಳಲು ಕಾರಣವಾಗಿದೆ. ಆದ್ದರಿಂದ ಸೂಕ್ತವಾದ ಪಾಠೋಪಕರಣ, ಪೀಠೋಪಕರಣ, ವಾಚನಾಲಯ ಹಾಗೂ ಕಂಪ್ಯೂಟರ್‌ನಿದ ಆಧುನಿಕ ಸೌಲಭ್ಯ ಪರಿಕಲ್ಪಿಸಿ ಪಾಠಶಾಲೆಗೆ ಕಾಯಕಲ್ಪ ನೀಡಬೇಕಾಗಿದೆ. ಹೊರ ರಾಜ್ಯಗಳಲ್ಲಿಯೂ ಸಂಸ್ಕೃತಜ್ಞರ ಬೇಡಿಕೆ ಇದ್ದರೂ ಸಹ ಇಲ್ಲಿಯ ಪದವೀಧರರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪ್ರೌಢಶಿಕ್ಷಣ ಮಂಡಳಿಯು ನೀಡುತ್ತಿರುವುದರಿಂದ ಹೊರ ರಾಜ್ಯದಲ್ಲಿ ಮನ್ನಣೆ ದೊರೆಯುತ್ತಿಲ್ಲ. ಆದ್ದರಿಂದ ವಿಶ್ವ ವಿದ್ಯಾನಿಲಯದ ಮೂಲಕ ಪರೀಕ್ಷೆ ಹಾಗೂ ಪದವೀ ನೀಡುವ ವ್ಯವಸ್ಥೆ ಖಂಡಿತ ಆಗಬೇಕು.

ಬರಹ : ಪೂಕ್ಕುಳಂಡ್ರ ಕೀರ್ತಿ ಕುಂಜ್ಞಪ್ಪ, ಮೈಸೂರು. 2ನೇ ವರ್ಷದ ಪತ್ರಿಕೋದ್ಯಮ

ಕ್ರಿಯಾಶೀಲ ಸಂಘಟಕರ ಕರುಣಾಕರ ಬರೆಮೇಲು



ಸುಳ್ಯ ತಾಲ್ಲೂಕಿನ ಕೊಡುಗೆಯಾಗಿ, ಮಂಗಳೂರಿನಲ್ಲಿ ರಾಜಕೀಯ ಮತ್ತು ಉದ್ಯಮ ಕ್ಷೇತ್ರದಲ್ಲಿ ಸ್ವಸಾಮರ್ಥ್ಯದಿಂದ ಬೆಳೆದು ಮಿಂಚುತ್ತಿರುವ ಹೆಸರು ಬರೆಮೇಲು ಕರುಣಾಕರ ಗೌಡ. ತನ್ನ ವಿದ್ಯಾರ್ಥಿ ದೆಸೆಯ ಹದಿನೆಂಟರ ಎಳವೆಯಲ್ಲಿಯೇ ರಾಜಕೀಯಕ್ಕೆ ಧುಮುಕಿ 1983 ರಲ್ಲಿ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಸಂಘಟನೆಯಾದ N.S.U.I. ಘಟಕದ ಜಿಲ್ಲಾ ಉಪಾಧ್ಯಕ್ಷರಾಗಿ ನಂತರ ಕಾರ್ಯದರ್ಶಿಯಾಗಿ, 1990 ರಿಂದ ಯುವ ಕಾಂಗ್ರೆಸ್‌ನಲ್ಲಿ ಪದಾಧಿಕಾರಿಯಾಗಿ, 2002 ರಿಂದ ಜಿಲ್ಲಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ ರಾಜಕೀಯ ಕ್ಷೇತ್ರದಲ್ಲಿ ಹಂತ ಹಂತವಾಗಿ ಮೇಲೇರುತ್ತಿರುವ ಯುವಕ ಕೊಡುಗೈ ದಾನಿಯಾಗಿಯೂ ಚಿರಪರಿಚಿತರು. ಎನ್. ಎಸ್. ಎಸ್. ರೊಟರ್‍ಯಾಕ್ಟ್ ಕ್ಲಬ್ ಹೀಗೆ ಸಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು.

2001 ರಲ್ಲಿ ಆಯೋಜಿಸಿದ ದ. ಕ. ಜಿಲ್ಲಾ ಕರಾವಳಿ ಉತ್ಸವದ ಗೌರವ ಸದಸ್ಯರಾಗಿ, 2001 ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ರಿಜಿಸ್ಟ್ರೇಷನ್ ಕಮಿಟಿಯಲ್ಲಿ ದ.ಕ. ಜಿಲ್ಲಾ ಪ್ರತಿನಿಧಿಯಾಗಿ ಏಕ ಮಾತ್ರ ಸದಸ್ಯರಾಗಿ, ಕೇರಳ ವಿಧಾನ ಸಭೆಯ, ಮಂಜೇಶ್ವರ ಕ್ಷೇತ್ರದ ಚುನಾವಣೆಯಲ್ಲಿ, ಕರ್ನಾಟಕದಿಂದ ನಿಯೋಜಿತ ಸಹ ವೀಕ್ಷಕರಾಗಿ, ಇತ್ತೀಚೆಗೆ ನಡೆದ ಮಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಚುನಾವಣಾ ಜವಾಬ್ದಾರಿ ಹೊತ್ತು, ಕಾಂಗ್ರೆಸ್ ಪಕ್ಷದಲ್ಲಿ ವಿವಿಧ ಹಂತಗಳಲ್ಲಿ ತನ್ನ ಇಪ್ಪತ್ತು ವರ್ಷಗಳ ಸುದೀರ್ಘ ರಾಜಕೀಯ ಜೀವನದ ಜವಾಬ್ದಾರಿಯುತ ಸ್ಥಾನಗಳಲ್ಲಿ ಮಿಂಚಿರುವುದು ಇವರ ಪಕ್ಷ ಸಾಧನೆ.

ಈಗಿನ ಜಿಲ್ಲಾ ಉಸ್ತುವಾರಿ ಸಚಿವರಾದ ರಮಾನಾಥ ರೈ ಮತ್ತು ಲೋಕಸಭಾ ಸದಸ್ಯರಾದ ವಿನಯಕುಮಾರ್ ಸೊರಕೆ ಮತ್ತು ಶ್ರೀಯುತರು ಕಾಲೇಜ್ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಮಂಗಳೂರಿನ ಬಂಟ್ಸ್ ಹಾಸ್ಟೆಲ್‌ನಲ್ಲಿ ವಾಸವಾಗಿದ್ದರು. ಅದೇ ಸಂದರ್ಭದಲ್ಲಿ ಕರುಣಾಕರ ಗೌಡರ ರಾಜಕೀಯ ಪ್ರವೇಶವಾಗಿದ್ದು ಜಿಲ್ಲಾ N.S.U.I ಯ ಉಪಾಧ್ಯಕ್ಷರಾದರು. ಇವರ ರಾಜಕೀಯ ಪ್ರವೇಶಕ್ಕೆ ಈ ಇಬ್ಬರ ಪ್ರೇರಣೆಯೇ ಮೂಲ.

ಪ್ರತಿಷ್ಠಿತ ಬರೆಮೇಲು ಮನೆತನದ ಜಮೀನ್ದಾರಿ ಕುಟುಂಬದಲ್ಲಿ ಬೆಳೆದು ಮಂಗಳೂರಿನಲ್ಲಿ ತನ್ನ ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗೊಸ್ಕರ ಹೋಟೆಲ್ ಉದ್ಯಮ ಕ್ಷೇತ್ರಕ್ಕೆ ಧುಮುಕಿ, ಶ್ರೀನಂದನೇಶ್ವರ ಪ್ರಸನ್ನ ಇಂಡಸ್ಟ್ರೀಯಲ್ ಕ್ಯಾಂಟೀನ್ ಸರ್ವೀಸಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ N.I.T.Kಯಲ್ಲಿ ಎರಡು ಕ್ಯಾಂಟೀನ್‌ಗಳನ್ನು ನಡೆಸುತ್ತಿದ್ದಾರೆ. ಕೆ. ಎ. ಎಸೋಶಿಯೇಟ್ಸ್ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ, ಸರ್ಕಾರ ನಡೆಸುವ ವಿದ್ಯಾರ್ಥಿ ನಿಲಯಗಳಿಗೆ ಮತ್ತು ಖಾಸಗಿ ಸಂಸ್ಥೆಗಳಿಗೆ ಆಹಾರ ಸರಬರಾಜು ಮಾಡುವ ಗುತ್ತಿಗೆ ಪಡೆದು ಉದ್ಯಮ ಕ್ಷೇತ್ರವನ್ನು ವಿಸ್ತರಿಸಿ ಕೊಂಡಿದ್ದಾರೆ. ಪ್ರಭಾವಿ ರಾಜಕಾರಣಿಯಾದ ಬರೆಮೇಲು ಸದ್ಯ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇವರುಗಳ ಶುಭ ಹಾರೈಕೆಗಳು.

-ಸಂಗಾತಿ

ಸುಳ್ಯ ಗೌಡ ಯುವ ಸಮಾವೇಶದ ನಿಗೂಢ ಶಕ್ತಿಗಳು

ಯಾವುದೇ ಯೋಚನೆಗಳು ಯೋಜನೆಗಳಾಗಿ ಮಾರ್ಪಟ್ಟು ಸಮುದಾಯಕ್ಕೆ ಪ್ರಯೋಜನ ದೊರಕಬೇಕಾದರೆ ಅದರ ಹಿಂದೊಂದು ಸಮರ್ಥವಾದ ಸಂಘಟನೆಯೊಂದು ಬೇಕು. ಸಂಘಟಕರು ಬೇಕು.

ಈ ಗೌಡ ಸಮಾವೇಶದ ಹಿಂದೆ, ಸಂಘಟನೆಯ ಹಿಂದೆ ಅಂತಹ ಒಂದು ಸಂಘಟಕರ ತಂಡವಿದೆ. ಈ ತಂಡದ ಅದಮ್ಯ ಉತ್ಸಾಹ ಮತ್ತು ಅಪರಿಮಿತ ಶ್ರಮದ ಫಲವೇ ತಾಲ್ಲೂಕು ಗೌಡ ಸಮಾವೇಶ. ತನ್ನದೇ ಆದ ಪ್ರಭಾವಲಯಗಳಿಂದ ಸಮುದಾಯದಲ್ಲಿ ಪ್ರಭಾವಿತರಾದ ಸಂಘಟನೆಗೂ ಬಳಸಿಕೊಂಡದ್ದರಿಂದಲೇ ಇಷ್ಟು ಮಾತ್ರದ ಕೆಲಸ ಸಾಧ್ಯವಾಯಿತು.

ಸಮಾವೇಶದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಡಿ. ಬಿ. ಬಾಲಕೃಷ್ಣ ನೆರೆಯ ಪರಾಜೆಯವರಾದರೂ ಸುಳ್ಯದೊಂದಿಗೇ ಗುರುತಿಸಿಕೊಂಡವರು. ಗುರುತರ ಜವಾಬ್ದಾರಿಗಳನ್ನು ಚಾಕಚಕ್ಯತೆಯಿಂದ ನಿಭಾಯಿಸಬಲ್ಲ ನಿಪುಣ ಸಮುದಾಯದ ಕ್ರಿಯಾಶೀಲ ನಾಯಕ.

ಸಂಘಟನೆಗಳ 'ಮಾಸ್ಟರ್ ಮೈಂಡ್' ಎಂದೇ ಗುರುತಿಸಲ್ಪಟ್ಟಿರುವ ಪ್ರಾಂಶುಪಾಲ ಕೆ. ಆರ್. ಗಂಗಾಧರ ಈ ಸಮಾವೇಶದ ನಿರ್ದೇಶಕ. ಯಶಸ್ವೀ ಸಮ್ಮೇಳನವೊಂದರ ಸಮರ್ಥ ನಿರ್ದೇಶನದ ಹೊಣೆಹೊತ್ತು ಈ ಕಾಯಕದ ನಾಯಕನಾಗಿ ಕಂಗೊಳಿಸುತ್ತಿದ್ದಾರೆ.

ಸಂಘದಿಂದ ನಡೆಸಲ್ಪಡುವ ಶ್ರೀ ವೆಂಕಟ್ರಮಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಪಿ. ಸಿ. ಜಯರಾಂ

ತನ್ನ ಪ್ರಾಮಾಣಿಕ ಮತ್ತು ಪಾರದರ್ಶಕವಾದ ರಾಜಕಾರಣದಿಂದ ಹಲವು ಜವಾಬ್ದಾರಿಗಳನ್ನು ಪಡೆದುಕೊಂಡವರು. ಜಯರಾಮರು ಸ್ಪರ್ಧಿಸಿದ ಎಲ್ಲೆಡೆಯೂ ಜಯಮಾಲೆ ಕೊರಳಿಗೆ ಹಾಕಿಕೊಂಡವರು. ಸುಳ್ಯ ತಾಲ್ಲೂಕು ಪಂಚಾಯತ್ ಉಪಾಧ್ಯಕ್ಷ ಸ್ಥಾನ ಪಡೆದು ಆ ಹುದ್ದೆಗೆ ನ್ಯಾಯವನ್ನು ಸಲ್ಲಿಸುತ್ತಿರುವವರು.

'ಮಾತು ಕಡಿಮೆ-ಹೆಚ್ಚು ದುಡಿಮೆ' ಈ ಮಾತಿಗೊಂದು ಪ್ರತ್ಯಕ್ಷ ಉದಾಹರಣೆ ಕೆ. ಸಿ. ನಾರಾಯಣ ಗೌಡ ಸಂಘದ ಅಧ್ಯಕ್ಷ. ಒಂದರ್ಥದಲ್ಲಿ ಮೌನ ಕ್ರಾಂತಿಯ ಹರಿಕಾರ. ಪ್ರಭಾವಿ ಸಮುದಾಯವೊಂದರ ಸಾರಥ್ಯ ವಹಿಸಿಕೊಂಡವನಿಗೆ ಮಹಾಸಂಯಮಬೇಕು. ಅದು ನಾರಾಯಣರಲ್ಲಿದೆ. ಹಾಗಾಗಿಯೇ ಕೆ.ಸಿ. ಎಂದರೆ ಎಲ್ಲರಿಗೂ ಖುಷಿ.

ಸುಳ್ಯದ ಯುವಜನರ ಚೈತನ್ಯದ ಚೆಲುಮೆಯ ಪ್ರತೀಕವಾಗಿ ಉದಯಿಸಿದ್ದು 'ದಿನೇಶ' ಮಡಪ್ಪಾಡಿ. ಸಂಘಟನಾ ಚತುರತೆಯಿಂದಲೇ ನಾಯಕತ್ವ ಪಡೆದುಕೊಂಡವರು, ಜೇಸಿ, ಯುವಜನ ಸಂಯುಕ್ತ ಮಂಡಳಿಗಳ ಅಧ್ಯಕ್ಷರಾಗಿ ಕ್ರಿಯಾತ್ಮಕ ಚಟುವಟಿಕೆಗಳಿಗೆ ಚಾಲನೆಯಿತ್ತವರು. ದೈತ್ಯ ಹೊಣೆ ಹೊತ್ತವರು. ಅರ್ಹವಾಗಿಯೇ ಪ್ರಶಂಸೆ ಗಿಟ್ಟಿಸಿಕೊಂಡವರು. ಸಮುದಾಯದ ಪ್ರತಿಭಾನ್ವಿತರಾದ ಇವರು ಸಂಘದ ಪ್ರಧಾನ ಕಾರ್ಯದರ್ಶಿ.

ಸಮುದಾಯದ ಸಾಧನೆಗಳು ಆಚಂದ್ರಾರ್ಕವಾಗಿ ಶೋಭಿಸಬೇಕಿದ್ದರೆ, ಬೇಕು ಯೋಗ್ಯ ಶಿಕ್ಷಣ. ಅದನ್ನು ನೀಡುವ ಮಹಾತ್ಮಗಾಂಧಿ ಮಲ್ನಾಡ್ ಪ್ರೌಢಶಾಲೆಯ ಸಂಚಾಲಕ ಚಂದ್ರಾಕೋಲ್ಚಾರು. ರಾಜಕಾರಣ, ಸಹಕಾರ, ಧಾರ್ಮಿಕ ಕೈಗಳೊಂದಿಗೆ ಸಮುದಾಯದ ಅಭಿವೃದ್ಧಿಯತ್ತ ದೃಷ್ಟಿ ನೆಟ್ಟು ಮುಂದಡಿ ಇಡುತ್ತಿದ್ದಾರೆ ಚಂದ್ರಾ ಕೋಲ್ಚಾರು.

ಸಮ್ಮೇಳನದಂದು ಹೊರತರಲಾಗುವ ಸ್ಮರಣ ಸಂಚಿಕೆ 'ಬಾಂಧವ್ಯದ' ಸಂಪಾದಕ ಸೀತಾರಾಮಕೇವಳ. ಕೇವಲ ಶಿಕ್ಷಣ ಕ್ಷೇತ್ರಕ್ಕೆ ತನ್ನ ಕಾರ್ಯವನ್ನು ಸೀಮಿತಗೊಳಿಸದೆ ಸೀಮಾತೀತವಾಗಿ ಬೆಳೆದ ಉತ್ಸಾಹಿ. ಎಲ್ಲ ಸಂಘಟನೆಗಳೊಂದಿಗೆ ಬಾಂಧವ್ಯ ವಿರಿಸಿಕೊಂಡವರು.

ಸಂಘಟನೆಯಿಂದ ಸಮಾವೇಶದೆಡೆಗೆ

ಯಾವುದೇ ಜನಾಂಗವೊಂದರ ಸಂಸ್ಕೃತಿ, ಇತಿಹಾಸದ ಉಲ್ಲೇಖ ಪದಗಳ ಮೂಲಕ ಉಲ್ಲೇಖಿಸಲು ಸಾಧ್ಯವಾಗುವಂತದ್ದಲ್ಲ. ಅದು ಬರಹದ ಮಿತಿಯೂ ಹೌದು, ವಾಸ್ತವವೂ ಹೌದು. ಎಲ್ಲ ಬರಹ, ಟೀಕೆ-ಟಿಪ್ಪಣಿ, ವಿವರಣೆಗಳಿಂದ ಮೀರಿ ನಿಲ್ಲುವುದು ಆ ಸಮುದಾಯದ ಸಂಸ್ಕೃತಿ.

ಈ ಎಚ್ಚರ ನಮ್ಮಲ್ಲಿರುತ್ತಾ ಗೌಡರ ಬಗ್ಗೆ ಬರೆಯಲು ಹೊರಟಾಗ ಅತಿ ಅಪ್ಯಾಯಮಾನವಾದ ಸಂಸ್ಕೃತಿಯೊಂದರ ಅರಿವಾಗುತ್ತದೆ. ಇದು ಕೇಳಿ ತಿಳಿದುಕೊಳ್ಳುವಂತದ್ದಲ್ಲ. ನೋಡಿಯೇ ಅರಿಯಬೇಕು. ಗೌಡರ ಆಚಾರ-ವಿಚಾರಗಳ ಬಗ್ಗೆ ಈ ಸಮಾವೇಶದ ಸಂಭ್ರಮದ ಹೊತ್ತಿನಲ್ಲಿ ಅರಿಯುವುದು ಅವಶ್ಯಕವೂ ಆಗಬೇಕು.

ಸುಳ್ಯ ತಾಲ್ಲೂಕು ಗೌಡ ಸಮುದಾಯಕ್ಕೆ ಅತಿ ಬಲಿಷ್ಟ ಶಕ್ತಿಯಾಗಿ ಭೂಮಿಕೆ ಒದಗಿಸಿದೆ. 'ಊರಿಗೊಬ್ಬ ಗೌಡ-ನಾಡಿಗೊಬ್ಬ ದೊರೆ' ಎಂಬುದೇ ಈ ಸಮುದಾಯದ ಬಗೆಗಿನ ಕ್ಲುಪ್ತ ವಿವರಣೆ. ರಾಜಕೀಯ, ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಸುಳ್ಯ ಅವರಿಗೆ ಮಹತ್ವವಾದ ಸ್ಥಾನ ಕಲ್ಪಿಸಿಕೊಟ್ಟಿದೆ. ನೂರಾರು ವರ್ಷ ಓಡಾಡಿದ ಈ ನೆಲ ಅವರ ಪಾಲಿಗೆ ಮಣ್ಣು ಮಾತ್ರವೇ ಅಲ್ಲ. ನಿಧಾನಕ್ಕೆ ಅವರನ್ನು ವ್ಯಾಪಿಸಿ ಅವರ ಅಂತರಂಗದ ನೆಲೆಯಾಗಿ, ಸೆಲೆಯಾಗಿ ಬಿಟ್ಟಿದೆ.

ಹೀಗಿರುವ ಈ ನೆಲೆಯನ್ನು ಭದ್ರವಾಗಿ ಛಾಪಿಸಿಬಿಟ್ಟು ಸಂಘಟನಾ ಶಕ್ತಿಯ ಪ್ರದರ್ಶನದ ಇರಾದೆಯಿಂದ ಅದಷ್ಟು ಉಮೇದಿನಿಂದಲೇ ಸಂಘಟನೆಯ ಕೆಲಸಕ್ಕೆ ಕೈ ಹಾಕಲಾಗಿದೆ. ಹತ್ತು ಕುಟುಂಬ ಹದಿನೆಂಟು ಗೋತ್ರದ ಈ ಸಮುದಾಯ ಸುಳ್ಯ ತಾಲ್ಲೂಕಿನ ಪ್ರಗತಿಯಲ್ಲಿ ಮಹಾಪಾತ್ರವನ್ನೇ ವಹಿಸಿದೆ. ತನ್ನ ಶಕ್ತಿಯನ್ನು ವ್ಯಯಿಸಿದೆ. ಎಲ್ಲಾ ಚಟುವಟಿಕೆಗಳಲ್ಲೂ ಢಾಳಾಗಿ ಕಾಣುವ ಸಮುದಾಯದ ಗಣ್ಯರ ಗಡಣ ಹೊಸತೊಂದು ವಿಪ್ಲವಕ್ಕೆ ನಾಂದಿ ಹಾಡಲಿದೆಯೇ? ಕಾಲ ಹೇಳಬೇಕು.

ಪ್ರಗತಿ ಮತ್ತು ಸಂಸ್ಕೃತಿ ಇವೆರಡೂ ಜತೆಯಾಗಿ ಸಾಗಲು ಸಾಧ್ಯವಿಲ್ಲ ಎಂಬುದು ಕೇಳಿ ಬರುವ ಮಾತು. ಆದರೆ ಸುಳ್ಯ ಈ ಸಮುದಾಯದವರಿಂದ ಪ್ರಗತಿ ಹೊಂದುವುದರ ಜತೆ ಜತೆಗೇ ತನ್ನ ವಿಶಿಷ್ಟ ಸಂಸ್ಕೃತಿಯನ್ನೂ ಅನಾವರಣಗೊಳಿಸುತ್ತಾ ಬಂದಿದೆ. ಅನನ್ಯ ಸೊಗಡನ್ನು ಬಿಂಬಿಸಿದ್ದು ಒಂದು ಕಡೆಯಾದರೆ, ಉದ್ದಿಮೆ ಉದ್ಯೋಗಗಳ ಉತ್ಕರ್ಷಕ್ಕೆ ಕಾರಣವಾದದ್ದು ಮತ್ತೊಂದು ಕಡೆ. ಅವೆಷ್ಟು ಉದಾಹರಣೆಗಳ ಸಾಕ್ಷ್ಯಾಧಾರಗಳು ಬೇಕು?

ಅಖಂಡತ್ವ, ಏಕೀಕೃತ ಎಂಬ ಪದಗಳು ಭಾವನಾತ್ಮಕ ನೆಲೆಗಟ್ಟಿನಲ್ಲಿ ಆಪ್ತವೇ ಆಗಿದ್ದರೂ ಭಾವನಾತ್ಮಕತೆಯ ಮಿತಿ ವಾಸ್ತವತೆಯಲ್ಲಿರುತ್ತದೆ. ಇಂತಹ ವಾಸ್ತವತೆಯ ಮೂಲಕ ನೋಡುವುದಾದರೆ ಇವರ ಪ್ರಾಬಲ್ಯವನ್ನು ಪಕ್ಕಕ್ಕಿಡಲು ಸಾಧ್ಯವೇ ಇಲ್ಲ. ಅಂಥ ಒಂದು ನಿಟ್ಟಿನಲ್ಲಿ ಸಮುದಾಯವನ್ನು ಏಕತ್ರಗೊಳಿಸುವ ದೃಷ್ಟಿಯಿಂದ ಸಮಾವೇಶ ನಡೆಯುತ್ತಿದೆ.

ಯಾವ ನದಿ ಎಷ್ಟೇ ಪವಿತ್ರವಾಗಿದ್ದರೂ ತನ್ನ ನಿರಂತರ ಹರಿಯುವಿಕೆಯನ್ನು ನಿಲ್ಲಿಸಿ ಒಂದೆಡೆ ಮಡುಗಟ್ಟಿತೆಂದರೆ ಉಪಯೋಗ ರಹಿತವಾಗುವುದರಲ್ಲಿ ಸಂಶಯವಿಲ್ಲ. ಜಗತ್ತಿನ ಯಾವುದೇ ಉದಾತ್ತ ಮೌಲ್ಯವಿರಬಹುದು. ಆದರೆ ಅದು ಕಾಲ ಗತಿಯಲ್ಲಿ ತಾನೂ ಪೂರಕ ರೀತಿಯಲ್ಲಿ ಬದಲಾಗುತ್ತಾ ಹೋಗದಿದ್ದರೆ ಅದರಿಂದೇನೂ ಪ್ರಯೋಜನವಿಲ್ಲ. ಎಚ್ಚರವನ್ನು ಜಾಗೃತಿಯಲ್ಲಿಡುತ್ತಾ ಗೌಡ ಸಮುದಾಯ ತನ್ನ ಸಂಸ್ಕೃತಿಯನ್ನು ಆಕಾಶಕ್ಕೊಡಲು ಸಮಾವೇಶವನ್ನು ಬಳಸಿಕೊಳ್ಳುತ್ತಿದೆ.

ಸಮುದಾಯದ ಪ್ರೀತಿ ಮರೆಯಲಾರದ ನೆನಪು, ಬಿಡಿಸಲಾಗದ ಬಂಧನ..... ಇಂಥ ತರಹೇವಾರಿ ವಿಚಾರ ವಿನಿಮಯಗಳೊಂದಿಗೆ ಉತ್ಸಾಹದ ಪ್ರತೀಕವಾಗಿ ಸಂಘಟನೆಯ ಪ್ರತೀಕ್ಷೆಯೊಂದಿಗೆ ಸಂಘಟಕರು ದುಡಿಯುತ್ತಿದ್ದಾರೆ. ಸುಳ್ಯ ತಾಲ್ಲೂಕಿನ ಒಡನಾಡಿಗಳಾಗಿ ಸಮಾಜದ ಜೀವನಾಡಿಗಳಾಗಿ, ಸಮಾಜದ ಜೀವನಾಡಿಗಳಾಗಿ ಅನನ್ಯತೆಯನ್ನು ಮೆರೆದ ಗೌಡರ ಸಮಾವೇಶ ಯಶಸ್ಸಿನ ಹಾದಿಯನ್ನು ಕಂಡಿದೆ.

-ಸುದ್ದಿ ಪತ್ರಿಕೆ, ಸುಳ್ಯ.

ಸುಳ್ಯ ತಾಲ್ಲೂಕಿನ ಗೌಡರ ಪುರಾತನ ಮನೆಸ್ಥಾನಗಳು

ಸುಳ್ಯ ತಾಲ್ಲೂಕಿನ ಯಾವುದೇ ಗೌಡ ಕುಟುಂಬ ಒಂಟಿಯಾಗಿಲ್ಲ. ಹಲವಾರು ಕುಟುಂಬಗಳು ಸೇರಿ ಒಂದು ಮನೆ, ಮನೆತನ ರೂಪುಗೊಳ್ಳುತ್ತದೆ. ಇವರೆಲ್ಲರಿಗೂ ಒಂದು ಮೂಲದ ಮನೆ ಇದೆ. ಆ ಮನೆಗೆ ತನ್ನದೇ ಆದ ಚರಿತ್ರೆ, ಹಿರಿಮೆ ಗರಿಮೆಗಳಿರುತ್ತವೆ. ಊರಿನ ಆಡಳಿತ ನಿರ್ವಹಣೆಯಲ್ಲಿ ಊರಿನ ದೈವ ದೇವಸ್ಥಾನಗಳ ಕಟ್ಟುಕಟ್ಟಳೆಗಳ ನಿರ್ವಹಣೆಯಲ್ಲಿ, ಮದುವೆ ಮತ್ತು ಶವಸಂಸ್ಕಾರದವರೆಗೆ ವಿವಿಧ ಹಕ್ಕುಬಾಧ್ಯತೆಗಳಿರುತ್ತವೆ. ಸಾರ್ವಜನಿಕವಾಗಿ ಸಲ್ಲತಕ್ಕ ಮರ್ಯಾದೆಗಳಿರುತ್ತವೆ. ವಿಶೇಷ ಸ್ಥಾನಮಾನಗಳಿದ್ದು ಅವುಗಳು ಪರಂಪರಾಗತವಾಗಿ ಹರಿದು ಬಂದಿರುತ್ತದೆ. ಇಲ್ಲಿ ಅವರ ಶ್ರೀಮಂತಿಕೆ ಲೆಕ್ಕಕ್ಕೆ ಬರುವುದಿಲ್ಲ. ಸುಳ್ಯ ತಾಲ್ಲೂಕಿನಲ್ಲಿ ಇಂದು ಗಮನಕ್ಕೆ ಬರುವ ಕೆಲವೇ ಮನೆಸ್ಥಾನಗಳನ್ನು ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಇದು ಕೇವಲ ಮೇಲ್ನೋಟಕ್ಕೆ ಕಾಣುವ ಸಂಗತಿಗಳಾಗಿದ್ದು, ಕ್ಷೇತ್ರ ಕಾರ್ಯ ಮಾಡಿದಾಗ ಅದೆಷ್ಟೋ ಬಾಕಿಯಾಗಿದೆ ಎಂಬುದು ಗೊತ್ತಾಗಬಹುದು. ಆ ದೃಷ್ಟಿಯಲ್ಲಿ ಇದೊಂದು ಆರಂಭ ಮಾತ್ರ.

ಒಂದು ಪ್ರದೇಶದಲ್ಲಿ ಒಕ್ಕಲು ಹೂಡಿದ್ದ ಒಂದೇ ಮನೆ ತಲೆ ತಲಾಂತರದಲ್ಲಿ ವೃದ್ಧಿಸುತ್ತಾ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತದೆ. ಒಂದೇ ಮನೆ ಪಾಲಾಗಿ ಹಲವು ಮನೆಗಳನ್ನು ಹೊಂದಿ ಒಂದು ವಿಶಾಲ ಬೈಲಿನಲ್ಲಿ ಅಲ್ಲಲ್ಲಿ ಮನೆ ಮಾಡಿಕೊಂಡು ಬಂದಿದ್ದಾರೆ. ಪಕ್ಕದೂರಿಗೆ ವಲಸೆ ಹೋಗಿ ಅಲ್ಲಿಯೂ ಅವರದ್ದೆ ಮನೆಗಳ ಸಂಖ್ಯೆ ಹೆಚ್ಚುತ್ತದೆ. ಘಟ್ಟದ ಮೇಲಿನ ಕೊಡಗಿನಲ್ಲಿ ನಮ್ಮ ತಾಲ್ಲೂಕಿನೊಳಗೆ ಮನೆಸ್ಥಾನಗಳನ್ನು ಹೊಂದದ ಮನೆಗಳಿವೆ. ಉದಾಹರಣೆಗೆ ಕುದ್ಪಾಜೆ, ಕೆದಂಬಾಡಿ, ಮೋಂಟಡ್ಕ, ಕುಡಕಲ್ಲು, ದಂಬೆಕೊಡಿ ಹೀಗೆ.

ನಮ್ಮವರ ಇತಿಹಾಸವನ್ನು ಅವಲೋಕಿಸಿದಾಗ, ಅಲ್ಲದೆ ಈ ಹಿಂದೆ ನಡೆಸಲಾಗಿರುವ ಅಧ್ಯಯನಗಳಿಂದ ವ್ಯಕ್ತವಾಗುವಂತೆ, ಶೃಂಗೇರಿ ಮಠದ ನೇರ ನಿಯಂತ್ರಣದಲ್ಲಿ ಪುತ್ತೂರು ಬಲ್ನಾಡು ಕಟ್ಟೆಮನೆ ಮತ್ತು ಸುಳ್ಯ ತಾಲ್ಲೂಕಿನ ಕೂಜುಕೋಡು ಕಟ್ಟೆಮನೆಗಳು ಇದ್ದದ್ದು ಕಂಡುಬರುತ್ತದೆ. ಕಟ್ಟೆಮನೆಯವರಿಗೆ ವಿಶೇಶ ಗೌರವಗಳಿವೆ. ಗುತ್ತಿಗಾರು ಗ್ರಾಮದ ಹೊಸೊಳಿಕೆ ಕಟ್ಟೆಮನೆ ಕೂಡಾ ಪುರಾತನ ಮನೆಸ್ಥಾನವೆಂದು ತಿಳಿದುಬರುತ್ತದೆ. ಇವುಗಳ ಹೊರತಾಗಿ ಪ್ರತಿಯೊಂದು ಊರುಕಟ್ಟಿನೊಳಗೂ ನೂರಾರು ಮೂಲ ಮನೆಸ್ಥಾನಗಳಿವೆ. ಅಂತ ಹವುಗಳಲ್ಲಿ ಕೆಲವನ್ನು ಇಲ್ಲಿ ಗುರುತಿಸಲಾಗಿದೆ.

ಕುಂದ್ರಪ್ಪಾಡಿ ಸೀಮೆಯ ಪುರಾತನ ಮನೆಗಳು

ಹಿಂದೊಮ್ಮೆ ಗೌಡ ಸಾಮ್ರಾಜ್ಯದ ಕೇಂದ್ರಸ್ಥಾನವೆನಿಸಿದ್ದ ಕಂದ್ರಪ್ಪಾಡಿಯ ಮೂಲದ ಮನೆತನಗಳನ್ನು ಗುರುತಿಸುವಲ್ಲಿ ಕಂದ್ರಪ್ಪಾಡಿಯ ಅಗ್ರಮಾನ್ಯ ದೈವವಾದ ಆ ಮೊದಲು ಚಾರಿತ್ರಿಕ ವ್ಯಕ್ತಿಯಾಗಿದ್ದ ಪುರುಷನ ಕಟ್ಟುಕಟ್ಟಳೆ ಸಹಕಾರಿಯಾಗುತ್ತದೆ. ಕಂದ್ರಪ್ಪಾಡಿಯ ಸೀಮೆಯಲ್ಲಿ ಮಡಪ್ಪಾಡಿ, ದೇವ ಮತ್ತು ಚಳ್ಳ, ನಾಲ್ಕೂರು ಮತ್ತು ಗುತ್ತಿಗಾರು ಗ್ರಾಮಗಳಿವೆ. ಈ ಪ್ರದೇಶದೊಳಗೆ ಹದಿನಾರು ಮಲೆದೈವಗಳ ಸ್ಥಾನಗಳಿವೆ. ಇವುಗಳನ್ನು ಗಡಿಪಾರ ದೈವಗಳೆಂದು ಕರೆಯಲಾಗುತ್ತದೆ. ಈ ದೈವಗಳ ಪೂಜಾರಿಕೆ ಹೊಂದಿದ 16 ಮನೆತನಗಳು ಮೂಲ ಮನೆಸ್ಥಾನಗಳು. ಇವರು ಸೇನಾಧಿಕಾರಿ, ಸಾಮಂತರಂತೆ ಕಾರ್ಯನಿರ್ವಹಿಸುತ್ತಿದ್ದ ಗೌಡರ ಮನೆಗಳಾಗಿದ್ದವು. ಆ ಮನೆಗಳೆಂದರೆ ಹೊಸೊಳಿಕೆ, ಗುತ್ತಿಗಾರು, ದಂಬೆಕೋಡಿ, ನಾಲ್ಕೂರು, ಗುಡ್ಡೆ, ಅಂಬೆಕಲ್ಲು, ಮೆದುಕುಚ್ಚಾಲ, ತಳೂರು, ದೇವ, ಶೀರಡ್ಕ, ಮಡಪ್ಪಾಡಿ, ಕೇವಳ, ಹಾಡಿಕಲ್ಲು, ಕಡ್ಯಪಣೇಲ, ವಾಲ್ತಾಜೆ, ಕರಂಗಲ್ಲು, ಪೈಕ.

ದೇವಚಳ್ಳ ಗ್ರಾಮದ ಪ್ರಸಿದ್ಧ ಮನೆತನಗಳಲ್ಲಿ ಮುಂಡೋಡಿ ಕೂಡಾ ಒಂದು. ಕಂದ್ರಪ್ಪಾಡಿಗೆ ಬಂದು ನೆಲೆನಿಂತ ಪುರುಷ ಐಗೂರು ಸೀಮೆಯಿಂದ ಬಂದವನಾಗಿದ್ದು ಅದೇ ಪ್ರದೇಶದಲ್ಲಿ ಇಂದು ಮನೆ ಮಾಡಿಕೊಂಡಿರುವ ಮುಂಡೋಡಿ ಮನೆತನಕ್ಕೆ ನಿಕಟ ಬಾಂಧವ್ಯವಿದೆಯೆಂಬುದು ಹಲವಾರು ರೀತಿಯಲ್ಲಿ ವ್ಯಕ್ತವಾಗುತ್ತದೆ. ಅಲ್ಲಿಂದ ಮೂಡು ಭಾಗಕ್ಕಿರುವ ವಾಲ್ತಾಜೆ ಮನೆತನ ಕೂಡ ಬಹಳ ಹೆಸರುವಾಸಿಯಾಗಿದೆ. ಮಡಪ್ಪಾಡಿಯ ಕೇವಳ ಮನೆತನವು ಪಟೇಲಿಕೆ ಹೊಂದಿದೆ. ಗೋಳ್ಯಾಡಿ, ಪೂಂಬೋಡಿ, ಮುಳು ಗಾಡು, ಬಾಳಿಕಳ ಈ ಗ್ರಾಮದ ಇತರ ಪ್ರಮುಖ ಗೌಡ ಮನೆಸ್ಥಾನಗಳು, ದೇವಚಳ್ಳದಲ್ಲಿ ಅಚ್ರ ಪ್ಪಾಡಿ ಮತ್ತು ಪಾರೆಪ್ಪಾಡಿ ಇತರ ದೊಡ್ಡ ಮನೆತನಗಳಾಗಿವೆ. ನಾಲ್ಕೂರಿನ ದೇರಪ್ಪಜ್ಜನ ಮನೆ, ಚಿಲ್ತಡ್ಕ, ಅಂಜೇರಿ ದಂಡಿನ ಮನೆ, ಹುಲ್ಲು ಕುಮೇರಿ, ಪೂಜಾರಿಕೋಡಿ, ಉಸ್ರಂಬೆ, ಹಲ್ಗುಜಿ ಇತರ ಪ್ರಮುಖ ಮನೆತನಗಳು, ಗುತ್ತಿಗಾರು ಗ್ರಾಮದಲ್ಲಿ ಮೊಗ್ರ ಮತ್ತು ಬಾಕಿಲ ಮನೆತನಗಳಿಗೆ ಪಟೇಲಿಕೆ ಇತ್ತು. ಹೊಸೊಳಿಕೆ ಕಟ್ಟೆ ಮನೆ ಆಗಿತ್ತು. ಇಲ್ಲಿಯ ಗದ್ದೆಗಳಲ್ಲಿ ದಂಡಿನ ಕತ್ತಿಗಳು ದೊರೆತಿವೆ. ದಂಬೆಕೋಡಿ, ಪೈಕ, ಬೊಮ್ಮದೇರೆ, ಮುತ್ಲಾಜೆ ಈ ಗ್ರಾಮದ ಪುರಾತನ ಮನೆಗಳು, ಈ ಸೀಮೆಯೊಳಗೆ ಶಿರಾಡಿ ದೈವ ಮತ್ತು ಪುರುಷ ದೈವ ಪ್ರಾಧಾನ್ಯತೆ ಹೊಂದಿದೆ.

ಕಂದ್ರಪ್ಪಾಡಿ ಸೀಮೆಯ ಪಕ್ಕದಲ್ಲಿ, ಕಲ್ಮಕಾರು ಗ್ರಾಮ ಇದೆ. ಗಾಳಿಬೀಡಿನಿಂದ ಘಟ್ಟವಿಳಿದರೆ ಈ ಗ್ರಾಮವಿದ್ದು ಇಲ್ಲಿಂದ ಶನಿವಾರ ಸಂತೆ, ಐಗೂರಿಗೆ ನಿಕಟ ಸಂಪರ್ಕ ಹೊಂದಿತ್ತು. ಇಲ್ಲಿಯ ಪ್ರಸಿದ್ಧ ಕೊಪ್ಪಡ್ಕ ಮನೆಸ್ಥಾನವು ಕೊಡಗಿನ ಅರಸರ ಸಾಮಂತರಾಗಿದ್ದರು. ರಾಮಯ್ಯ ಗೌಡರು ಪಟೇಲಿಕೆ ಹೊಂದಿದ್ದ ಪ್ರಸಿದ್ಧ ವ್ಯಕ್ತಿ ಕಲ್ಮಕಾರಿನ ಇನ್ನೊಂದು ಮನೆತನ ಬಾಕಿಲ. ಮೂಲತಃ ಗುತ್ತಿಗಾರಿನಲ್ಲಿ ಪಟೇಲಿಕೆ ಹೊಂದಿದವರು. ಪಡ್ಪು, ಡಬ್ಬಡ್ಕ ಇತರ ಎರಡು ಪ್ರಮುಖ ಮನೆತನಗಳು. ಕೊಡಗಿನ ಅರಸರು ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಸಲ್ಲಿಸುತ್ತಿದ್ದ ರಾಜ ಮರ್ಯಾದೆಗಳನ್ನು ಅವರ ನಂತರದಲ್ಲಿ ಕೊಪ್ಪಡ್ಕದಿಂದ ಸಾಂಕೇತಿಕವಾಗಿ ಸಲ್ಲುತ್ತಿದೆ.

ಕೊಲ್ಲಮೊಗ್ರ ಗ್ರಾಮದಲ್ಲಿ ಮಣಿಯಾನ ಮನೆಗೆ ಪಟೇಲಿಕೆ ಇತ್ತು. ಚಾಂತಾಳ ಮತ್ತು ಕುಂಞಟ್ಟಿ ಮೂಲತಃ ಒಂದೇ ಆಗಿದ್ದು ಪಟೇಲಿಕೆ ಹೊಂದಿದ್ದರು. ಕಿರಿಭಾಗ ಮನೆತನಕ್ಕೂ ಪಟೇಲಿಕೆ ಇತ್ತು. ಕೊಂದಾಳ, ಕೋನಡ್ಕ ಇತರ ಎರಡು ಪ್ರಮುಖ ಮನೆತನಗಳು.

ನಕ್ಕು ಮನರಂಜನೆ ನೀಡುವವನು ? ವಿದೂಷಕ

ಹರಿಹರ ಪಲ್ಲತ್ತಡ್ಕದಲ್ಲಿ ಮಲ್ಲಾರ ಕುಟುಂಬವು ಹೆಚ್ಚು ಪ್ರಾಬಲ್ಯತೆ ಹೊಂದಿದ್ದದ್ದು ವ್ಯಕ್ತವಾಗುತ್ತದೆ. ಕಜ್ಜೋಡಿ ಮುಂಡಾಜೆ ಮತ್ತು ಶೆಟ್ಯಡ್ಕ ಇಲ್ಲಿಯ ಇತರ ಪ್ರಮುಖ ಮನೆಸ್ಥಾನಗಳಾಗಿವೆ.

ಐನೆಕಿದು ಗ್ರಾಮವು ಪ್ರಸಿದ್ಧ ಕೂಜು ಕೋಡು ಕಟ್ಟೆಮನೆಯನ್ನು ಹೊಂದಿದೆ. ಕೂಜುಕೋಡು ಅಪ್ಪಯ್ಯ ಗೌಡ ಅಮರ ದಂಗೆಯನ್ನು ಸಂಘಟಿಸಿದವರಲ್ಲೊಬ್ಬರು. ಮಂಗಳೂರಿನ ಬಾವುಟಗುಡ್ಡೆಯಲ್ಲಿದ್ದ ಈಸ್ಟ್ ಇಂಡಿಯಾ ಕಂಪೆನಿಯ ಧ್ವಜವನ್ನು ಕಿತ್ತೆಸೆದು, ಕೊಡಗರಸರ ಧ್ವಜ ಹಾರಿಸಿ, ಬಳಿಕ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಲ್ಪಟ್ಟು ಹುತಾತ್ಮರಾದರು. ಇವರದ್ದು ನಾಯರ್ ಬಳಿ. ಕಟ್ಟೆಮನೆ ಗೌಡ್ರು ಐಗೂರು ಸೀಮೆಯಿಂದ ಬಂದವರು ಮತ್ತು ಪಟೇಲಿಕೆ ಹೊಂದಿದ್ದರು. ಕುಜುಂಬಾರು, ನೆತ್ತಾರ, ಕೆದಿಲ, ಪೈಲಾಜೆ ಮೊದಲಾದವುಗಳು ಇಲ್ಲಿಯ ಇತರ ಮನೆಸ್ಥಾನಗಳು, ಉರಿಯಪ್ಪೇಶ್ವರ ಮತ್ತು ಹೊಸ್ಕೋಟೆ ಕೆಂಚಮ್ಮ ಇವರ ಪ್ರಮುಖ ಆರಾಧ್ಯ ದೈವಗಳು.

ಬಾಳುಗೋಡು ಗ್ರಾಮದಲ್ಲೂ ಕೂಜುಕೋಡು, ಕಿರಿಭಾಗ ಮತ್ತು ಮುಚ್ಚಾರ ಮನೆತನಗಳಿವೆ. ಕೊಡಗಿಗೆ ಅಂಟಿಕೊಂಡಿರುವ ಗ್ರಾಮ ಇದು. ಪುರುಷ ಮತ್ತು ಬಸವನ ಆರಾಧನೆ ಇಲ್ಲಿ ಮುಖ್ಯವಾದದ್ದು.

ಸುಬ್ರಹ್ಮಣ್ಯ ಪ್ರಮುಖ ಧಾರ್ಮಿಕ ಕೇಂದ್ರವಾದರೂ ಅದರ ಸುತ್ತಮುತ್ತ ಗೌಡ ಮನೆತನಗಳು ಬೆಳೆದು ಬಂದಿಲ್ಲ. ಪಕ್ಕದ ಯೇನೆಕಲ್ಲು ಗ್ರಾಮದಲ್ಲಿ ಐಗೂರಿನಿಂದ ಬಂದ ಬಚ್ಚನಾಯ್ಕ ನೆಲೆನಿಂತಿದ್ದಾನೆ. ಬಹುಸಂಖ್ಯಾತ ಗೌಡರಲ್ಲಿ ಪರಮನೆ, ಬಾನಡ್ಕ, ಪದೆಲ, ಉಪ್ಪಳಿಕೆ, ಮೇಲ್ನಾಡ್ ಮುಖ್ಯ ಮನೆ ಸ್ಥಾನಗಳು.

ಬಳ್ಪ ಗ್ರಾಮದಲ್ಲಿ ಸಂಪ್ಯಾಡಿ, ಎಣ್ಣೆ ಮಜಲು, ಆ ಲ್ಕಬೆ, ಕಾರ್ಜಮನೆ ಮತ್ತು ಕುಂಜತ್ತಾಡಿ ಪ್ರಮುಖ ಗೌಡರ ಮನೆಸ್ಥಾನಗಳು, ಕೇನ್ಯದಲ್ಲಿ ಕಣ್ಕಲ್, ಬಡ್ಡಕೋಟಿ ಮುಖ್ಯ ಮನೆಗಳು, ಪಂಜ ಪ್ರದೇಶದಲ್ಲಿ, ಕೂತ್ಕುಂಜ, ಐವತ್ತೊಕ್ಲು ಮತ್ತು ಪಂಬೆತ್ತಾಡಿ ಮುಖ್ಯ ಗ್ರಾಮಗಳು. ಕೂತ್ಕುಂಜದಲ್ಲಿ ಬಿಳಿಮಲೆ. ಪಳಂಗಾಯ, ಚಿದ್ಗಲ್, ಕಕ್ಯಾನ, ಕುದ್ವ ಬಿಡಾರಕಟ್ಟೆ ಪ್ರಮುಖ ಮನೆತನಗಳು, ಕುದ್ವದವರಿಗೆ ಪಟೇಲಿಕೆ ಇತ್ತು. ಐವತ್ತೊಕ್ಲು ಗ್ರಾಮದಲ್ಲಿ ನೇರಳ ಕಂಡೂರು, ತೋಟ, ನೆಕ್ಕಿಲ, ಬೊಳ್ಳಾಜೆ, ಪಾಲೋಳಿ ಮತ್ತು ಕಾಣಿಕ್ಕೆ ಮುಖ್ಯ ಮನೆತನಗಳು. ಪಂಬೆತ್ತಾಡಿ ಬಂಟ ಮಲೆಯ ಇಳಿಜಾರಿನಲ್ಲಿದ್ದು ಬಾಬ್ಲುಬೆಟ್ಟು, ಜಾಕೆ, ಭೀಮಗುಳಿ, ಮೂಲೆ ಮನೆ ಮೊದಲಾದ ಮುಖ್ಯ ಮನೆತನಗಳಿವೆ. ನಡ್ಕಾ ಕಲ್ಮಡ್ಕ ಗ್ರಾಮದ ಪ್ರಮುಖ ಗೌಡರ ಮನೆ.

ಎಡಮಂಗಲ ತಾಲ್ಲೂಕಿನ ತುಳು ವಲಯದಲ್ಲಿದ್ದು ಹೇಮಳ, ದೇವಸ್ಯ, ಡೆಕ್ಕಳ, ಪರ್ಲ, ಯೇನಡ್ಕ, ದೋಲ್ಪಾಡಿ, ದೋಳ್ತಿಲ, ನಡುಬೈಲು ಮೊದಲಾದ ಮುಖ್ಯ ಮನೆತನಗಳಿವೆ. ಪಕ್ಕದ ಮುರುಳ್ಯ ಮತ್ತು ಎಣ್ಮೂರಲ್ಲಿ ಕೆಲವು ಗೌಡರ ಮನೆತನಗಳಿವೆ.

ಅಮರ ಮುಡ್ನೂರು ಗ್ರಾಮದಲ್ಲಿ ಕಡಪಾಳ, ಮಾಡಬಾಗಿಲು, ಮೇರ್ಕಜೆ ಒಂದು ಮನೆತನವಾದರೆ, ಮೋಂಟಡ್ಕ, ನಾಯರ್ ಕಲ್ಲು ಕೋಡ್ತುಗುಳಿ ಮತ್ತು ಅರ್ನೋಜಿ ಎರಡನೇ ಮನೆಸ್ಥಾನ. ಧರ್ಮದೈವ ಇಲ್ಲಿಯ ಮುಖ್ಯ ದೈವ. ಗೌಡರ ಮನೆ ಒಳಗೆ ಧರ್ಮದೈವಕ್ಕೆ ಮಾತ್ರ ಸ್ಥಾನ ದೊರೆಯುತ್ತದೆ. ಅಮರಪಡ್ನೂರಲ್ಲಿ ಕಜೆಮೂಲೆ ಶೇಣಿ, ಪಕ್ಕದ ಐವರ್ನಾಡಿನಲ್ಲಿ ಮಡ್ತಿಲ, ಎಡಮಲೆ (ಡೆಮ್ಮಲೆ)ಕುಳ್ಳಂಪ್ಪಾಡಿ, ಜಬಳೆ, ಕೊಚ್ಚಿ, ಚೆಮ್ನೂರು ಮೊದಲಾದವು ಮುಖ್ಯ ಮನೆತನಗಳಾಗಿವೆ.

ಜಾಲ್ಸೂರು ಗ್ರಾಮದಲ್ಲಿ ಮಿತ್ತ ಮಜಲು, ನಡುಮನೆ (ಸೋಣಂಗೇರಿ,) ಹುಲಿಮನೆ, ಕುಕ್ಕಂದೂರು, ಅಡ್ಕಾರು, ಕಾಳಮನೆ, ಬೈತ್ತಡ್ಕ ಮೊದಲಾದ ಮುಖ್ಯ ಮನೆಗಳಿವೆ. ಕನಕ ಮಜಲು ಗ್ರಾಮದಲ್ಲಿ ಕುತ್ಯಾಳ, ನರಿಯೂರು, ಬುಡ್ಲೆಗುತ್ತು, ಕನ್ನಡ್ಕ, ಕುದ್ಕುಳಿ ಮೊದಲಾದ ಮುಖ್ಯ ಗೌಡರ ಮನೆಸ್ಥಾನಗಳಿವೆ.

ಮಂಡೆಕೋಲು ಕೇರಳಕ್ಕೆ ತಾಗಿಕೊಂಡಿರುವ ಗ್ರಾಮ. ದೇವರಗುಂಡ, ಮಾವಾಜಿ, ಕೇನಾಜೆ, ಕುಕ್ಕೆಟ್ಟಿ, ಪೇರಾಲು ಮೊದಲಾದವುಗಳು ಮುಖ್ಯವಾದುವು. ಅಜ್ಜಾವರ ಗ್ರಾಮದಲ್ಲಿ ಅಡ್ಪಂಗಾಯ, ಪಡ್ಡಂಬೈಲು, ನಾರಾಲು, ಕುತ್ಯಾಡಿ ಮೊದಲಾದ ಮನೆಸ್ಥಾನಗಳಿವೆ.

ಆಲೆಟ್ಟಿಯಲ್ಲಿ ಕೊಯಿಂಗಾಜೆ, ಕೋಲ್ಚಾರು, ಕುಂಚಡ್ಕ, ಮತ್ತು ನಾರ್ಕೋಡು ಪ್ರಮುಖ ಮನೆಸ್ಥಾನಗಳು, ಕುಂಚಡ್ಕ, ಕಲ್ಲೆಂಬಿ ಒಂದು, ಹಾಗೆಯೇ ಬಡ್ಡಡ್ಕ ಕೂರ್ನಡ್ಕದವರೆಗೆ ಕುಡೆಕಲ್ಲು ಕೊಯಿಂಗಾಜೆ ಮನೆಸ್ಥಾನಕ್ಕೆ ಸೇರುತ್ತದೆ. ಕಲ್ಲೆಂಬಿಯಲ್ಲಿ ಗೌಡ ಜನಾಂಗದ ಏಕ ಮಾತ್ರ ಕಂಬಳ ನಡೆಯುತ್ತಿದೆ. ವಿಷ್ಣುಮೂರ್ತಿ, ತೊಂಡಚ್ಚಮಾರ್ ಅಥವಾ ವಯನಾಟ್ ಕುಲವನ್, ಧರ್ಮದೈವ, ಪಾಷಾಣ ಮೂರ್ತಿ ಧರ್ಮದೈವಕ್ಕೆ ಆರಾಧನೆ ನಡೆಯುತ್ತದೆ.

ಆಡಳಿತಾತ್ಮಕವಾಗಿ ಕೊಡಗಿನ ಭಾಗವಾದರೂ ಪೆರಾಜೆ, ಚೆಂಬು ಮತ್ತು ಸಂಪಾಜೆ ಗ್ರಾಮಗಳು ನಮ್ಮವರದ್ದೇ. ಹಾಗೆಯೇ ಬಡ್ಡಡ್ಕದಿಂದಾಚೆ ಕೇರಳದಲ್ಲಿರುವ ಕಲ್ಲಪಳ್ಳಿ, ಬಂದಡ್ಕಗಳಲ್ಲೂ ನಮ್ಮವರಿದ್ದಾರೆ. ಕಲ್ಲಪಳ್ಳಿಯಲ್ಲಿ ದೊಡ್ಡಮನೆ, ಪೆರ್ಮುಂಡ, ಅರುಣಗುಂಜ ಪ್ರಬಲ ಮನೆತನಗಳು. ಪೆರಾಜೆಯಲ್ಲಿ ಕೋಡಿ, ಕುಂದಲ್ಪಾಡಿ, ಮಜಿಕೋಡಿ, ಹೊದ್ದೆಟ್ಟಿ, ದೊಡ್ಡಡ್ಕ, ನಿಡ್ಯಮಲೆ ಪ್ರಸಿದ್ಧ ಹೆಸರುಗಳು, ಚೆಂಬು ಗ್ರಾಮದ ಊರುಬೈಲು ಪ್ರತಿಷ್ಠಿತ ಮನೆತನವಾಗಿದೆ. ಸಂಘಾಜೆಯಲ್ಲಿ ನಂಜನ ಮನೆ, ಬಂಟೋಡಿ (ಉಳುವಾರು) ಹಳೆಕಾಲದಿಂದಲೇ ಹೆಸರುವಾಸಿ.

ಆರಂತೋಡು ಗ್ರಾಮದಲ್ಲಿ ಉಳುವಾರು ಇತಿಹಾಸ ಪ್ರಸಿದ್ಧ ಮನೆತನ. ಗುಡ್ಡದೇರಾಜೆ ಕೂಡಾ ಅಷ್ಟೇ ಪುರಾತನವಾದದ್ದು. ಅಡ್ತಲೆ, ಕಿರ್ಲಾಯ, ನಂಗಾರು ಹೆಸರುವಾಸಿ. ಉಬರಡ್ಕದಲ್ಲಿ ಮದುವೆಗದ್ದೆ, ಬಳ್ಳಡ್ಕ, ಕೆದಂಬಾಡಿ, ಸುಳ್ಯಕೋಡಿ, ಸೂಂತೋಡು, ಪಾಣ್ತಿಲ, ಪಟ್ರ ಕೋಡಿಗಳಿಗೆ ತಮ್ಮದೇ ಆದ ಇತಿಹಾಸವಿದೆ. ಅಮರಕ್ರಾಂತಿ ರಾಜಧಾನಿ ಇದು. ಕೆದಂಬಾಡಿ ರಾಮಗೌಡ ಈ ಊರಿನವರು. ಮಿತ್ತೂರು ನಾಯರ್ ಗೌಡರ ಕಾರಣಿಕದ ದೈವ ಇಲ್ಲಿದೆ. ಪೂಮಲೆಯೇ ಅಭಯಾರಣ್ಯ.

ಪಕ್ಕದ ನೆಲ್ಲೂರು ಕೆಮ್ರಾಜೆಯಲ್ಲಿ ಸುಳ್ಯ ಪ್ರಸಿದ್ಧ ಮನೆತನವಾದರೂ ಅಮರಮುಡ್ನೂರಿನ ಗುಡ್ಡೆಮನೆಗೆ ಸೇರಿದ್ದು ಉಳಿದಂತೆ ಕಜೆ, ಕೇಪುಳಕಜೆ, ಹರ್ಲಡ್ಕ, ನರ್ಪ, ಪುನುಕುಟ್ಟಿ

15ನೇ ಪುಟಕ್ಕೆ

ಹಲವರ ವಿರೋಧದ ನಡುವೆ ಗೌಡ ಸಮಾಜ ಒಕ್ಕೂಟ ಸ್ಥಾಪನೆಗೆ ನಿರ್ಧಾರ

ಗೌಡ ಜನಾಂಗವನ್ನೂ ಸಮರ್ಥವಾಗಿ ಮುನ್ನಡೆಸಲು, ಗೌಡ ಜನಾಂಗದ ಬಗೆಗಿನ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಮತ್ತು ಗೌಡ ಸಂಸ್ಥೆಗಳ ನಡುವಿನ ವಿವಾದಗಳನ್ನು ಬಗೆಹರಿಸುವ ಉದ್ದೇಶದಿಂದ ಅಖಿಲ ಗೌಡ ಸಮಾಜವನ್ನು ಸ್ಥಾಪನೆ ಮಾಡಿಕೊಳ್ಳಬೇಕೆಂಬ ಚಿಂತನೆ ಕೆಲವು ವರ್ಷಗಳಿಂದ ನಡೆಯುತ್ತಿದ್ದರೂ, ಆ ವಿಚಾರ ನೆನೆಗುದಿಗೆ ಬಿದ್ದಿತ್ತು. ಈ ಸಂಬಂಧ ಮಾರ್ಚ್ 14 ರಂದು ಗೌಡ ಸಮಾಜದ ಆಶ್ರಯದಲ್ಲಿ ತೋಟಂಬೈಲು ನಾಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದ್ದು ಈ ಸಭೆಯಲ್ಲಿ ಅಖಿಲಗೌಡ ಸಮಾಜ ಒಕ್ಕೂಟವನ್ನು ಸ್ಥಾಪಿಸಲಾಗುವುದು ಎಂದು ಅಧಿಕೃತವಾಗಿ ಘೋಷಿಸಲಾಯಿತು.

ಸಭೆಯಲ್ಲಿ ಗೌಡ ಸಮಾಜಗಳ ಒಕ್ಕೂಟವನ್ನು ಸ್ಥಾಪನೆ ಮಾಡುವಾಗ ಅದರಲ್ಲಿ ವಕ್ಕಲಿಗರಿಗೆ ಪ್ರಾತಿನಿಧ್ಯ ನೀಡಬೇಕೇ, ಬೇಡವೇ ಎನ್ನುವ ವಿಚಾರ ಭಾರೀ ವಾಗ್ವಾದಕ್ಕೆ ಕಾರಣವಾಯಿತು. ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತಜೆ ಗಣೇಶ್‌ರವರು ಮತ್ತು ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷರಾದ ಹೊಸೂರು ರಮೇಶ್‌ರವರು ಮಾತನಾಡಿ ನಾವು ಮಾಡುವ ಯಾವುದೇ ಸಂಘಟನೆ ಕೊಡಗು ಗೌಡ ಜನಾಂಗದವರಿಗೆ ಮತ್ತು ಅರೆಗನ್ನಡ ಭಾಷಿಕರಿಗೆ ಮಾತ್ರ ಸೀಮಿತಗೊಳ್ಳಬೇಕು. ಆಗ ಮಾತ್ರ ನಮ್ಮ ಸಂಸ್ಕೃತಿ ಪರಂಪರೆಗಳನ್ನು ಸಂರಕ್ಷಿಸಿಕೊಳ್ಳಲು ಸಾಧ್ಯ ಎಂದು ವಾದಿಸಿದರು. ಆದರೆ ಕೆಲವು ಮುಖಂಡರು ಮುಖ್ಯವಾಗಿ ಸೋಮವಾರಪೇಟೆ ತಾಲ್ಲೂಕಿನ ಪ್ರತಿನಿಧಿಗಳು ವಕ್ಕಲಿಗರನ್ನೂ ಸೇರ್ಪಡೆಗೊಳಿಸಲೇಬೇಕೆಂದು ಆಗ್ರಹಿಸಿದರು. ಕೇವಲ ಕೊಡಗಿನ ಗೌಡರನ್ನು ಕಟ್ಟಿಕೊಂಡು ಯಾವುದೇ ಯಶಸ್ಸನ್ನು ಸಾಧಿಸಲು ಸಾಧ್ಯವಿಲ್ಲವೆಂದು ವಾದಿಸಿದ ಅವರು ಇಂತಹ ಸೀಮಿತ ಮನೋಭಾವನೆಯನ್ನೂ ಹೊಂದಿರುವವರು ಮೂಲಭೂತವಾದಿಗಳೆಂದು ಟೀಕಿಸಿದರು.

ಸಭೆಯು ಕೊನೆಗೆ ವೇದಿಕೆಯಲ್ಲಿ ಉಪಸ್ಥಿತರಿದ್ದ ಸೂರ್ತಲೆಸೋಮಣ್ಣನವರು, ಗೌಡ ಫೆಡರಲನ್ನು ನೋಂದಣಿ ಮಾಡಲಾಗುವುದು. ವಕ್ಕಲಿಗರೂ ಇದಲಲ್ಲಿ ಸೇರ್ಪಡೆಗೊಳ್ಳಬಹುದು ಎಂದು ಘೋಷಿಸುವುದರೊಂದಿಗೆ ಸಭೆ ಅಂತ್ಯಗೊಂಡಿತು. ವೇದಿಕೆಯಲ್ಲಿ ಮಾಜಿ ಸಚಿವ ದಂಬೆಕೋಡಿ ಚಿಣ್ಣಪ್ಪ, ಉದ್ಯಮಿ ಅಮ್ಮವ್ವನ ವಾಸು ಉಪಸ್ಥಿತರಿದ್ದರು.

'ಗೌಡ ಫೆಡರಲ್'ಬಗ್ಗೆ ಜನ ಏನು ಹೇಳುತ್ತಾರೆ :

ಮಾರ್ಚ್ 14 ರಂದು 'ಗೌಡ ಫೆಡರಲ್' ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದೆ. ನಮ್ಮ ಜನಾಂಗದ ಒಳಿತಿಗೆ ಅದರ ಅವಶ್ಯಕತೆ ಬಹಳ ಹಿಂದಿನಿಂದಲೂ ಇತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇದರಲ್ಲಿ ವಕ್ಕಲಿಗರಿಗೂ ಅವಕಾಶ ನೀಡಿರುವುದು ಜನವಲಯದಲ್ಲಿ ಬಹಳಷ್ಟು ಅಸಮಾಧಾನಕ್ಕೆ ಕಾರಣವಾಗಿದೆ. ಇದು ಕೇವಲ ಶ್ರೀಮಂತರು ತಮ್ಮ ಪ್ರತಿಷ್ಠೆಯನ್ನು ಮೆರೆಯಲಿಕ್ಕಾಗಿಯೇ ಕಟ್ಟಿಕೊಂಡ ಸಂಸ್ಥೆಯಾಗುತ್ತದೆಯೇ ಹೊರತು ನಮ್ಮ ಸಂಸ್ಕೃತಿ ಹಾಗೂ ಜನಾಂಗದ ರಕ್ಷಣೆಗೆ ಇದರಿಂದ ಕಿಂಚಿತ್ತೂ ಅನುಕೂಲವಾಗುವುದಿಲ್ಲ ಎನ್ನುವ ಸಾರ್ವತ್ರಿಕ ಅಭಿಪ್ರಾಯ ಗೌಡ ಜನಾಂಗದವರಲ್ಲಿ ಕೇಳಿ ಬರುತ್ತಿದೆ. ಸೈದ್ಧಾಂತಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ನಮಗೂ ವಕ್ಕಲಿಗರಿಗೂ ಯಾವುದೇ ಸಾಮ್ಯತೆಯಿಲ್ಲ. ವಕ್ಕಲಿಗರೂ ಕೊಡಗು ಗೌಡ ಜನಾಂಗದವರನ್ನು ಎಲ್ಲಾ ಸಂದರ್ಭಗಳಲ್ಲಿ ತಮ್ಮೊಡನೆ ಗುರುತಿಸಿಕೊಂಡಿಲ್ಲ. ಹೀಗಿರುವಾಗ ಕೆಲವೇ ಶ್ರೀಮಂತರು ವಕ್ಕಲಿಗರೊಡನೆ ವಿವಾಹ ಸಂಬಂಧ ಏರ್ಪಡಿಸಿಕೊಂಡಿರುವ ಒಂದೇ ಒಂದು ಕಾರಣಕ್ಕೆ ಅವರು ನಮ್ಮವರೇ ಎಂದು ಅಪ್ಪಿಕೊಳ್ಳುವುದಾದರೆ ಹಲವು ಸಂಸ್ಕೃತಿಗಳಲ್ಲಿ ನಾವು ಕೊಡವರನ್ನೇ ಹೋಲುತ್ತೇವೆಂದು, ಅವರನ್ನೂ ಸಂಘಟನೆ ಯೊಳಗೆ ಸೇರಿಸಿಕೊಳ್ಳಬಹುದಲ್ಲವೇ? ಎಂದು ಜನ ಪ್ರಶ್ನಿಸುತ್ತಿದ್ದಾರೆ.

ವಕ್ಕಲಿಗರೊಡನೆ ಸೇರಿಕೊಂಡು ವಿಶಾಲ ಮನೋಭಾವನೆಯಿಂದ ಸಂಘಟನೆ ಮಾಡುತ್ತೇವೆಂದರೇನರ್ಥ? ಅಂತಹವರು ವಿಶ್ವ ಮಾನವರಾಗಿಯೇ ಉಳಿಯಲಿ ಎಂದು ಕೆಲವರು ಕಟುವಾಗಿ ಟೀಕಿಸುತ್ತಾರೆ. ಕೇವಲ ಕೊಡಗು ಗೌಡ ಜನಾಂಗವನ್ನು ಪ್ರತ್ಯೇಕವಾಗಿ ಸಂಘಟಿಸಿ, ನಾವು ಅಲ್ಪ ಸಂಖ್ಯಾತರೆಂದು ಸರಕಾರಕ್ಕೆ ಮಾಡಿಸಿ ಶೇ. 1 ರಷ್ಟು ಮೀಸಲಾತಿಯನ್ನು ಜನಾಂಗಕ್ಕೆ ದೊರಕಿಸಿಕೊಟ್ಟರೆ ಅದೇ ಜನಾಂಗಕ್ಕೆ ದೊಡ್ಡ ಕೊಡುಗೆಯಾಗುತ್ತದೆ. ರಾಜಕೀಯದಲ್ಲೂ ಇದೇ ರೀತಿಯ ಅವಕಾಶಗಳು ನಮಗೆ ದೊರೆಯುವಂತಾಗಲಿ ಎಂಬುದು ಗೌಡ ಜನಾಂಗದ ಬಹು ಜನರ ಆಶಯವಾಗಿದೆ. ಕೊಡಗು ಗೌಡ ಜನಾಂಗದ ಎರಡು ಮಹಾನ್ ಸಂಘಟನೆಗಳ ನೇತಾರರಾದ ತುಂತಜೆ ಗಣೇಶ್ ಮತ್ತು ಹೊಸೂರು ರಮೇಶರವರು ಇದೇ ನೆಲೆಗಟ್ಟಿನಲ್ಲಿ ಮಾತಾಡುತ್ತಾರೆ. ಒಟ್ಟಿನಲ್ಲಿ ಈಗ ಹುಟ್ಟಿದ 'ಗೌಡ ಫೆಡರಲ್' ಜನಾಂಗವನ್ನು ವಿಘಟಿಸದೆ, ಸಂಘಟಿಸಲೆಂಬುದೇ ನಮ್ಮ ಆಶಯ.

-ಪಟ್ಟಡ ಶಿವಕುಮಾರ್

14ನೇ ಪುಟದಿಂದ

ಮನೆತನಗಳಿವೆ. ಮರ್ಕಂಜದಲ್ಲಿ ಪುರ, ಬಾಣೂರು, ಕಾಯರ, ಕಟ್ಟೆಕೋಡಿ, ಕುದ್ಕುಳಿ, ಸೂಟೆಗದ್ದೆ ಪ್ರಮುಖ ಮನೆತನಗಳು.

ತಾಲ್ಲೂಕಿನ ಕೇಂದ್ರಸ್ಥಾನ ಸುಳ್ಯದಲ್ಲಿ ಕುರುಂಜಿ ಮನೆತನವೇ ಪ್ರಸಿದ್ಧವಾದದ್ದು. ಅಮರದಂಗೆಯಲ್ಲೂ ಇವರ ವಂಶಸ್ಥರು ಪಾಲ್ಗೊಂಡಿದ್ದರು. ಮಾಣಿಬೆಟ್ಟು, ಅಮ್ಮೆಕೊಯಿಕ್ಕುಳಿ, ಕುದ್ಪಾಜೆ, ಕೊಯಿಂಗೋಡಿ, ಕಾನತ್ತಿಲ ಈ ಊರಿನ ಪ್ರಮುಖ ಮನೆತನಗಳು.

ಇದೀಗ ಇಂತಹ ಐಡೆಂಟಿಗಳು ತೀವ್ರವಾಗಿ ಬದಲಾಗುತ್ತಿವೆ. ಹಿಂದೆ ಇಲ್ಲಿ ಒಕ್ಕಲಾಗಿದ್ದವರು, ಕೂಲಿ ಕಾರ್ಮಿಕರು, ಯಾ ದೂರದಿಂದ ವಲಸೆ ಬಂದವರು, ಮುಸ್ಲಿಮರು, ಬ್ರಾಹ್ಮಣರು, ಕೊಂಕಣರು, ಇದೇ ಮನೆತನದವರೇನೋ ಎಂಬ ಅನುಮಾನ ಬಂದು ಬಿಡುತ್ತದೆ. ಯಾಕೆಂದರೆ ಎಲ್ಲರೂ ಗೌಡ ಮನೆತನಗಳ ಹೆಸರನ್ನು ತಮ್ಮ ಹೆಸರಿನ ಮುಂದೆ ಬಳಸುತ್ತಿದ್ದಾರೆ. ಗೌಡ ಮನೆತನಗಳ ಗುರುತುಗಳ ಬಗ್ಗೆ ಪ್ರತ್ಯೇಕ ಅಧ್ಯಯನ ಮಾಡಿ ದಾಖಲೆ ಮಾಡಿಕೊಳ್ಳುವ ಅಗತ್ಯವಿದೆ.

(ಈ ಲೇಖನದಲ್ಲಿ ಬಿಟ್ಟು ಹೋಗಿರುವ ಮನೆತನಗಳ ಹೆಸರನ್ನು ತಿಳಿಸಬೇಕಾಗಿ ವಿನಂತಿ)

ಅದನ್ನೆ ದೇವರೆಂದು ಪೂಜಿಸುವವನು ಮಹಾತ್ಮ

ಎರಡನೆ ಕೊಲ್ಲಿ ಯುದ್ಧ ಮತ್ತು ದುಷ್ಪರಿಣಾಮಗಳು

ಅರ್ಥಾವಲೋಕನ- ಸುಚೇತಾ ದಲಾಲ್, ಖ್ಯಾತ ಅಂಕಣಕಾರರು

ನಮಗೆ ತಿಳಿದಿರುವಂತೆಯೇ 2001. ಸೆಪ್ಟೆಂಬರ್ 11 ರ ನಂತರ ಒಂದು ವೇಳೆ ಈ ಜಗತ್ತು ಬದಲಾಗಿದೆ ಎಂದಾದರೆ, 2003, ಮಾರ್ಚ್ 20 ರ ನಂತರ ಯಥಾಸ್ಥಿತಿಯಲ್ಲಿಯೇ ಉಳಿಯುವುದೇ? ಅಂದರೆ ವಿಶ್ವ ಸಂಸ್ಥೆಯನ್ನೇ ಧಿಕ್ಕರಿಸಿರುವ ಅಮೇರಿಕ ಅತಿ ಹೆಚ್ಚು ಟೀಕೆಗೊಳಗಾಗಿರುವ ಯುದ್ಧದ ಕಹಳೆ ಮೊಳಗಿಸಿದೆ.

ಯುದ್ಧದ ತರುವಾಯ ಮಿಲಿಟರಿ ಕಾರ್ಯಾಚರಣೆಯನ್ನು ಟೀಕಿಸಿರುವ ರಾಷ್ಟ್ರಗಳು ತಮ್ಮ ವಿರುದ್ಧ ತಿರುಗಿಬೀಳುವುದಿಲ್ಲ ಮತ್ತು ಯುದ್ಧದ ವಿರುದ್ಧ ಪ್ರತಿಭಟನೆ ಸಲ್ಲಿಸುತ್ತಿರುವ ಜನ ಕೂಡಿ ತಣ್ಣಗಾಗುತ್ತಾರೆ ಎಂದೇ ಅಮೇರಿಕ ತಿಳಿದಿದೆ.

ವಿಶ್ವದ ಏಕೈಕ ಸೂಪರ್ ಪವರ್ ರಾಷ್ಟ್ರವಾಗಿರವ ಅದು, ಯುದ್ಧದ ನಂತರ ತನ್ನ ಅರ್ಥವ್ಯವಸ್ಥೆ ಪುನಶ್ಚೇತನಗೊಳ್ಳುತ್ತದೆ ಮತ್ತು ಸೌದಿ ಅರೇಬಿಯಾದ ನಂತರ ಜಗತ್ತಿನಲ್ಲಿಯೇ ಅತ್ಯಂತ ಹೇರಳ ತೈಲ ಸಂಪನ್ಮೂಲಗಳನ್ನು ಹೊಂದಿರುವ ರಾಷ್ಟ್ರದ ಮೇಲೆ ತನಗೆ ನಿಯಂತ್ರಣ ದೊರೆಯುತ್ತದೆ ಎಂದು ಅಮೇರಿಕ ಭಾವಿಸಿದೆ. ಹೌದು, ಅಮೇರಿಕದ ಅರ್ಥವ್ಯವಸ್ಥೆಗೆ ಪುನಶ್ಚೇತನ ನೀಡಬೇಕಾದ ತ್ವರಿತ ಅಗತ್ಯವಿದೆ. ಏಕೆಂದರೆ ಕಳೆದ ಒಂದು ದಶಕದಲ್ಲಿ ಇದೇ ಮೊದಲ ಬಾರಿಗೆ ಗ್ರಾಹಕರ ವಿಶ್ವಾಸ ಅತ್ಯಂತ ಕೆಳಮಟ್ಟಕ್ಕಿಳಿದಿದೆ. ವಿತ್ತೀಯ ಕೊರತೆ ನಿರಂತರವಾಗಿ ಹೆಚ್ಚುತ್ತಾ ಹೋಗಿ ಕಳವಳಕಾರಿ ಮಟ್ಟ ತಲುಪಿದೆ. ಆದರೆ ಇರಾಕ್ ಮೇಲಿನ ಯುದ್ಧದ ವೆಚ್ಚ ಎಷ್ಟು ಮತ್ತು ಯುದ್ಧದ ನಂತರ ಜಾಗತಿಕ ಅರ್ಥ ವ್ಯವಸ್ಥೆ ಯಥಾಸ್ಥಿತಿಯಲ್ಲೇ ಉಳಿಯುವುದೇ ಎಂಬ ಬಗ್ಗೆ ವಿಶ್ವಾದ್ಯಂತ ಇರುವ ಹೂಡಿಕೆದಾರರು ಮತ್ತು ವಿಶ್ಲೇಷಕರು ದಿಕ್ಕುತೋಚದಂತಾಗಿದ್ದಾರೆ. 'ಇರಾಕ್ ಮೇಲಿನ ಸಮರ ವಿಳಂಬಗೊಂಡಷ್ಟೂ ಅಮೆರಿಕದ ಅರ್ಥವ್ಯವಸ್ಥೆ ಸಂಕೀರ್ಣಗೊಳ್ಳುತ್ತ ಹೋಗುತ್ತದೆ ಮತ್ತು ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ನೆಲೆಗೊಂಡಿರುವ ಅನಿಶ್ಚಯತೆ ಇನ್ನೂ ಹೆಚ್ಚಾಗಲಿದೆ' ಎಂದಿದ್ದಾರೆ ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಮಹಾ ನಿರ್ದೇಶಕ ಹೋರ್ಸ್ಟ್ ಕೊಹ್ಲರ್. ಯುದ್ಧದ ಒಟ್ಟು ವೆಚ್ಚ 100 ಶತಕೋಟಿ ಡಾಲರ್ ಮೀರಬಾರದು ಎಂಬ ಲೆಕ್ಕಾಚಾರ ಬುಷ್ ಸರಕಾರದ್ದಾಗಿದೆ ಎಂದು ಅಲ್ಲಿನ ಸಂಸತ್ತಿನ ಬಜೆಟ್ ಕಛೇರಿ ತಿಳಿಸಿದೆ. ಆದರೆ ಯುದ್ಧ ದೀರ್ಘವಾಗುತ್ತಾ ಹೋದರೆ ವೆಚ್ಚದ ಪ್ರಮಾಣವೂ ಅಧಿಕಗೊಳ್ಳುತ್ತದೆ ಎಂದು ವಿಶ್ಲೇಶಕರು ಎಚ್ಚರಿಕೆ ನೀಡಿದ್ದಾರೆ. ಯುದ್ಧದಿಂದಾಗಿ ಜಗತ್ತಿನ ಹಣ ಅಮೇರಿಕದಲ್ಲಿಯೇ ಉಳಿಯುವುದೇ ಎಂಬ ಬಗ್ಗೆಯೇ ಬಹಳಷ್ಟು ಚರ್ಚೆಗಳು ತಮ್ಮ ಗಮನಹರಿಸುತ್ತಿವೆ. ಅಂದರೆ, ಬುಷ್ ಅವರ ಇರಾಕ್ ಸಮರದ ಬೆಂಬಲಿಗರು ಮತ್ತು ವಿರೋಧಿಗಳನ್ನು ಒಗ್ಗೂಡಿಸುವಂತಹ ಏಕೈಕ ಅಂಶವೆಂದರೆ 'ಡಾಲರ್'. ಎರಡೂ ಬಣಗಳು ತಮ್ಮ ಪಾಲುದಾರಿಕೆ ಹೊಂದಿವೆ. ಅಮೇರಿಕದ ಕಾರ್ಪೋರೇಟ್ ವಲಯದ ಶೇ. 23 ರಷ್ಟು ಬಾಂಡ್‌ಗಳು ಸಾಗರೋತ್ತರ ವಲಯದಲ್ಲಿದ್ದರೆ, ಶೇ. 13 ರಷ್ಟು ಈಕ್ವಿಟಿ ರೂಪದಲ್ಲಿದೆ ಮತ್ತು ಶೇ. 35 ರಷ್ಟು ಖಜಾನೆಯಲ್ಲಿ ತುಂಬಿದೆ. ಇಷ್ಟೆಲ್ಲ ಹಲವಾರು ಸಹಸ್ರ ಕೋಟಿ ಡಾಲರ್ ಅಮೆರಿಕದ ಹಣ ಜಗತ್ತಿನಾದ್ಯಂತ ಇರುವ ಬ್ಯಾಂಕ್‌ಗಳು, ವ್ಯಾಪಾರ ಸಂಸ್ಥೆಗಳು ಮತ್ತು ವೈಯಕ್ತಿಕ ಬ್ಯಾಂಕ್‌ಗಳಲ್ಲಿ ಅಡಗಿದೆ. ಸದ್ದಾಂ ವಿರುದ್ಧ ಸಾಧಿಸುವ ಗೆಲುವು ಇತರ ರಾಷ್ಟ್ರಗಳು ಅಮೇರಿಕದ ಹಣದತ್ತ ಇನ್ನೂ ಆಕರ್ಷಿತಗೊಳ್ಳಲು ದಾರಿ ಮಾಡಿಕೊಡುತ್ತದೆಯೇ, ಇಲ್ಲವೇ ತಮ್ಮ ಹಣವನ್ನು ಅಮೆರಿಕದಿಂದ ಹೊರಸಾಗಿಸುವಂತೆ ಮಾಡುತ್ತದೆಯೇ ಎಂಬುದೇ ಇಲ್ಲಿರುವ ಪ್ರಮುಖ ಪ್ರಶ್ನೆ.

ಯುದ್ಧದ ನಂತರ ಜಗತ್ತು, ಅದರಲ್ಲೂ ಅಮೇರಿಕ ಸುರಕ್ಷಿತ ಸ್ಥಳವಾಗಿ ಮಾರ್ಪಡುತ್ತದೆಯೇ? ಇರಾಕ್ ಮೇಲೆ ಸಮರ ಸಾರಲು ಸಿದ್ಧತೆ ಪ್ರಾರಂಭಿಸಿದಾಗಲೇ, ಕೆಲವು ರಾಷ್ಟ್ರಗಳು ತಮ್ಮ ಹಣವನ್ನು ಅಮೆರಿಕದಿಂದ ಹೊರ ಸಾಗಿಸಲು ಆರಂಭಿಸಿದವು. ಒಂದು ವೇಳೆ ಇರಾಕ್ ಸಮರ ದೀರ್ಘ ಕಾಲದವರೆಗೂ ಮುಂದುವರಿದರೆ, ಯುದ್ಧದ ವೆಚ್ಚ ಅಧಿಕಗೊಳ್ಳುವುದರ ಜತೆಗೆ ಇತರ ರಾಷ್ಟ್ರಗಳು ತಮ್ಮ ಹಣವನ್ನು ಅಮೆರಿಕದಿಂದ ಹೊರ ಸಾಗಿಸುವುದನ್ನು ತ್ವರಿತಗೊಳಿಸಬಹುದು. ಅಲ್ಲದೇ ಸೂಪರ್ ಪವರ್ ರಾಷ್ಟ್ರವೆಂಬ ಅಮೆರಿಕದ ಸ್ಥಾನಕ್ಕೂ ಕುತ್ತು ಬರಬಹುದು.

ಕೊಲ್ಲಿ ಕದನ ಮೂರನೆ ಜಾಗತಿಕ ಯುದ್ಧಕ್ಕೆ ನಾಂದಿಯೇ ?

ಯುದ್ಧದ ಪ್ರಕಟಣೆ ನಂತರ ಭಾರತದಲ್ಲಿ ಪೆಟ್ರೋಲ್ ಬೆಲೆ ಎರಡು ಸಲ ಏರಿದೆ. ಇದೇ ವೇಳೆ ಜಾಗತಿಕ ಮಾರುಕಟ್ಟೆಯಲ್ಲಿ ಕುಸಿದಿದೆ. ಬಂಗಾರ ಸಹ ಇಳಿಕೆ ದಾಖಲಿಸಿದೆ. ಶೇರು ಮಾರುಕಟ್ಟೆ ಪುಟಿದೆದ್ದಿದೆ. ಇಂಥ ವೈರುಧ್ಯ ಎಷ್ಟು ದಿನ? ವಾಣಿಜ್ಯೋದ್ಯಮದ ಮೇಲೆ ಯುದ್ಧದ ಪರಿಣಾಮ ಏನು?

ಭಾರೀ ಪೆಟ್ರೋಲಿಯಂ ನಿಕ್ಷೇಪ ಇರುವ ಇರಾಕ್ ಮೇಲೆ ಅಮೆರಿಕಕ್ಕೆ ಮೊದಲಿನಿಂದಲೂ ಕಣ್ಣು. ವಿಶ್ವ ಮಾರುಕಟ್ಟೆಯಲ್ಲಿ ಅಧಿಪತಿಯಾಗಿ ಮೆರೆಯುತ್ತಿದ್ದರೂ ಅದು ಪೆಟ್ರೋಲಿಯಂ ವಿಷಯದಲ್ಲಿ ಕೊಲ್ಲಿ ರಾಷ್ಟ್ರಗಳ ಮುಂದೆ ಕೈ ಚಾಚುವುದು ಮಾತ್ರ ತಪ್ಪಿರಲಿಲ್ಲ. ಒಂದು ದೃಷ್ಟಿಕೋನದಿಂದ ಈ ಯುದ್ಧ ಇರಾಕ್‌ನ ಪೆಟ್ರೋಲಿಯಂ ನಿಕ್ಷೇಪಗಳ ಮೇಲೆ ಹಿಡಿತ ಸಾಧಿಸುವುದೇ ಹೊರತು ವಿಶ್ವ ಮಾರಕ ಅಸ್ತ್ರಗಳನ್ನು ನಾಶಪಡಿಸುವುದಲ್ಲ ಎಂಬ ವಾದವಿದೆ. ಈ ವಾದದಲ್ಲಿ ಹುರುಳಿಲ್ಲದಿಲ್ಲ. ಯಾಕೆಂದರೆ ಇರಾಕ್ ದಾಸ್ತಾನಿನಲ್ಲಿ ಇರುವುದಕ್ಕಿಂತ ಭೀಕರ ಅಸ್ತ್ರಗಳು ಅಮೆರಿಕ ಶಸ್ತ್ರಾಗಾರದಲ್ಲಿದೆ. ತನಗೊಂದು ನೀತಿ, ಇರಾಕ್‌ಗೊಂದು ನೀತಿ ಗಮನಿಸಿದರೆ ಅಮೆರಿಕಾದ ಆಕ್ರಮಣ ಶೀಲತ್ವದ ನಿಗೂಢ ಉದ್ದೇಶ ಅರ್ಥವಾಗದೇ ಇರದು.

ಪರೋಕ್ಷವಾಗಿ ಜಗತ್ತಿನ ಮಾರುಕಟ್ಟೆಯ ಬೆಲೆಗಳ ಏರಿಳಿತ ಪೆಟ್ರೋಲ್ ಬೆಲೆಯನ್ನವಲಂಬಿಸಿದೆ. ಹೀಗಾಗಿಯೇ ಕೊಲ್ಲಿ ರಾಷ್ಟ್ರಗಳಿಗೆ ಇನ್ನಿಲ್ಲದ ಮಹತ್ವ. ಒಂದೊಮ್ಮೆ ಹಿಂದೆ ಕುವೈತ್ ಯುದ್ಧದಲ್ಲಾದಂತೆ, ಅಮೆರಿಕವು ಇರಾಕ್ ಮೇಲೆ ಹುಚ್ಚಾಪಟ್ಟೆ ಬಾಂಬ್ ದಾಳಿ ನಡೆಸಿದರೆ. ಅಲ್ಲಿನ ತೈಲ ಭಾವಿಗಳು

ಹೊತ್ತಿ ಉರಿಯುವುದು ಖಂಡಿತ. ಇರಾಕ್‌ನಲ್ಲಿ ತೈಲ ಬಾವಿಗಳಿಗೆ ಬೆಂಕಿ ಬಿದ್ದರೆ ಅಮೆರಿಕದ ಆರ್ಥಿಕತೆ ಕೆಂಡದ ಮೇಲಿನ ನೆಗಡಿಯಾಗುವುದು ಕಣ್ಣಿಗೆ ಕಾಣದ ಸತ್ಯ! ಅಮೆರಿಕದ ಆರ್ಥಿಕತೆ ಇಡೀ ವಿಶ್ವದ ಆರ್ಥಿಕತೆ ಮೇಲೆ ಎದ್ದು ಕಾಣುವ ಪರಿಣಾಮ ಬೀರುತ್ತದೆ ಎನ್ನುವುದು ಒಪ್ಪಿಕೊಳ್ಳಲೇಬೇಕು.

ಯುದ್ಧವನ್ನು ವಿರೋಧಿಸುತ್ತ ಬಂದಿರುವ ಭಾರತಕ್ಕೆ ಸಹ ಇರಾಕ್ ತೈಲದ ಪ್ರಮುಖ ಆಕರ. ನಮ್ಮಲ್ಲಿ ಅರವತ್ತು ದಿನಗಳಿಗಾಗುವಷ್ಟು ತೈಲ ದಾಸ್ತಾನು ಇದೆ ಎಂದು ಸರಕಾರ ಹೇಳಿಕೊಂಡಿದೆ. ಆದರೆ ಯುದ್ಧ ವಾರದಲ್ಲೆ ಮುಗಿದರೂ ಪರಿಣಾಮ ದೀರ್ಘಾವಧಿಯದಾಗಿರುತ್ತದೆ ಮತ್ತು ಘೋರವಾಗಿರುತ್ತದೆ. ಆದರೆ ಯುದ್ಧ ದೀರ್ಘಾವದಿಯದಾಗಿರುತ್ತದೆ ಎಂದು ಬುಷ್ ಈಗಾಗಲೇ ಘೋಷಿಸಿದ್ದಾರೆ. ಇದು ಮುಂಬರುವ ದಿನಗಳಲ್ಲಿ ವಾಣಿಜ್ಯೋದ್ಯಮದ ಹಡಗಿನ ದಿಕ್ಸೂಚಿಯನ್ನೆ ದಿಕ್ಕು ತಪ್ಪಿಸುವ ಸಾಧ್ಯತೆ ಇದೆ.

ವೈರುಧ್ಯವೆಂದರೆ ಜಾಗತಿಕ ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆ ಯುದ್ಧ ಶುರುವಾದ ಮೇಲೆ ಕೊಂಚ ಇಳಿದಿದೆ. ಭಾರತ ಶೇರು ಮಾರುಕಟ್ಟೆ ಏರಿಕೆ ಕಂಡಿದೆ. ಕೊಲ್ಲಿ ರಾಷ್ಟ್ರಗಳಲಂತೂ ಜೀವವಿಮಾ ಕಂಪನಿಗಳಿಗೆ ಕೊಯ್ಲು. ಹಾಗೆಯೇ ಯುದ್ಧಾನಂತರ ಭಾರತದ ಸಿಮೆಂಟ್ ಮತ್ತು ಉಕ್ಕು ಉದ್ಯಮಕ್ಕೆ ಇರಾಕ್‌ನಿಂದಲೇ ಭಾರಿ ಬೇಡಿಕೆ ಬರಲಿದೆ ಎಂದು ನಿರೀಕ್ಷಿಸಲಾಗಿದೆ. ಆದರೆ ಬಾಂಬ್‌ನಿಂದ ಹೊಮ್ಮಿದ ಬೆಳಕು ದಾರಿ ತೋರಲಾರದು ಎಂಬುದಂತೂ ಸತ್ಯ.

ಕಾಫಿಗೆ ಬಿಸಿ

ಗಲ್ಫ್ ಯುದ್ಧದ ಬಿಸಿ ಕಾಫಿಗೆ ತಟ್ಟಿದೆ. ಭಾರತದ ಕಾಫಿಯ ಪ್ರತಿಶತ 80 ರಷ್ಟು ಸೂಯೆಜ್ ಕಾಲುವೆ ಮೂಲಕವೇ ಹಡಗಿನಲ್ಲಿ ಸಾಗಾಟವಾಗುತ್ತಿತ್ತು. ಶಿಪ್ಪಿಂಗ್ ಗುತ್ತಿಗೆ ಮಾರ್ಚ್‌ಗೆ ಮುಗಿಯಲಿದ್ದು, ಸಧ್ಯದ ಪರಿಸ್ಥಿತಿಯಲ್ಲಿ ಮುಂದುವರೆಸುವ ಲಕ್ಷಣಗಳಿಲ್ಲ. ಇತ್ತ ಡೀಸೆಲ್ ಬೆಲೆ ಹೆಚ್ಚಳದಿಂದ ಕೊಚ್ಚಿ ಬಂದರಿಗೆ ಸಾಗಿಸುವ ಲಾರಿಗಳ ಬಾಡಿಗೆಯೂ ದುಬಾರಿಯಾಗಲಿವೆ. ಇಟಲಿ, ಜರ್ಮನಿ, ರಷಿಯಾಗಳಿಗೆ ಸಾಗಾಟವಾಗುವ ಕಾಫಿಗೆ ಯುದ್ಧ ಸಾಕಷ್ಟು ಹೊಡೆತ ನೀಡಲಿದೆ.

ಯುದ್ಧ ಆರಂಭವಾದಂತೆ ಬಂಗಾರದ ಬೆಲೆ ಏರಿಕೆ ನಿರೀಕ್ಷಿಸಲಾಗಿತ್ತು. ಆದರೆ ಮುಂಬಯಿ ಮಾರುಕಟ್ಟೆಯಲ್ಲಿ ಕುಸಿದಿದೆ! ಲಂಡನ್ನಿನಲ್ಲಿ ಸಹ ಭಾರಿ ಬೆಲೆ ಇಳಿತ ಉಂಟಾಗಿದೆ. ಕೆಲವು ಬ್ಯಾಂಕುಗಳ ಬಂಗಾರ ಆಮದು ನಿಲ್ಲಿಸಿವೆ. ಹಾಗೆಯೇ ಬೆಳ್ಳಿಯ ಬೆಲೆಯೂ ಕುಸಿದಿದೆ. ಮುಂಬರುವ ದಿನಗಳ ವಿದ್ಯಮಾನ ಹೇಗಿರುವುದೋ ಕಾದು ನೋಡಬೇಕಿದೆ. - ವಣಿಕ

ವಿಶ್ವಕಪ್ ಕ್ರಿಕೆಟ್ ಮುಗಿಯಿತು ಇನ್ನು ದಂಬೆಕೋಡಿ ಕಪ್ ಕ್ರಿಕೆಟ್

ಮೆ11 ರಿಂದ ಗೌಡ ಕುಟುಂಬಗಳ ನಡುವೆ ಕ್ರಿಕೆಟ್ ಸಮರ

ವಿಶ್ವ ಕಪ್ ಕ್ರಿಕೆಟ್ ಪಂದ್ಯಾವಳಿ ಭಾರತೀಯರಿಗೆ ಕೊನೆಗೂ ನಿರಾಸೆ ಮೂಡಿಸಿದೆ. ಆದರೆ ಗೌಡ ಜನಾಂಗ ಇದರಿಂದ ವಿಚಲಿತವಾಗಬೇಕಾಗಿಲ್ಲ. ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಹಾಗೂ ದಂಬೆಕೋಡಿ ಕುಟುಂಬಸ್ಥರ ಸಂಯುಕ್ತಾಶ್ರಯದಲ್ಲಿ ಮಡಿಕೇರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಮೇ 11 ರಿಂದ 23 ರ ವರೆಗೆ, ಗೌಡ ಕುಟುಂಬಗಳ ನಡುವೆ ಕ್ರಿಕೆಟ್ ಸಮರ ಉತ್ಸವದೋಪಾದಿಯಲ್ಲಿ ನಡೆಯಲಿದೆ.

ಕಳೆದ ವರ್ಷ ಅತ್ಯಂತ ಆಕರ್ಷಣೀಯವಾಗಿ 'ಪರ್ಲಕೋಟಿ ಕಪ್' ಪಂದ್ಯಾವಳಿ ಇದೇ ಮೈದಾನದಲ್ಲಿ ಜರುಗಿತ್ತು. ಅದೇ ಸಂದರ್ಭದಲ್ಲಿ ಮುಂದಿನ ವರ್ಷ 'ದಂಬೆಕೋಡಿ ಕಪ್' ಪಂದ್ಯಾವಳಿ ನಡೆಸಲಾಗುವುದು ಎಂದು ದಂಬೆಕೋಡಿ ಕುಟುಂಬಸ್ಥರ ಪರವಾಗಿ ದಂಬೆಕೋಡಿ ಹರೀಶ್ ಮತ್ತು ದಂಬೆಕೋಡಿ ಮಾದಪ್ಪರವರು ಘೋಷಿಸಿದ್ದರು. ಅದೇ ಪ್ರಕಾರವಾಗಿ ಗೌಡ ಸಾಂಸ್ಕೃತಿಕ ಅಕಾಡೆಮಿಯ ನಿರ್ದೇಶಕರೂ ಆಗಿರುವ ದಂಬೆಕೋಡಿ ಹರೀಶರವರು, ಕುಟುಂಬಸ್ಥರ ಜೊತೆ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಿ, ಪಂದ್ಯಾವಳಿಯ ಬಗ್ಗೆ ಒಂದು ನಿರ್ದಿಷ್ಟ ನಿಲುವಿಗೆ ಬರಲು ಶ್ರಮಿಸಿದರು. ಇದರ ಪ್ರತಿಫಲವಾಗಿ ದಂಬೆಕೋಡಿ ಕುಟುಂಬಸ್ಥರು ಕ್ರೀಡಾ ಸಮಿತಿಯೊಂದನ್ನು ರಚಿಸಿಕೊಂಡಿದ್ದು 'ದಂಬೆಕೋಡಿ ಕಪ್' ಪಂದ್ಯಾವಳಿಯನ್ನು ಯೋಜಿತ ರೀತಿಯಲ್ಲಿ ಅತ್ಯಂತ ಶಿಸ್ತು ಬದ್ಧವಾಗಿ ಮತ್ತು ಅದ್ದೂರಿಯಾಗಿ ನಡೆಸಲು ತೀರ್ಮಾನಿಸಿದ್ದಾರೆ.

ಗೌಡ ಜನಾಂಗದ ವಿದ್ಯಾರ್ಥಿಗಳ ಪರೀಕ್ಷೆಗೆ ಯಾವ ರೀತಿಯಲ್ಲೂ ಅಡಚಣೆಯುಂಟಾಗಬಾರದು ಎನ್ನುವ ಉದ್ದೇಶದಿಂದ ಮೇ11 ರಿಂದ 23 ರ ವರೆಗೆ ಈ ಪಂದ್ಯಾವಳಿಯನ್ನು ಆಯೋಜಿಸಿರುವುದಾಗಿ 'ಗೌಡ ಅಕಾಡೆಮಿ ತಿಳಿಸಿದೆ. ಮೇ 11 ರಂದು ಪಂದ್ಯಾವಳಿಯ ಉದ್ಘಾಟನೆಗೊಳ್ಳಲಿದ್ದು ಅಂದು ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ ಎಲ್ಲಾ ತಂಡಗಳು ತಮ್ಮ ನಾಯಕರೊಂದಿಗೆ ಹಾಗೂ ಧ್ವಜದೊಂದಿಗೆ ಆಕರ್ಷಕ ಪಥ ಸಂಚಲನ ನಡೆಸಲಿವೆ. ಅದೇ ದಿನ ಜಿಲ್ಲೆಯ ಮೂರು ತಾಲ್ಲೂಕಿನ ತಾಲ್ಲೂಕುವಾರು ಮಹಿಳೆಯರ ಕ್ರಿಕೆಟ್ ಮತ್ತು ಕಳೆದ ಬಾರಿಯ ಚಾಂಪಿಯನ್ ಬಾಲಾಡಿ ತಂಡ ಮತ್ತು ಅತಿಥೇಯ ದಂಬೆಕೋಡಿ ತಂಡಗಳ ನಡುವೆ ಪ್ರದರ್ಶನ ಪಂದ್ಯವನ್ನು ಹಾಗೂ ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ತಿಳಿದು ಬಂದಿದೆ.

ಈ ಬಾರಿಯ 'ದಂಬೆಕೋಡಿ ಕಪ್' ಪಂದ್ಯಾವಳಿಯನ್ನು ಭಾಗವಹಿಸಲಿರುವ ತಂಡಗಳು ಕಡ್ಡಾಯವಾಗಿ ಸಮವಸ್ತ್ರ ಧರಿಸಿರಬೇಕೆಂಬ ನಿಯಮವನ್ನು ರೂಪಿಸಲಾಗಿದೆ. ಹಾಗೂ ಆಟಗಾರರು ಯಾವ ಕುಟುಂಬಕ್ಕೆ ಸೇರಿದವರೆಂಬುದನ್ನೂ ಪತ್ತೆ ಹಚ್ಚಲು ಕೆಲವು ಮಾನದಂಡಗಳನ್ನು ಅಳವಡಿಸಲಾಗಿದೆ. ಕಳೆದ ಬಾರಿಯ 'ಪರ್ಲಕೋಟಿ ಕಪ್' ಪಂದ್ಯಾವಳಿಯಲ್ಲಿ ಸುಮಾರು 80 ತಂಡಗಳು ಭಾಗವಹಿಸಿದ್ದು ಈ ಭಾರಿ ಸುಮಾರು 100 ಕ್ಕೂ ಹೆಚ್ಚು ತಂಡಗಳು ಭಾಗವಹಿಸುವ ನಿರೀಕ್ಷೆಯಿದೆ. ಅದಕ್ಕೆ ಪೂರಕವಾಗಿ ದಂಬೆಕೋಡಿ ಕುಟುಂಬಸ್ಥರು ಈ ಬಾರಿ ಬಹಳ ಆಕರ್ಷಕ ಬಹುಮಾನಗಳನ್ನು ಮತ್ತು ಆಕರ್ಷಕ ಟ್ರೋಫಿಯನ್ನು ವಿತರಿಸುವುದಾಗಿ ಘೋಷಿಸಿದ್ದಾರೆ. ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ ತಂಡಗಳು ಏಪ್ರಿಲ್ 1ರಿಂದ ಏಪ್ರಿಲ್ 21 ರೊಳಗೆ 400 ರೂಪಾಯಿಗಳ ಮೈದಾನ ಶುಲ್ಕವನ್ನು ಪಾವತಿಸಿ ನೊಂದಾಯಿಸಿಕೊಳ್ಳುವಂತೆ ಸೂಚಿಸಲಾಗಿದೆ. ಆಸಕ್ತರು ಮಡಿಕೇರಿಯ ಗೌಡ ಸಮಾಜದ ವ್ಯವಸ್ಥಾಪಕರಲ್ಲಿ ನೋಂದಾಯಿಸಿಕೊಳ್ಳಬಹುದು. ಇಲ್ಲವೇ ಮಡಿಕೇರಿ ಟೋಲ್‌ಗೇಟಿನ ಚರ್ಚ್‌ಕಾಂಪ್ಲೆಕ್ಸ್‌ನಲ್ಲಿರುವ ಹೈಫ್ಯಾಷನ್ಸ್ ಕ್ಲಾತ್ ಸೆಂಟರ್‌ನಲ್ಲಿ ನೋಂದಾಯಿಸಿಕೊಳ್ಳುವಂತೆ ಸೂಚಿಸ ಲಾಗಿದೆ.

ವರದಿ : ಪಟ್ಟಡ ಶಿವಕುಮಾರ್.

ಕಾಳಿಕಾಂಬ ಯುವತಿ ಮಂಡಳಿಯ ದ್ವಿತೀಯ ವಾರ್ಷಿಕೋತ್ಸವ

ಕಾಳಿಕಾಂಬ ಯುವತಿ ಮಂಡಳಿ ಪಾಲೂರು ಕೊಡಗು ಜಿಲ್ಲೆ ಇದರ ದ್ವಿತೀಯ ವಾರ್ಷಿಕೋತ್ಸವ ಸಮಾರಂಭವು ಫೆ. 23 ರಂದು ಪಾಲೂರಿನ ಪುದಿಯನೆರವನ ಕುಟುಂಬಸ್ಥರ ಕೊಲ್ಲ ಪುಬಾಣೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ನಿವೃತ್ತ ಕೃಷಿ ಅಧಿಕಾರಿ ಅಚ್ಚುಡ ಪೂವಯ್ಯನವರು ದೀಪ ಬೆಳಗುವುದರ ಮೂಲಕ ನೆರವೇರಿಸಿ ದಿನದ ಯಶಸ್ಸಿಗೆ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಬೈತಡ್ಕ ಅಪ್ಪಣ್ಣ, ಬೊಳ್ಯಂಡ ಹರೀಶ್, ಬೈತಡ್ಕ ದೇವಯ್ಯನವರು ಹಾಜರಿದ್ದರು

ಟ್ರೋಫಿ ದಾನಿಗಳು

ಪುದಿಯ ನೆರವನ ದಿ. ಸಿದ್ಧಾರ್ಥ ಅವರ ಜ್ಞಾಪಕಾರ್ಥ ಪತ್ನಿ ಲಲಿತ (ವಾಲಿಬಾಲ್)

ಪುದಿಯ ನೆರವನ ಗಂಗಮ್ಮ ಮಾದಯ್ಯ ಜ್ಞಾಪಕಾರ್ಥ ಶ್ರೀಮತಿ ರೇವತಿ ರಮೇಶ್ ಥ್ರೋಬಾಲ್ (ರೋಲಿಂಗ್ ಕಪ್) ಹಾಗೂ ಪುದಿಯನೆರವನ ವೆಂಕಪ್ಪನವರ ಜ್ಞಾಪಕಾರ್ಥ (ಮೆರನಾಥ್) ಪತ್ನಿ ಮಾಚಮ್ಮ ಅರುಣ್ ನೀಡಿದರು.

ಥ್ರೋಬಾರ್ ರೋಲಿಂಗ್ ಕಪ್‌ನ್ನು ಶಾಂತಿ ಯುವತಿ ಮಂಡಳಿ ಅರ್ವತ್ತೋಕ್ಲು ತನ್ನದಾಗಿಸಿದರೆ, ಕಾಳಿಕಾಂಬ ಯುವತಿ ಮಂಡಳಿ 2 ನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತಲ್ಲದೆ ಹಗ್ಗ ಜಗ್ಗಾಟದಲ್ಲಿ ಪ್ರಥಮ ಸ್ಥಾನ ಉಳಿಸಿಕೊಂಡಿತು. ಕಾಳಿಕಾಂಬ ಯುವಕರ ತಂಡ ಹಗ್ಗ ಜಗ್ಗಾಟದಲ್ಲಿ ಪ್ರಥಮ, ವಿನಾಯಕ ತಂಡ ದ್ವಿತೀಯ ಸ್ಥಾನ ಪಡೆಯಿತು. ಮೆರಥಾನ್‌ನಲ್ಲಿ ಸೂದನ ಡಾಲು ಪ್ರಥಮ ಸ್ಥಾನ ಪಡೆದುದಲ್ಲದೆ ಮಕ್ಕಳಿಂದ 70 ವರ್ಷದ ತನಕ ವಿವಿಧ ಸ್ಪರ್ಧೆಗಳಲ್ಲಿ ಊರಿನವರು ಭಾಗವಹಿಸಿ ವಿಜೇತರಿಗೆ ದಾನಿಗಳು ಆರ್ಥಿಕ ನೆರವನ್ನು ನೀಡುವಲ್ಲಿ ಮುಂದಾದರು.

ಈ ವರ್ಷದ ವಿಶೇಷವೆಂದರೆ ಪುದಿಯನೆರವನ ರೇವತಿ ರಮೇಶರವರು ಬೆಟ್ಟಗೇರಿ ಮಂಡಲ ವ್ಯಾಪ್ತಿಯಲ್ಲಿ ಬರುವ 7 ನೇ ತರಗತಿ ಮತ್ತು ಲಲಿತ ಸಿದ್ಧಾರ್ಥನವರು 10 ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ (ಉದಯ ಹೈಸ್ಕೂಲಿನ) ವಿದ್ಯಾರ್ಥಿಗಳಿಗೆ ನೀಡಲು ಟ್ರೋಫಿಯನ್ನು ಅಧ್ಯಕ್ಷರಿಗೆ ನೀಡಿದರು.

ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿದ ಬಿ. ಎ. ಕುಂಞಪ್ಪ ಪ್ರಾಂಶುಪಾಲರು ಪುತ್ತೂರು ಇವರು ಗ್ರಾಮೀಣ ಮಟ್ಟದಲ್ಲಿ ಜ್ಞಾನಾರ್ಜನೆಗಾಗಿ ವಿದ್ಯೆ ಅತಿ ಮುಖ್ಯ ಪ್ರತಿಯೊಬ್ಬನು ಸ್ವತಃ ಕಷ್ಟಪಟ್ಟು ದುಡಿದು ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳುವುದರೊಂದಿಗೆ ಗುಡಿ ಕೈಗಾರಿಕೆಗಳಲ್ಲಿ ತೊಡಗಿ ಗ್ರಾಮೀಣ ಮಟ್ಟದಲ್ಲಿ ಇಂತಹ ಉತ್ತಮ ಚಟುವಟಿಕೆಗಳಲ್ಲಿ ಪ್ರೀತಿ - ಒಗ್ಗಟ್ಟು - ಬೆಳೆಸಿಕೊಂಡು ಒಬ್ಬರಿಗೊಬ್ಬರು ಸಹಕರಿಸಬೇಕೆಂದು ಕರೆ ನೀಡಿದರು.

ಬೆಟ್ಟಗೇರಿ ಮಂಡಳ ಪಂಚಾಯಿತಿ ಅಧ್ಯಕ್ಷ ಆಶಾ ಅಶೋಕರವರನ್ನು ಅಧ್ಯಕ್ಷತೆ ವಹಿಸಿದ ಕಾಳಿಕಾಂಬ ಯುವತಿ ಮಂಡಳಿಯ ಉಪಾಧ್ಯಕ್ಷೆ ಎಡಿಕೇರಿ ಸರೋಜ ಚಂಗಪ್ಪನವರು ಮಾಲಾರ್ಪಣೆ ಮಾಡಿ ಗೌರವಿಸಿದರು. ಈ ಕಾರ್ಯಕ್ರಮವನ್ನು ರೇವತಿಯವರು ನಿರೂಪಿಸಿದರೆ ಆಶಾರವರು ವಂದನಾರ್ಪಣೆ ಮಾಡಿದರು.

ವರದಿ: ಬೈ ತಡ್ಕ ಜಾನಕ್ಕಿ

ಬಾಲ ಸಂಗಾತಿ ವಿಭಾಗ : ಜ್ಞಾನ - 9

ಶಾಲೆಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲ

ಕಾಲ ಮತ್ತೆ ಆಕಾಶದ (Time & Space) ಬಗೆಗೂ ತತ್ವಜ್ಞಾನಿಗ ಆದ ಋಷಿ ಮುನಿಗ ಅತ್ಯಂತ ಸೂಕ್ಷ್ಮ ಆಗಿ ವಿಚಾರ ಮಾಡ್ಯೊಲೊ. ಬಹುಶಃ ನಿಖರ ಆಗಿ ಹೇಳ್ಯೊಲೊ. ಪಾಶ್ಚಾತ್ಯರ ಪ್ರಕಾರ ಸೆಕೆಂಡ್‌ತ್ತೇಳ್ವು ಅತ್ಯಂತ ಸೂಕ್ಷ್ಮ ಆದ ಕಾರಣ ಪರುಮಾಣು ಆದರೆ ನಮ್ಮವು ತ್ರುಟಿನ ಕಾಲದ ಅ ತ್ಯಂತ ಸೂಕ್ಷ್ಮ ಪರಿಣಾಮ ಆಗಿ ಇಟ್ಟ್‌ಕಂಡಿದ್ದೊ. ಒಂದುತ್ರುಟಿತ್ತೇಳ್ರೆ ಒಂದು ಸೆಕೆಂಡಿನ 33750 ರಲ್ಲಿ ಒಂದು ಭಾಗ. ಒಂದು ವಸ್ತುವಿನ ದ್ರವ್ಯರಾಶಿಯ ಅತಿ ಸೂಕ್ಷ್ಮ ಆದ ಭಾಗನ ಪಾಶ್ಚಾತ್ಯರ್ ಯಾವುದನ್ನು ನಿಶ್ಚ.ಯಿಸಿದ್ದರೋ ಅದರ ನೂರು ಪಟ್ಟು ಸೂಕ್ಷ್ಮ ಅವಯವನ ನಮ್ಮ ಋಷಿಮುನಿಗ ಕಂಡ್‌ಕಂಡಿದ್ದೊ. ಪಾಶ್ಚಾತ್ಯರ ಅಳತೆಯ ಸೂಕ್ಷ್ಮ ಪರಿಣಾಮ ಹಿಂಗಾದರೆ, ನಮ್ಮ ಋಷಿಗ "ತ್ರಸರೇಣು" (ಇಂಚ್‌ನ 1/349525 ಭಾಗ) ನ ಚಿಕ್ಕ ಭಾಗತ ಭಾವಿಸ್‌ತ್ತಿದ್ದೊ.

ನಮ್ಮ ಋಷಿಮುನಿಗ ವಸ್ತು ಮತ್ತೆ ಶಕ್ತಿನ ಅನಾದಿ ಹಾಗೂ ಶಾಶ್ವತತೇಳಿ ಕಂಡ್‌ಕಂಡಿದ್ದೊ. ಇದರ ಅಭಿಪ್ರಾಯ ಏನ್‌ತ್ತೇಳ್ರೆ ಯಾವುದೇ ಪದಾರ್ಥ ಭೌತಿಕ ಅವಯವಗಳ ಪರಿಣಾಮದಿಂದಾಗಿ ಬದಲಾವಣೆನ ಹೊಂದಿದೇ ಹೊರ್‌, ಪೂರ್ಣ ಆಗಿ ನಾಶ ಆದುಲೆ. ಒಂದು ರೂಪ ಇಲ್ಲದಿದ್ದರೆ ಇನ್ನೊಂದು ರೂಪಲಿ ಇದ್ದೇ ಇದ್ದದೆ. ಇಂದ್‌ನ ವಿಜ್ಞಾನಿಗ ಸನ ಇದೇ ವಿಷಯನ ಘಂಟಾಘೋಶ ಆಗಿ ಹೇಳ್‌ತ್ತೊಲೊ. ಸರ್ವಕಾಲೀಕ ಸತ್ಯ ಎಂದಾದರ್ ಬದ್‌ಲಾದೆಯಾ? ಇಂತ ಸಾರ್ವಕಾಲಿಕ ಸತ್ಯಗಳ ಸಿದ್ಧಾಂತ ನಮ್ಮ ಋಷಿಮುನಿಗಳ್ದ್. ಅವುಗಳ್ಲಿ ಕೆಲವನ್ನ ಇಲ್ಲಿ ನೋಡಿ.

ಉಷ್ಣತೆ : ಮಹರ್ಷಿ ಕಣಾದರರ ಪ್ರಕಾರ ಅಗ್ನಿತತ್ವಡ ಎರಡ್ ರೂಪಗ ಉಷ್ಣತೆ ಹಾಗೂ ಪ್ರಕಾಶ. ಇದರ್ನ ಇಂದ್ ಎಲ್ಲವೂ ಒಪ್ಪಿಯೊಲೊ. ಸೂರ್ಯನ ಉಷ್ಣತೆನ ಸೆಲೆನೆ ಜಗತ್ತಿನ ಎಲ್ಲಾ ರೀತಿಯ ಉಷ್ಣತೆಗೆ ಮೂಲ ಆಗ್ಯುಟ್ಟು. ಉದಯನಾಚಾರ್ಯರ ಈ ನಿಲುವುನ ಇಂದ್ ಪಾಶ್ಚಾತ್ಯ ವಿಜ್ಞಾನಿಗ ಕೂಡ ಅಂಗೀ ಕರಿಸ್ಯೊಲೊ. ಮಹರ್ಷಿ ವಾಚಸ್ಪತಿವ್ರ ಪ್ರಕಾರ ಉಷ್ಣತೆ ಮತ್ತೆ ಬೆಳಕ್‌ಲೂ ಅಗ್ನಿಯ ಸೂಕ್ಷ್ಮ ಪರಮಾಣುಗ ಒಳೊ. ಈ ಅಭಿಪ್ರಾಯಂದ ಯಾವ ಸಿದ್ಧಾಂತಕ್ಕೂ ವಿರೋಧ ಇಲ್ಲೆ. ಅಲ್ಲದೆ ಇದ್ ವಾಸ್ತವನೂ ಹೌದು.

ದೃಷ್ಟಿ ವಿದ್ಯೆ :

ಅಪಾರದರ್ಶಕತೆ ಮತ್ತೆ ಭೌತಿಕ ವಸ್ತುಗಳ ನೆರಳ್‌ತ್ತೇಳುವ ವಿಷಯಲಿ ಉದ್ಯೋತಕ ಋಷಿಗ ಅಪಾರ ಆದ ಅಧ್ಯಯನ ನಡ್‌ಸಿದ್ದೊ. ಬೆಳ್‌ಕ್‌ನ ಪ್ರತಿಫಲನದ ಬಗ್ಗೆಯೂ ವಿಶ್ಲೇಶಿಸಿದ್ದೊ. ಬೆಳ್‌ಕ್‌ನ ರಾಸಾಯನಿಕ ಪರಿಮಾಣದ ಬಗ್ಗೆ

19ನೇ ಪುಟಕ್ಕೆ

ಬಾಲ ಸಂಗಾತಿ ವಿಭಾಗ : ಕಥೆ - 9

ಸೃಷ್ಟಿಲಿ ಭೇದ ಯಾಕೆ ?

ಒಮ್ಮೆ ಪ್ರಾಣಿಗ ಎಲ್ಲಾ ಸೇರಿ ಬ್ರಹ್ಮ ಸೃಷ್ಟಿ ಮಾಡ್‌ಕನ ತಮಿಗೆ ಅನ್ಯಾಯ ಮಾಡ್ದ್ ಯಾಕೆತ್ ಕೇಳಿಕೆ ಬ್ರಹ್ಮನ ಹತ್ರ ಹೋದವೆ. ತಮ್ಮ ದೂರ್‌ನ ಬ್ರಹ್ಮನ ಮುಂದೆ ಹೇಳುವೆ. ಆಗ ಬ್ರಹ್ಮ ಒಬ್ಬೊಬ್ಬರಾಗಿ ಬಂದ್ ಹೇಳಿತ ಹೇಳ್ದ. ಆಗ ಕತ್ತೆ ಮೊದಲ್ ಬಂದ್ ದೇವಾ ನೀನ್ ಸೃಷ್ಟಿ ಮಾಡ್‌ಕನ ಯಾಕೆ ಪಕ್ಷಪಾ ತ ಮಾಡಿಯಾತ ಕೇಳ್ತ್. ಪ್ರಾಣಿ ಪ್ರಾಣಿಗಳ್‌ಲಿ ಒಬ್ಬರನ್ನೊಬ್ಬ ಕೊಂದು ತಿಂಬ ಭಾವನೆ, ಕೆಲವು ಬುದ್ಧಿವಂತ, ಮತ್ತೆ ಕೆಲವು ಮಂದ ಬುದ್ಧಿಯವು ಹಿಂಗೆ. ಈ ಜನಂಗ ನಮ್ಮನ ಬುದ್ಧಿ ಇಲ್ಲದವುತ ತಿಳ್ದ್ ಭಾರ ಹೊರಿಕೆ ಉಪಯೋಗಿಸುವೆ. ನೀನ್ ನನ್ನನ್ನ ಚತುರನನ್ನಾಗಿ ಮಾಡ್‌ತ ಕೇಳ್ತ್.

ಕಾಗೆ ಕೇಳ್ತ್, ನಾನ್ ಕಾಕಾ ತೇಳಿ ರಾತ್ರಿ ಮೂಗ್ತ್‌ತ ಜನಗಳಿಗೆ ತಿಳ್ಸಿ ಉಪಕಾರ ಮಾಡ್ನೆ. ಆದರೆ ಜನಗ ನನ್ನ ಉಪಕಾರನ ಸ್ಮರಿಸದೆ ನನ್ನ ಮೇಲೆ ಜಿಗುಪ್ಸೆ ಪಟ್ಟವೆ. ಕೋಗಿಲೆ ನನ್ನಂಗೆ ಕಪ್ಪು, ಸಣ್ಣದ್‌ಸನ ಆದರೂ ಜನಂಗ ಅದರ ಪ್ರಸಂಗ ಮಾಡುವೆ. ಅದಕ್ಕೆ ಮಧುರ ಸ್ವರ ಉಟ್ಟು ನನ್ನದ್ ಕರ್ಕಶ ಆದ್ದರ್‌ಂದ ನೀನ್ ನನ್ನ ಸ್ವರನ ಮಧುರ ಮಾಡಿ ಅದರ ಸ್ವರನ ಕರ್ಕಶ ಮಾಡ್‌ತ್ತಳ್ತ್.

ನಾಯಿ ಹೇಳ್ತ್ ಪ್ರಭೋ ನನ್ನ ನಿಕೃಷ್ಟ ಜೀವಿತರ ಜನಗ. ಕಂಡವೆ. ತಿಂದ್ ಉಂಡ್ ಮಿಕ್ಕಿದ್ ನಂಗೆ ಹಾಕುವೆ. ಕೊತ್ತಿಗೆ ಮಾತ್ರ ಮಾನ್ಯತೆ , ಹಾಲ್ ಕೊಟ್ ಅಡಿಗೆ ಮನೆಲೆ ಇಟ್ಟ್‌ಕಂಡವೆ. ಆದ್ದರ್‌ಂದ ನನ್ನ ಕೊತ್ತಿತರ ಮಾಡಿ, ಕೊತ್ತಿಗೆ ಹೊರಗಡೆ ಎಂಜಲ್ ಅನ್ನ ಹಾಕುವಂಗೆ ಮಾಡ್‌ತ ಕೇಳ್ತ್.

ಕಪ್ಪೆ ಹೇಳ್ತ್. ಭಗವಾನ್ ಎಲ್ಲಾ ಪ್ರಾಣಿಗಳೂ ನನ್ನ ಮೇಲೆ ಅತ್ಯಾಚಾರ ಮಾಡುವೆ. ಸರ್ಪ ವಿನಾಯಾಸ ನನ್ನ ತಿಂದದೆ. ಓಡಿಕೆ ಸನ ನಂಗೆ ಶಕ್ತಿ ಇಲ್ಲೆ. ವಿಜ್ಞಾನದ ವಿದ್ಯಾರ್ಥಿಗ ಅಂತೂ ನನ್ನ ಹಿಡ್ದ್ ಹಿಡ್ದ್ ಚಿಂದಿ ಮಾಡ್ವೆತ್ತೇಳ್ಕೆ. ಆದ್ದರ್‌ಂದ ನನ್ನನ ಬೃಹತ್ ಕಾಯ (ಶರೀರ) ದವನಾಗಿ ಮಾಡ್‌ತ್ತೇಳ್ತ್.

ವಿಷ ವೃಕ್ಷ ಹೇಳ್ತ್, ನನ್ನ ಕಂಡ ತಕ್ಷಣ ಬೇರ್ ಸಮೇತ ಕಿತ್ತ್ ಬಿಸಾಡುವೆ. ತುಳ್‌ಸಿನ ಮನೆಲಿ ನೆಟ್ಟ್‌ಕಂಡೆ ಪೋಷಣೆ ಮಾಡ್ವೆ. ಆದ್ದರಿಂದ ನನ್ನ ತುಳಸಿತರ ಮಾಡಿ ತುಳಸಿನ ಕಿತ್ತ್ ಬಿಸಾಡ್‌ಂತ ಹೇಳ್ದೆ.

ಹಿಂಗೆ ಎಲ್ಲರೂ ಪರಗುಣನ ಹೋಗ್‌ಳಿ ತನ್ನ ಗುಣಲಿ ಅತೃಪ್ತಿನ ವ್ಯಕ್ತ ಪಡ್‌ಸಿದೊ. ಇದನ್ನ ಕೇಳಿ ಬ್ರಹ್ಮ ಹೇಳ್ತ್ ನನ್ನ ಸೃಷ್ಟಿನ ಬದ್‌ಲ್ ಮಾಡಿಕೆ ಆದುಲೆ. ನಾವೆಲ್ಲ ವಿಷ್ಣುನ ಹತ್ರ ಪೋಯಿತ್ತೇಳ್ಳೋ. ಎಲ್ಲವೂ ವಿಷ್ಣುನ ಹತ್ರಕ್ಕೆ ಹೋದೋ. ವಿಷ್ಣು ಎಲ್ಲಾ ವಿಷಯನ ಕೇಳ್ತ್. ಹೇಳ್ತ್, ಪ್ರಕೃತಿ ನಿಯಮಕ್ಕೆ ಸರಿಯಾಗಿ ನಿಮ್ಮ ಸೃಷ್ಟಿ ಅವುಟು. ಅದ್ದರ್‌ಂದ ನೀವೆಲ್ಲಾ ಹಿಂಗೆ ಇರಿತ. ಆಗ ಎಲ್ಲವೂ ನಮ್ಮ ಇಚ್ಛೆ ಪ್ರಕಾರ ನಮ್ಮ ಪರಿವರ್ತನೆ ಮಾಡದಿದ್ದರೆ ನಾವ್ಯಾರೂ ಭೂಲೋಕಕ್ಕೆ ವಾಪಾಸ್ ಹೋದುತ್ತೇ ಹಠಮಾಡ್ದೊ. ಈ ಉದ್ಧಟತನ ಕಂಡ್ ವಿಷ್ಣು ತತ್ತಾಸುತ್ತೇಳಿ ನಿಮ್ಮ ಇಚ್ಛೆ ಇದ್ದಂಗೆ ಆಗಲಿತ್ತೇಳ್ತ್. ಈಗ ನೀವೆಲ್ಲಾ ಸಂತೋಷಲಿ ಭೂಲೋಕಕ್ಕೆ ಹೋಗಿತ ಹೇಳ್ತ್. ಎಲ್ಲವೂ ಕುಷಿ ಪಟ್ಟ್ ಭೂಲೋಕಕ್ಕೆ ಬಂದೊ.

ಭೂಲೋಕ ವಾಸಿಗಳಿಗೆ ಈ ಪರಿವರ್ತನೆ ವಿಚಿತ್ರ ಅನುಭವ ಆದೆ. ಕಾಗೆ ಕೋಗಿಲೆ ತರ ಹಾಡ್ದು. ಕತ್ತೆ ಕುದ್ಕನತರ ಕೂಗುದು, ನಾಯಿಗೆ ಕೊತ್ತಿನ ಗುಣ ಕಂಡದೆ. ಬೃಹತ್ ಕಾಯದ ಕಪ್ಪೆನ ಕಂಡ್ ಸರ್ಪಗ ಪಲಾಯನ ಮಾಡುವೆ. ತುಳಸಿ ಎಲೆ ವಿಷತರ ಕಹಿಯಾಗಿದ್ದದೆ. ನಿಂಬುಳಿ ಸಿಹಿಯಾಗಿದ್ದದೆ. ಈ ಎಲ್ಲಾ ದೃಶ್ಯನ ನೋಡಿ ಭೂಲೋಕ ವಾಸಿಗಳಿಗೆ ವಿಸ್ಮಯನೂ ಗಾಬರಿನೂ ಆಗಿ ಹೆದರಿಕಂಡವೆ. ಪ್ರಳಯ ಕಾಲ ಹತ್ರ ಬಂದುಟುಕಂಡದೆ. ಅದ್‌ಕೆ ಹಿಂಗೆಲ್ಲಾ ಅವುಟುತ ಗ್ಯಾನ ಮಾಡಿ ಭಗವಂತನ ಪ್ರಾರ್ಥಿಸುವೆ. ದೇವರೆ ಈ ವಿಪತ್ತಿಂದ ನಮ್ಮನ್ನ ಪಾರ್ ಮಾಡ್‌ತ ಮೊರೆ ಇಟ್ಟವೆ. ಅನ್ಯ ಗುಣನ ಪ್ರದರ್ಶಿಸುವವರ್ನ ಆದರಿಸದೆ ದೂರ ಇಟ್ಟವೆ. ಜನರ ಅನಾದಾರಕ್ಕೆ ಗುರಿಯಾದ ಪ್ರಾಣಿಗಳಿಗೆ ಪಶ್ಚತ್ತಾಪ ಆದೆ. ಪುನಃ ವಿಷ್ಣುನ ಹತ್ರ ಬಂದ್ ನಮ್ಮದ್ ತಪ್ಪಾತ್‌ತ ಕೇಳಿಕಂಡವೆ. ನಮ್ಮನ್ನ ಪುನಃ ಮೊದಲ್‌ನಂಗೆ ಮಾಡಿತ ಪ್ರಾರ್ಥಿಸುವೆ. ನಾವು ಸೃಷ್ಟಿಗೆ ವಿರುದ್ಧ ಹೋದುಲ್ಲೆತ ಒಪ್ಪಿಕಂಡವೆ. ಇದನ್ನ ಕೇಳಿ ದಯಾಳು ವಿಷ್ಣು ಹೇಳ್ದೆ. ಸೃಷ್ಟಿಯ ಸಮತೋಲನಕ್ಕಾಗಿ ನಿಮ್ಮ ನಿಮ್ಮ ವಿಧಿಗನುಸಾರ ನಿಮ್ಮ ಸೃಷ್ಟಿ ಅವುಟು. ಅದ್ದರಂದ ಮೊದಲಿನಂಗೆ ಇರಿತ್ತೇಳಿ ಆಶೀರ್ವದಿಸಿ, ನೀವೆಲ್ಲಾ ಭೂಲೋಕಕ್ಕೆ ಹೋಗಿತ್ತೇಳಿ ಕಳ್ಸಿದೆ. ಎಲ್ಲರೂ ತಿರ್‌ಗಿ ಬಂದ್ ಮೊದಲಿನಂಗೆ ಜೀವನ ನಡ್ಸುವೆ. ಜನಗೆಲ್ಲಾ ದೇವರು ನಮ್ಮನ್ನ ಕಷ್ಟಂದ ಪಾರ್ ಮಾಡ್ತ್‌ತ ಗ್ಯಾನ ಮಾಡಿ ಕುಷಿಲಿ ಇದ್ದವೆ.

ಮುಂದಿನ ಸಂಚಿಕೆಲಿ ಮುಂದುವರ್ದದೆ.

-ಬಿಟ್ಟೀರ ಚೊಂದಮ್ಮ

18ನೇ ಪುಟದಿಂದ

ಜಯಂತರು ಲಾಯಿಕ್ಕಾಗಿ ತಿಳ್‌ದಿದ್ದೊ. ಇಷ್ಟೇ ಅಲ್ಲದೆ, ಸೂರ್ಯನ ಕಿರಣಗಳ ಕೇಂದ್ರೀಕರಣಂದ ಶಕ್ತಿನ ಉತ್ಪಾದಿಸಿಕೆ ಅನೇಕ ವಿಧವಾದ ಗಾಜುಗಳ್ನ ಉಪಯೋಗಿಸ್‌ತ್ತಿದ್ದೊ. ಸುಪ್ರಸಿದ್ಧ ಆದ ಪಾಶ್ಚಾತ್ಯ ವಿದ್ವಾಂಸ ಆದ ಪ್ಲಿನೀ ಎಂಬುವನ ಪ್ರಕಾರ ಗಾಜುಗಳ ಪಾಲಿಶ್ ಮಾಡುವ ಕೆಲ್ಸ ಭಾರತಲಿ ದೊಡ್ಡ ಪ್ರಮಾಣಲಿ ನಡ್ಯತ್ತಿತ್ತ್ ಅಂದ್.

ಮುಂದಿನ ಸಂಚಿಕೆಲಿ ಮುಂದುವರ್ದದೆ.

-ಬಿಟ್ಟೀರ ಚೊಂದಮ್ಮ

ಡಾ. ಚಿನ್ನಯ್ಯ ಪಿ. ಹೆಚ್. ಡಿ. ಅಧ್ಯಕ್ಷರು ಕೊಡಗು ಎಜುಕೇಷನ್ ಅಕಾಡೆಮಿ ಬೆಂಗಳೂರು ಅವರು ಒಕ್ಕಲಿಗ ಪರಿಷತ್ ಅಮೇರಿಕಾ ಜುಲೈ 5 ಮತ್ತು 6, 2002 ರಂದು ವರ್ಜೀನಿಯ ಬೀಚಿನಲ್ಲಿ ನಡೆದ ಅದರ ಏಳನೆಯ ವಾರ್ಷಿಕ ಸಮ್ಮೇಳನದಲ್ಲಿ ಮಾಡಿದ ಬಾಷಣ.

ಮಹನೀಯರೇ ಮತ್ತು ಮಹಿಳೆಯರೆ

ನನಗೆ ಇಂತಹ ಒಂದು ಸಮಾರಂಭದಲ್ಲಿ ನಿಮ್ಮೊಂದಿಗೆ ಭಾಗವಹಿಸಲು ತುಂಬಾ ಸಂತೋಷವಾಗುತ್ತಿದೆ. ಸಮ್ಮೇಳನವನ್ನು ಏರ್ಪಡಿಸಿ ಈ ಸಂದರ್ಭದಲ್ಲಿ ನನಗೆ ಮಾತನಾಡಲು ಸದವಕಾಶವನ್ನು ಮಾಡಿಕೊಟ್ಟಂತಹ ಆಯೋಜಕರಿಗೂ ಮುಖ್ಯವಾಗಿ ಶ್ರೀನಿವಾಸಗೌಡರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕಾಲಕ್ಕಂಡ ನಮ್ಮ ಜನಾಂಗದ ಹಿರಿಯರ ಸಾಧನೆ ಸ್ತ್ರೀ ಪುರುಷರ ಧೈರ್ಯ ಮತ್ತು ಸಾಧನೆಗಳನ್ನು ಪ್ರತಿನಿಧಿಸುವುದರೊಂದಿಗೆ ವರ್ತಮಾನದ ಕಾಲದ ಸ್ಪರ್ಧಾತ್ಮಕ ವಾತಾವರಣದಲ್ಲಿ ನೀವು ತಮ್ಮ ಧೈರ್ಯ ಸಾಧನೆಗಳನ್ನು ಮಾಡಿ ತೋರಿಸಿದ್ದೀರಿ. ನನಗೆ ಇನ್ನೂ ಹರ್ಷವಾಗುವುದೆಂದರೆ, ನೀವು ತಮ್ಮ ಕ್ರೀಯಾಸಾಧನೆಗಳೊಂದಿಗೆ ಜನಾಂಗದ ಸಂಸ್ಕೃತಿಯನ್ನು ಎತ್ತಿಹಿಡಿಯುವುದು ಮಾತ್ರವಲ್ಲ ಅದನ್ನು ಉಳಿಸಿ ಬೆಳೆಸಿ ಕೊಂಡು ಬಂದಿರುವುದು ಸಂಪತ್ಭರಿತವಾದ ನಮ್ಮ ಜನಾಂಗೀಯ ಸಂಸ್ಕೃತಿಯನ್ನು ಶಾಸನ ಸಮ್ಮತವಾಗಿ, ಸಂಪ್ರದಾಯಕ್ಕೆ ಬೆಲೆಯಿತ್ತು ಮುಂದಿನ ಪೀಳಿಗೆಗೆ ತಲಪಲು ಮಾಡಿರುವ ತಮ್ಮ ಶ್ರಮವು ಪ್ರಶಂಸನೀಯವಾಗಿದೆ.

ಪ್ರಪ್ರಥಮಕ್ಕೆ ನಾನು ನನ್ನ ವ್ಯಕ್ತಿ ಪರಿಚಯವನ್ನು ಮಾಡಲಿಚ್ಛಿಸುತ್ತೇನೆ. ನಾನು ಪರಿಶೋಧಕ, ವಿಜ್ಞಾನಿಯಾಗಿದ್ದು, ಪ್ರಾಣಿಶಾಸ್ತ್ರದಲ್ಲಿ ಪಿ. ಹೆಚ್. ಡಿ. ಮುಗಿಸಿದ್ದೇನೆ. ಮತ್ತು ಜರ್ಮನಿಯ ರಾಷ್ಟ್ರದಿಂದ ಡಾಕ್ಟರಲ್ ಡಿಪ್ಲೋಮಾ ಪದವಿಯನ್ನು ಹೊಂದಿದ್ದೇನೆ. ನಾನು ಭಾರತ ಸರಕಾರದ ವ್ಯವಸಾಯ ಇಲಾಖೆಯಲ್ಲಿ ICARಯೊಂದಿಗೆ ಪ್ರಾಂಶುಪಾಲ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸಿದ್ದೇನೆ. ಹೈನುಗಾರಿಕೆ ಉತ್ಪಾದನೆಯ ಇಲಾಖೆಯ ಮುಖ್ಯಸ್ಥನಾಗಿ ಕೆಲಸ ಮಾಡಿ ನಿವೃತ್ತಿಹೊಂದಿದ ನಂತರ ವಿಷಯ ತಜ್ಞನಾಗಿಯೂ ಹಾಗೂ ನಾನಾ ಆಯ್ಕೆ ಸಮಿತಿಗಳಲ್ಲಿ ಅದರ ತಜ್ಞರಾಗಿ ಕೆಲಸ ನಿರ್ವಹಿಸಿದ್ದೇನೆ.

ನಾನು ಕೊಡಗು ಜಿಲ್ಲೆಯ ಗೌಡ ಜನಾಂಗಕ್ಕೆ ಸೇರಿದವನು. ಕೊಡಗಿನ ಗೌಡ ಜನಾಂಗದವರಲ್ಲಿ ಹೆಚ್ಚಿನವರು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಆದ್ಯಾಗ್ಯೂ ಮುಂದುವರಿದು ಇಂದಿನ ಶಿಕ್ಷಣ ಕ್ಷೇತ್ರದ ಫಲವಾಗಿ ನಮ್ಮವರು ಒಳ್ಳೊಳ್ಳೆಯ ಕಾರ್ಖಾನೆಗಳಲ್ಲಿ ಸರಕಾರಿ ಹಾಗೂ ರಕ್ಷಣೆ ಪಡೆಗಳಲ್ಲಿ ಉದ್ಯೋಗಗಳನ್ನು ಕಲ್ಪಿಸಿಕೊಂಡಿದ್ದಾರೆ. ಹಾಗೇನೆ ಮೈಸೂರು, ಬೆಂಗಳೂರು ನಗರಗಳಲ್ಲಿ ಬಂದು ನೆಲೆ ಹೂಡಿದ್ದಾರೆ.

ಗೌಡ ಜನರು ಸೇರಿ ಬೆಂಗಳೂರಿನಲ್ಲಿ ಗೌಡ ಸಮಾಜವನ್ನು ಕಟ್ಟಿದ್ದಾರೆ. 'ಒಕ್ಕಲಿಗ ಪರಿಷತ್ ಅಕಾಡೆಮಿಯೊಂದಿಗೆ ನಾವು ನಮ್ಮ ನಾಡು ಹಬ್ಬಗಳಾದ ಕೈಲ್‌ಮೂಹೂರ್ತ ಮತ್ತು ಹುತ್ರಿ' ಇವುಗಳನ್ನು ಆಚರಿಸುತ್ತೇವೆ. ನಾವು ಸಹ ಜನಾಂಗದ ಸಾಧನೆ ಪುರುಷರನ್ನು ಗೊತ್ತು ಹಚ್ಚಿ ಅವರನ್ನು ನೆನಪಿನ ಕಾಣಿಗೆಯಿತ್ತು ಸನ್ಮಾನಿಸುವುದರೊಂದಿಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ವಿದ್ಯಾಮಾಧ್ಯಮಗಳ ಮೂಲಕ ಜ್ಞಾನ ಪ್ರಸಾರವನ್ನು ಕೈಗೆತ್ತಿಕೊಂಡಿದ್ದೇವೆ. ಉತ್ತಮ ವಿದ್ಯೆ ಮತ್ತು ಅವಕಾಶಗಳನ್ನು ಪಡೆದು ಜಯಶೀಲರಾಗಿರುವುದಕ್ಕೆ ಇಲ್ಲಿರುವ ನಾವು ಕೆಲವೇ ಮಂದಿಯರು ಇದಕ್ಕೆ ನಿದರ್ಶನರಾಗಿರುತ್ತೇವೆ. ವಿಶ್ವದಲ್ಲಿ ಯಾವುದೇ ಉತ್ತಮ ವಿಶಯಕ್ಕೆ ನಾವು ಸ್ಪರ್ಧಿಸಬಲ್ಲೆವು, ಮತ್ತು ಜಯಶೀಲರಾಗಬಲ್ಲೆವು. ಈ ವಿಷಯಗನುಗುಣವಾಗಿಯೇ ಇತ್ತೀಚೆಗೆ ನಾವುಗಳು ಕೊಡಗು ಎಜುಕೇಷನಲ್ ಅಕಾಡೆಮಿಯನ್ನು ಸ್ಥಾಪಿಸಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ ಕರ್ನಾಟಕ ಸರಕಾರದಿಂದ ಮಾನ್ಯತೆಯನ್ನು ಮತ್ತು ಪ್ರೌಢಶಾಲೆಯ ಮಟ್ಟಕ್ಕೆ ಮುಂದುವರಿಸಲು ನಾವು ಪ್ರಯತ್ನಿಸುತ್ತೇವೆ. ಅರ್ಹ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳನ್ನು ನೀಡುವ ಗುರಿಇಟ್ಟುಕೊಂಡಿದ್ದೇವೆ. ಸೌಕರ್ಯ ವಂಚಿತ ಮಕ್ಕಳಿಗೂ ಈ ಸೌಲಭ್ಯ ತಲಪುವಂತೆ ನಾವು ಪ್ರಯತ್ನಿಸುತ್ತಿದ್ದೆ.

ಈ ವಿಷಯದಲ್ಲಿ ಸಹಾಯ ಮಾಡಲು ಯಾರಿಗಾದರೂ ಇಚ್ಛೆ ಇದ್ದರೆ ದಯವಿಟ್ಟು ನನ್ನನ್ನು ಭೇಟಿ ಮಾಡಬಹುದು. ಈ ಸಂದರ್ಭವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೂ ಹಾಗೂ ನಿಮಗೆಲ್ಲರಿಗೂ ನಾನು ಮತ್ತೊಮ್ಮೆ ವಂದಿಸುತ್ತೇನೆ. ಒಕ್ಕಲಿಗ ಪರಿಷತ್ ಅಕಾಡೆಮಿ ಅಮೆರಿಕಾ ಅದು ಜಯ ಹಾಗೂ ಪ್ರಜ್ವಲತೆಯನ್ನು ಸದಾ ಕಾಣಲಿ ಎಂದು ಹೃತ್ಪೂರ್ವಕವಾಗಿ ಬೇಡುತ್ತೇನೆ.

ಭಾಷಾಂತರ : ಬೈತಡ್ಕ ಬೆಳ್ಯಪ್ಪ, ಮಡಿಕೇರಿ.

ಶುಭ ವಿವಾಹ

1. ಪಿರಿಯಾ ಪಟ್ಟಣ ನಿವಾಸಿ ಕೋಗಿಲವಾಡ ಗ್ರಾಮದ ಕೆರೆಮನೆ ಅಪ್ಪಚ್ಚುನವರ ಮಗಳು ದೇಚಮ್ಮ ಮತ್ತು ಕುಶಾಲನಗರ ಹೋಬಳಿ ಗುಡ್ಡೆ ಮೈಸೂರು ರಸಲ್‌ಪುರ ಗ್ರಾಮದ ನಂಗಾರು ದಿವಂಗತ ಪುದಿನೆರವನ ಸೋಮಯ್ಯನವರ ಪುತ್ರ ಮೋಹನ ಕುಮಾರ್‌ನ ಮದುವೆಯೂ ದಿನಾಂಕ 23-2-2003 ರಂದು ಕುಶಾಲನಗರದ ಗೌಡ ಕಲ್ಯಾಣ ಮಂಟಪದಲ್ಲಿ ವಿವಾಹವು ವಿಜೃಂಭಣೆಯಿಂದ ನಡೆಯಿತು.

2. ಮೈಸೂರು ನಿವಾಸಿ ಅಚ್ಚಪಟ್ಟೀರ ಗಣೇಶ್‌ನವರ ಮಗಳು ಸರಳಾಳಿಗೂ ಮತ್ತು ಬೆಂಗಳೂರು ನಿವಾಸಿ ಬೆಳ್ಯನ ಈರಪ್ಪನವರ ಪುತ್ರ ತೇಜೇಶ್‌ನವರ ಮದುವೆಯು ದಿನಾಂಕ 10-3-2003 ರ ಸೋಮವಾರ ಮೈಸೂರು ಶಾರದಾದೇವಿನಗರದ ಸಮೀಪವಿರುವ ನಿವೇದಿತನಗರದಲ್ಲಿರುವ ಶ್ರೀರಂಗ ಸಮುದಾಯ ಭವನದಲ್ಲಿ ವಿಜೃಂಭಣೆಯಿಂದ ನಡೆಯಿತು.

ದೇವರಿಗೆ ಭಯಪಡಬೇಕು. ಮನುಷ್ಯರಿಗೆ ಭಯಪಡಬೇಡ.

ದತ್ತು ಮಕ್ಕಳು ಬೇಕಾಗಿದೆ :

7, 8 ವರ್ಷದ ಒಳಗಿನ ಗಂಡು ಯಾ ಹೆಣ್ಣು ಮಕ್ಕಳು, ಸುಮಾರು 54 ವರ್ಷದ ಮೈಸೂರಿನಲ್ಲಿ ವಾಸವಿರುವ ಸಸ್ಯಾಹಾರಿ ದಂಪತಿಗಳಿಗೆ ಬೇಕಾಗಿದೆ. ಆಸಕ್ತರು ಕೂಡಲೆ ಸಂಪರ್ಕಿಸಿ. *Box No. 10, C/o Kodagu Sangathi, Mysore. Ph : 0821/404290*

ವಿನಂತಿ : ಕೊಡಗು ಸಂಗಾತಿ ಪತ್ರಿಕೆಯ ಚಂದಾ ಹಣವು ಸಾಕಷ್ಟು ಬಾಕಿಯಿದ್ದು ಹಲವಾರು ಬಾರಿ ಜ್ಞಾಪಿಸಿದ್ದೇವೆ. ಬಾಕಿದಾರರು ಕೂಡಲೇ ಬಾಕಿ ಹಣ ನೀಡುವುದರೊಂದಿಗೆ ಪತ್ರಿಕಾಭಿವೃದ್ಧಿಗೂ ಜನಾಂಗದಭಿವೃದ್ಧಿಗೂ ಸಹಕರಿಸುವಂತೆ ಕಳಕಳಿಯ ವಿನಂತಿ.

- ಸಂಪಾದಕಿ

ಪ್ರವಾಸ : ಕೊಡಗು ಸಂಗಾತಿಯ ಗೌರವ ಸಂಪಾದಕರಾದ ಶ್ರೀ ಪಟ್ಟಡ ಪ್ರಭಾಕರನವರು ಇದೇ ತಿಂಗಳ 13 ರಿಂದ 18 ರ ತನಕ ಮಡಿಕೇರಿ, ಸುಂಟಿಕೊಪ್ಪ ಹಾಗೂ ಕುಶಾಲನಗರದಲ್ಲಿ ಚಂದಾ ವಸೂಲಾತಿಗಾಗಿ ಬರಲಿದ್ದಾರೆ. ಕಾರ್ಯನಿರ್ವಾಹಕರು ಹಾಗೂ ಸಂಗಾತಿ ಚಂದಾದಾರರು ಸಹಕರಿಸುವುದು.

- ಸಂಪಾದಕಿ

ಸಂಪರ್ಕ : ಮಡಿಕೇರಿ - 228047, ಸುಂಟಿಕೊಪ್ಪ - (O) 662083 (R) 662819 ಕುಶಾಲನಗರ - 673370



ದಿ|| ಕಾನೆಹಿತ್ಲು ಜಾನಕಿ ದೇವಪ್ಪ

ಮರಣ : 21-4-1996

7 ನೇ ವರ್ಷದ ಚಿರಸ್ಮರಣೆ

ಅಮ್ಮ ನೀನು ನಮ್ಮನ್ನೆಲ್ಲಾ ಅಗಲಿ 7 ವರ್ಷಗಳು ಸಂದರೂ ನಿನ್ನ ಮಾತೃ ವಾತ್ಸಲ್ಯ, ಪ್ರೀತಿ ಸದಾ ಹಸಿರಾಗಿದ್ದು ಆ ಭಗವಂತನಲ್ಲಿ ನಿನ್ನ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ನಿಮ್ಮ ಆದರ್ಶ ಬದುಕು ನಮಗೆ ದಾರಿ ದೀಪವಾಗಲೆಂದು ಸದಾ ಹಾರೈಸುವೆವು.

ಮಕ್ಕಳು : ಲತಾ ಮೋಹನ್, ಗುಣಾ, ದಿವ್ಯ, ರಂಜು ಮತ್ತು ಕುಟುಂಬದವರು.

ಪ್ರಕಟಣೆ : ದಿವ್ಯ D/o Late K.K. Devappa, Sudharshan Circle, Near B.D.O. Office, Madikeri, Ph. : 221506

ಅಯ್ಯಂಡ್ರ ಕಪ್ ಗೌಡ ಕ್ರಿಕೆಟ್ ಉತ್ಸವ -2003

ಗೌಡ ಜನಾಂಗ ಕುಟುಂಬಗಳ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ತಾ : 24-4-03ರಿಂದ 27-4-03

ಸ್ಥಳ : ನಂಜರಾಯಪಟ್ಟಣ ಶಾಲಾ ಮೈದಾನ.

ಆಸಕ್ತ ತಂಡಗಳು ರೂ 300/- ಪ್ರವೇಶ ಶುಲ್ಕದೊಂದಿಗೆ ಅಧ್ಯಕ್ಷರು, ಅಯ್ಯಂಡ್ರ ಕಪ್ ಕ್ರಿಕೆಟ್ ಕ್ರೀಡಾ ಸಮಿತಿ ಹೆಸರಿನಲ್ಲಿ ಏಪ್ರಿಲ್ 10 ರೊಳಗೆ ಕೆಳಗಿನ ವಿಳಾಸದಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಚೆಕ್ ಸ್ವೀಕರಿಸಲಾಗುವುದಿಲ್ಲ ಹಾಗೂ ದೂರವಾಣಿ ಮೂಲಕ ನೋಂದಾವಣೆಗೆ ಅವಕಾಶವಿಲ್ಲ. ಮನೆಯ ಹೆಸರನ್ನು ದಪ್ಪ ಅಕ್ಷರಗಳಲ್ಲಿ ಮತ್ತು ವ್ಯವಹರಿಸಬೇಕಾದ ವಿಳಾಸವನ್ನು ದೂರವಾಣಿ ಸಂಖ್ಯೆಯೊಂದಿಗೆ ನಮೂದಿಸಿರಬೇಕು.

ಬಹುಮಾನಗಳು ಪ್ರಥಮ ರೂ. **5001/-** ನಗದು ಮತ್ತು ಟ್ರೋಫಿ, ದ್ವಿತೀಯ ರೂ. **3001/-** ನಗದು ಮತ್ತು ಟ್ರೋಫಿ ಹಾಗೂ ಪಂದ್ಯ ಪುರುಷೋತ್ತಮ, ಸರಣಿ ಪುರುಷೋತ್ತಮ, ಉತ್ತಮಬೌಲರ್, ಬ್ಯಾಟ್ಸ್‌ಮನ್, ಫೀಲ್ಡರ್ ಮತ್ತಿತರ ಬಹುಮಾನ ನೀಡಲಾಗುವುದು.

ಸರ್ವ ಗೌಡ ಕುಟುಂಬಗಳಿಗೆ ಆದರದ ಸ್ವಾಗತ

ಅಯ್ಯಂಡ್ರ ಕಪ್ ಕ್ರಿಕೆಟೋತ್ಸವ ಸಮಿತಿ, ಚೆಟ್ಟಳ್ಳಿ

ಅಧ್ಯಕ್ಷರು,	ಕಾರ್ಯಾಧ್ಯಕ್ಷರು,	ಉಪಾಧ್ಯಕ್ಷರು
08276/666677	08276/674857	08276/626488

ಜೀವಾವಧಿ ಸದಸ್ಯತನ ನೀಡ್ಯೊಳೊ

ಮೈಸೂರು ಜಿಲ್ಲೆ ಹುಣಸೂರ್‌ಲಿ ವಾಸವಾಗಿರ್‍ವ ಶ್ರೀ ಸೋಮೆಟ್ಟಿ ದೇವಯ್ಯ ಮತ್ತೆ ಕಮಲ ದಂಪತಿಗ ಕೊಡಗು ಸಂಗಾತಿ ಅಭಿವೃದ್ಧಿ ಬಯ್ಸಿ ಜೀವಾವಧಿ ಸದಸ್ಯತನ ನೀಡ್ಯೋಳೊ. ದೇವಯ್ಯನವು ಜೆ. ಇ. ಆಗಿ ಈಗ ಹುಣಸೂರು ತಾಲ್ಲೂಕ್ ಪಂಚಾಯಿತಿ ಕೆಲ್ಸ ಮಾಡಿಕಂಡಳೊ. ಇವು ಹುಣಸೂರಿಲಿ ಕೊಡಗು ಗೌಡ ಸಮಾಜದ ಅಧ್ಯಕ್ಷರಾಗಿ ಸಮಾಜ ಸೇವೆ ಮಾಡ್ತಾ ಒಳೊ. ಹಂಗೆ ಅವ್ರ ಧರ್ಮಪತ್ನಿ ಕಮಲನವು ಹಿರಿಯ ಶುಶ್ರೂಸಿಕಿಯಾಗಿ ಹುಣಸೂರ್‌ಲಿ ಸೇವೆ ಸಲ್ಲಿಸುತ್ತಾ ಒಳೋ. ಇವುಕ್ಕೆ ಇಬ್ಬರು ಗಂಡ್ ಮಕ್ಕ. ಇಬ್ಬರ್ ಸಹ ಡಾಕ್ಟರ್ ಆಗಿ ಸೇವೆ ಸಲ್ಲಿಸುತ್ತಾ ಒಳೋ. ಇರುವ ಒಬ್ಬೆ ಮಗಳು ಬಿ. ಎಸ್ಸ್.ಸಿ. ಫೈನಲ್ ಮಾಡ್ತ ಉಟ್ಟು. ಇವ್ರ ಸಂಸಾರಕ್ಕೆ ನಮ್ಮ ಕುಲಗುರು ವೆಂಕಟರಮಣ ಸ್ವಾಮಿ ಮತ್ತೆ ಶೃಂಗೇರಿ ಶಾರದಾಂಬೆಯ ಅನುಗ್ರಹ ಸದಾ ಇರಲಿತ್ತೇಳಿ ಕೊಡಗು ಸಂಗಾತಿ ಈ ಸಂದರ್ಭಲಿ ಮನಪೂರ್ವಕವಾಗಿ ಶುಭ ಹಾರೈಸಿದೆ.

- ಸಂಪಾದಕಿ



ಸೆಟ್ಟೀಜನ ಸುಬ್ಬಯ್ಯ
ರಂಗಸಮುದ್ರ

ಮರಣ : 29-4-1994

9 ನೇ ವರ್ಷದ ಚಿರಸ್ಮರಣೆ

ನೀವು ನಮ್ಮನ್ನು ಅಗಲಿ ಒಂಬತ್ತು ವರ್ಷಗಳು ಸಂದರು ನೀವು ಒಡನಾಡಿದ ಮಧುರ ಕ್ಷಣಗಳು ನಮ್ಮೆಲ್ಲರ ಕಣ್ಣಮುಂದೆ ಆಗಾಗ ತೇಲಿ ಬರುತ್ತಿದೆ. ನಮ್ಮನ್ನು ಉತ್ತಮ ವ್ಯಕ್ತಿಯನ್ನಾಗಿ ಬೆಳೆಸಲು ನೀವು ನೀಡಿದ ಮಾರ್ಗದರ್ಶನದಲ್ಲಿಯೇ ನಡೆಯುತ್ತಿದ್ದೇವೆ, ನಿಮ್ಮ ಆತ್ಮಕ್ಕೆ ಅನುದಿನವು ಶಾಂತಿ ಸಿಗಲೆಂದು ಪ್ರಾರ್ಥಿಸುವೆವು.

ಪತ್ನಿ - ಅಕ್ಕಮ್ಮ, ಮಕ್ಕಳು ತಾರ, ಶೈಲ, ಪ್ರಮೀಳ, ಶಶಿ, ಹೇಮಾ

ಅಳಿಯಂದಿರು - ರವಿ, ಜಗದೀಶ್, ಉಮೇಶ್ ಮೊಮ್ಮಗ - ತುಷಿಲ್ **Ph. : 08276/626595**


Reg. No. KA/SK/MYS-88/2003 Registered : 10-01-96 TCI Kar. 09592

ಸುಳ್ಯ ತಾಲ್ಲೂಕು ಗೌಡರ ಯುವ ಸೇವಾ ಸಂಘ (ರಿ.) ಸುಳ್ಯ ದ. ಕ.

ಗೌಡ ಯುವ ಸಮಾವೇಶ - 2003

ದಿನಾಂಕ : 2 ಫೆಬ್ರವರಿ 2003 ಆದಿತ್ಯವಾರ

ಸ್ಥಳ :ಮಹಾತ್ಮಗಾಂಧಿ ಮಲ್ನಾಡ್ ಪ್ರೌಢಶಾಲಾ ವಠಾರ, ಕೊಡಿಯಾಲಬೈಲು, ಸುಳ್ಯ ದ.ಕ.



ಸುಳ್ಯ ತಾಲ್ಲೂಕು "ಗೌಡ ಯುವ ಸಮಾವೇಶ 2003" ರ ಉದ್ಘಾಟನಾ ಸಮಾರಂಭದಲ್ಲಿ wwwyuvagowda.com ಉದ್ಘಾಟಿಸುತ್ತಿರುವ ಕರ್ನಾಟಕ ರಾಜ್ಯ ವಿಧಾನ ಪರಿಷತ್ತ್ ಸಭಾಪತಿ ಶ್ರೀ ಬಿ. ಎಲ್. ಶಂಕರ್, ಡಾ. ಸಿ. ವಿಠಲ್, ಶ್ರೀ ಕುರುಂಜಿ ವೆಂಕಟ್ರಮಣ ಗೌಡ, ಶ್ರೀ ದಂಬೇಕೊಡಿ ಆನಂದ ಹಾಗೂ ಸಮಾವೇಶ ಸಂಘಟಕರು.

Kodagu Sangathi Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.